ಬೆಲೆ: ಎರಡು ಆಣೆ

ಕರ್ಮವೀರ

ಸಂಪಾದಕರು :
ಹ. ರಾ. ಪುರೋಹಿತ ಎಂ. ಎ.

—ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ—

Editor:
H. R. Purohit, M. A.

—(ಸಂಪುಟ ೧೯)— ಹುಬ್ಬಳ್ಳಿ ಸೋಮವಾರ ತಾರೀಖು ೨೫-೮-೧೯೪೭ —(ಸಂಚಿಕೆ ೨೦)—

ಇಂಡೋನೇಶಿಯದಲ್ಲಿ ಡಚ್ಚರ ವಿಚಿತ್ರ ವರ್ತನೆ

ಡಚ್ಚರ ಪ್ರಥಮ ಪಲಾಯನ—ಪುನಃ ಪ್ರವೇಶ—ಸಾಮ್ರಾಜ್ಯದಾಹ—ಒಪ್ಪಂದ ಮತ್ತು ವಿಶ್ವಾಸಭಂಗ-ಭಾರತದ ದೂರು-ರಾಷ್ಟ್ರಸಂಘದ ಕರ್ತವ್ಯ

ಜಪಾನರು ದಾಳಿಗಾರಂಭಿಸಿದಾಗ ತಮ್ಮ ಆಳಿಕೆಗೊಳಗಾದ ಇಂಡೊನೇಶಿಯನ್ನ ರನ್ನು ಅಸಹಾಯ ಸ್ಥಿತಿಯಲ್ಲಿ ಬಿಟ್ಟು ಪಲಾಯನಸೂತ್ರವನ್ನು ಪಠಿಸಿ, ಯುದ್ಧಾನಂತರ ಕಷ್ಟಕಾಲದಲ್ಲಿ ಹಾಗೂ ಹೀಗೂ ಕೊಳಲಿ ಬಳಲಿ ಒಂದು ಸ್ವತಂತ್ರದಶೆಗೆ ಬಂದು ಮುಟ್ಟಿದ್ದ ಅವರ ಸ್ವಾತಂತ್ರ್ಯಹರಣ ಮಾಡಲು, ಡಚ್ಚರು ಓಡಿ ಬಂದರು. ಆದರೆ ಘಟುವೆ ಮಧ್ಯಸ್ಥಿಕೆ ನಡೆದು ಒಪ್ಪಂದವಾಯಿತು. ಆದರೇನು? ಸಾಮ್ರಾಜ್ಯದಾಹತಪ್ತರಾದ ಡಚ್ಚರು ಪುನಃ ಇಂಡೋನೇಶಿಯನ್ನರೊಡನೆ ಕಲಹವಾರಂಭಿಸಿ, ಅವರ ನಾಡನ್ನು ಸ್ಮಶಾನ ಸದೃಶವನ್ನಾಗಿ ಮಾಡಿದರು. ಇದನ್ನು ಪ್ರತಿಭಟಿಸಿ ಭಾರತ ಸರಕಾರವು ರಾಷ್ಟ್ರಸಂಘಕ್ಕೆ ದೂರು ಕೊಟ್ಟು, ಅಲ್ಲಿಂದ ಯುದ್ಧ ನಿಲ್ಲಿಸುವ ಅಪ್ಪಣೆ ಬರುವಂತೆ ಮಾಡಿತು. ಈಗ ಯುದ್ಧ ನಿಂತಿದೆ. ಆದರೆ ಡಚ್ಚರ ಆಕ್ರಮಣಬುದ್ಧಿ ತಣಿದಿದೆಯೆನ್ನಬರುವಂತಿಲ್ಲ. ಆದುದರಿಂದ ರಾಷ್ಟ್ರಸಂಘವು ಶುದ್ಧ ಧಾರ್ಮಿಕ ದೃಷ್ಟಿಯಿಂದ ಪರಿಶೀಲಿಸಿ ದುರ್ಬಲ ರಾಷ್ಟ್ರಗಳ ಸ್ವಾತಂತ್ರ್ಯವನ್ನು ಕಾಪಾಡಬೇಕೆಂದು ಮಾನ್ಯ ಲೇಖಕರಾದ ಪಂಡಿತ ಮುಳಿಯ ತಿಮ್ಮಪ್ಪಯ್ಯನವರು ಪ್ರತಿಪಾದಿಸುತ್ತಾರೆ.

ಪಲಾಯನಸೂತ್ರ

ಇತ್ತೀಚೆಗೆ ಇಂಡೋನೇಶಿಯದಲ್ಲಿ ಡಚ್ಚ ಸರಕಾರವು ಪ್ರಯೋಗಿಸಿದ ವಿಚಿತ್ರ ರಾಜನೀತಿಯನ್ನೊಮ್ಮೆ ಪರಾಂಬರಿಸಬೇಕು.

ಇನ್ನೂ ತಮ್ಮ ಚಕ್ರಾಧಿಪತ್ಯದ ಕನಸನ್ನು ಹರಿದೊಗೆಯಲಾರದ ಡಚ್ಚರಿಗೆ- ತಾವು ಜೀವಿಸುವುದೀಗ ೨೦ ನೆಯ ಶತಮಾನದ ಮಧ್ಯಭಾಗವೆಂಬುದು ಮರೆದು ಹೋಗಿರಬೇಕೆಂದು ಭಾವಿಸಬೇಕಾಗಿದೆ. ಹಾಗಿಲ್ಲವಾದರೆ, ಇಂಥ ದುರ್ವರ್ತನೆಗೂ ಕಣ್ಣುಮುಚ್ಚಿ ಕೈಹಾಕುವರೇನು? ಹಿಂದಿನ ಯುದ್ಧಾವಸರದಲ್ಲಿ ಜಪಾನರು ಮುಂಬರಿದು ದಾಳಿಯಿಟ್ಟರು. ಆಗ ತಮ್ಮ ಅಧಿಕಾರದೊ[illegible] ಪ್ರಜಾವರ್ಗವನ್ನೆಲ್ಲ ಆ ಜಪಾನರ [illegible] ಬಲಿಗೊಟ್ಟು ಪಲಾಯನ ಸೂತ್ರವನ್ನು ಪಠಿಸಿದ ಪಂಡಿತರಿವರು. ಅಂದೊಮ್ಮೆ ಇವರ ಚಕ್ರಕ್ಕೂ ಆಧಿಪತ್ಯಕ್ಕೂ ಒಟ್ಟಿಗೆ ತಿಲಾಂಜಲಿಯಾಯಿತು. ಹೌದು, ಇವರು ಓಡಬಹುದು, ಅವರು ಓಡುವದಾದರೂ ಎಲ್ಲಿಗೆ? 'ಗೋಡೆಬಿದ್ದರೆ ಜಗಲಿಯ ಮೇಲೆ' ಎಂಬಂತಾದರು. ಜಪಾನರೊಡನೆ ತಾತ್ಕಾಲಿಕವಾಗಿ ಒಂದಿಷ್ಟು ಸೇರಿಯೋ, ಸೇರದೆಯೋ, ಇಂಡೋನೇಶಿಯದ ನಾಯಕರು ಡಚ್ಚರ ಕಾಲದಲ್ಲಿ ತಾವು ಅನುಭವಿಸುತ್ತಿದ್ದ ಕನಿಷ್ಠಾವಸ್ಥೆಯನ್ನು ಹರಿದೊಗೆದರು. ಮತ್ತೆ ಜಪಾನರ ಪತನವಾಯಿತು. ಈ ಅಣ್ಣಂದಿರು ಪುನಃ ಪ್ರವೇಶವೆಸಗಿದರು. ಈ ಡಚ್ಚರು ಇಂದಿಗೂ ಇಂಡೋನೇಶಿಯದ ಜನತಾಪ್ರಿಯ ನಾಯಕರನ್ನು ಮನವಾರೆ ತೆಗಳುತ್ತಾರೆ; ವಿಶ್ವಾಸಾನರ್ಹರು ಎಂದು ಸಾರುತ್ತಾರೆ. ಆದರೆ ಆ ತೆಗಳಿಕೆಗೆ, ಅಪನಂಬುಗೆಗೆ ನಿಜವಾಗಿಯೂ ಪಾತ್ರರೆಂದರೆ ಡಚ್ಚರೇ ಎಂಬುದು ಪ್ರಪಂಚಕ್ಕೆ ಈಗ ಮನವರಿಕೆಯಾಗಿದೆ. ಮಾತ್ರವಲ್ಲ, ಶ್ರೀ ಡಾ. ಸೊಯೆಕಾರ್ನೋ, ಡಾ. ಶಾರೀರ್ ಮೊದಲಾದವರೆಂದರೆ ಆಧುನಿಕ ರೀತಿಯಲ್ಲಿ ಸುಸಂಸ್ಕೃತ-ದೇಶಭಕ್ತ ನಾಯಕರು, ಅತ್ಯುತ್ತಮರು ಎಂಬುದು ಹಲವರಿಗೆ ಮಂದಟ್ಟಾಗಿದೆ.

ಇಂಡೋನೇಶಿಯದೊಡನೆ ಒಪ್ಪಂದ

ಅದಂತಿರಲಿ, ಪುನಃ ಪ್ರವೇಶವೆಸಗಿದ, ಡಚ್ಚರ, ಆ ಮೊದಲಿನ ದಬ್ಬಾಳಿಕೆಯ ಹಿಡಿತಕ್ಕೆ ಇಂಡೋನೇಶ್ಯದವರು ಬಾಗಲಿಲ್ಲ; ಹೊಯ್ಕೈಗೆ ಮೊದಲಾಯಿತು. ಆಗ ಆ ದೇಶೀಯರ ಬಲವನ್ನಡಗಿಸಲು ಮಿತ್ರರಾದ ಇಂಗ್ಲೀಷರ ಸೇನೆಯೂ ಡಚ್ಚರಿಗೆ ನೆರವಾಗಿತ್ತು. ಇಂಗ್ಲೀಷ್ ಸೇನೆಯೆಂಬ ಹೆಸರಿನಲ್ಲಿ ಅಲ್ಲಿದ್ದುದು ಇಂಡಿಯದ ಸೈನ್ಯವೇ[illegible] ಆಗ ನಿಜವಾಗಿ ಇಂಡಿಯದ ಎದೆಬಾಯಿ[illegible]ಲ್ಲದ್ದ ಅಸಮ್ಮತಿ ಕೈಗೀಡಿರಲಿಲ್ಲ. ಕಡೆಗೇ ಇಂಗ್ಲಿಷರೂ ತಮ್ಮ ಸೇನೆಯನ್ನು— ಬಹುಶಃ ಮನಸ್ಸಿಲ್ಲದ ಮನಸ್ಸಿನಿಂದ— ಹಿಂದಕ್ಕೆಳೆಯಬೇಕಾಯಿತು. ಆ ಮೇಲೆ ಡಚ್ಚರಿಗೂ ಇಂಡೊನೇಶ್ಯದವರಿಗೂ ಒಂದು ಒಪ್ಪಂದವಾಯಿತು. ಆ ಒಪ್ಪಂದದಂತೆ ಇಂಡೊನೇಶ್ಯದ ಪ್ರಜಾಸತ್ತಾತ್ಮಕ ರಾಜ್ಯಪದ್ಧತಿಯನ್ನು ಮಿತ್ರ ರಾಷ್ಟ್ರಗಳೆಲ್ಲ ಒಪ್ಪಿದುವು; ಅನ್ಯೋನ್ಯವಾಗಿ ರಾಯಭಾರಿಗಳನ್ನು ನೆಲೆಗೊಳಿಸಿದರು.

'ಮೆಚ್ಚದಗಂಡನಿಗೆ ಮೊಸರಲ್ಲಿ ಕಲ್ಲು'

'ಮೆಚ್ಚದ ಗಂಡನಿಗೆ ಮೊಸರಲ್ಲಿ ಕಲ್ಲು' ಎನ್ನುವುದು ಗಾದೆಯ ಮಾತು. ಮೊಸರಲ್ಲಿ ಕಲ್ಲು ಕ್ರಮಬದ್ಧವಿನಾದರೂ ಕಾರಣವಿದೆಯೆ? ಇಲ್ಲ. ಪದು . ದುರಾಚಾರಿಯಾದ ಗಂಡನಿಗೆ, ಹೇಗಿದ್ದರೂ ಹೆಂಡತಿಯ ಮೇಲೆ ತಪ್ಪನ್ನು ಹೊರಿಸಬೇಕಾಗಿದೆ; ಆಕೆಯನ್ನು ಮನೆಯಿಂದ ಹೊರಡಿಸಬೇಕಾಗಿದೆ; ಆದರಿಂದಲೇ ಅಂಥ ಅಲ್ಲದ ಸಲ್ಲದ ಆರೋಪ; ಇದರಂತೆ ಡಚ್ಚರ ಮಾತು ಕೇವಲಾಗಲಾರಂಭಿಸಿತು. ಹಿಂದಿನ ನಿಯಮಕ್ಕೆ ವಿರುದ್ಧವಾಗಿ, ನಿಮ್ಮ ನಮ್ಮ ದಿುಶ್ರ ಪೋಲೀಸ್ ದಳವನ್ನು ಊರಲ್ಲಿ ನೆಲೆಗೊಳಿಸಬೇಕು" ಎಂದರು; ಅದಕ್ಕವರು ಒಪ್ಪಲಿಲ್ಲ. ಡಚ್ಚರಿಗೆ ಬೇಕಾದುದೂ ಅಷ್ಟೆ 'ಈ ವಾದವನ್ನು ಸಿದ್ಧಾಂತಿಸಲು ಮಿತ್ರ ಜನಾಂಗಕ್ಕೊಪ್ಪಿಸುವ' ಎಂದು ಇಂಡೊನೇಶಿಯವು ಸಾರಿ ಹೇಳಿದರೂ ಡಚ್ಚರು ಗಣಿಸಲಿಲ್ಲ. 'ನಮ್ಮ ಅಧಿಕಾರದ ಮನೆಜಗಳದಲ್ಲಿ ಅನ್ಯರಿಗೇನು ಹಕ್ಕು? ಎಂದು ಹೇಳಿದುದಷ್ಟೇ ಅಲ್ಲ; ಇಂಡೊನೇಶಿಯದ ಮೇಲೆ ದಾಳಿ ಹರಿದರು; ಆ ನಾಡನ್ನೇ, ಗುಂಡು ಬಾಂಬುಗಳಿಂದ ಸ್ಮಶಾನವನ್ನಾಗಿ ಮಾಡಿದರು. ಇಂಡೊನೇಸಿಯಾ ಎಂದರೆ, ಒಪ್ಪಂದಕ್ಕನುಸರಿಸಿ, ತನ್ನ ಹರಿತ ಮುರುಕಿನ ಯುದ್ಧ ಸನ್ನಾಹವನ್ನೂ ಬಿಟ್ಟು ತಟಸ್ಥವಾಗಿತ್ತು. ಮನಸ್ಸಿನಲ್ಲೊಂದು ಕಾರ್ಯದಲ್ಲಿನ್ನೊಂದಾಗುವ ಈ ವಿಚಿತ್ರ ವರ್ತನೆಯ ಅವಿನಯ ಸ್ವರೂಪವನ್ನು ಅವರೆಲ್ಲಿ ಬಲ್ಲರು? ನಮ್ಮ ಏಶ್ಯನ್ ಜನಾಂಗದ ಶಾಖೆಯವರಲ್ಲಿ ಕುಟಿಲತೆ ಇಲ್ಲ. ಏಶ್ಯನ್-ಜನಾಂಗಾಧಿವೇಶನಾಂತ್ಯದಲ್ಲಿ. ಸಾಮೂಹಿಕವಾಗಿ ನಮ್ಮ ಉದ್ದೇಶವನ್ನು ಮಹಾತ್ಮರೇ ಸೂಚಿಸಿದ್ದಾರೆ. ಅದಕ್ಕೆ ಒಂದಿಷ್ಟಾದರೂ ವಿರೋಧವನ್ನು ಇಂಡೊನೇಶಿಯವು ಆಚರಿಸಲೂ ಇಲ್ಲ. ಡಚ್ಚರ ಈ ದುರಾಚಾರದ ದೂರನ್ನು ತುಂಬಿದ ಮಿತ್ರ ಜನಾಂಗ ಸಂಘದ ಸಭೆಯಲ್ಲಿ ಮೊನ್ನೆ ಅಸ್ಟ್ರೇಲಿಯದ ಪ್ರತಿನಿಧಿಗಳೇ ತಂದರು. ಇಂಡಿಯದವರು ಅನುಮೋದಿಸಿ ಮುಶ್ಯಾದಿಗಳ ಪ್ರತಿನಿಧಿಗಳು ಸಮರ್ಥಿಸಿದರು. ಆಗ ಈ ಡಚ್ಚ ಪ್ರತಿನಿಧಿಗಳ ಉತ್ತರವೇನು? ಗಂಟೆಗೊಂದೇ ಸ್ವರ ಎಂಬಂತೆ ಆ ಬಡ ಇಂಡೋನೇಶಿಯದ ಮೇಲೆ ಹಿಂದಣ ಬೈಗಳಿನ ಮಂತ್ರಾಕ್ಷತೆಯನ್ನೆರಚಿದರು. ನಮ್ಮ ಇಂಗ್ಲಂಡು-ಫ್ರಾನ್ಸು-ಅಮೇರಿಕೆಗಳ ಮಾನ್ಯಪ್ರತಿನಿಧಿಗಳೆಂಬವರೂ ಮೆಲ್ಲನೆ ತಮ್ಮ ನಿಷ್ಪಕ್ಷಪಾತ ದೃಷ್ಟಿಯನ್ನು ಹರವುತ್ತ ಡಚ್ಚರ ಹುಚ್ಚ ಪ್ರೇರಣೆಗೇ ಕೈನೀಡುವುದೇ? ಹೌದು, ಇವರು ನಮ್ಮ ಏಶ್ಯನ್—ಭೂಗೋಳ ಪತ್ರದ ಮೇಲೆ ಚೆಲ್ಲಿ ಚಿತ್ತಾದ ಮಸಿ ಇನ್ನೂ ಒಣಗಿಲ್ಲ. ಅದನ್ನು ಒಣಗಿಸಿ-ಅದರಲ್ಲೇನೂ ದೋಷತಂತ್ರಗಳಿಲ್ಲ, ನಿರ್ದುಷ್ಟವಾದ ಅಕ್ಷರ-ಪದ-ವಾಕ್ಯಗಳೇ-ಎಂದು ಕಾಣಿಸುವ ಸಾರುವ, ಪ್ರಯತ್ನಗಳೊಳಗೆ ಒಂದಿದು. ಆಗಲಿ ಸ್ವಾಮಿ, ಆಗಲಿ; ಕಾಗೆಯ ಕಾಲು, ಹಾರುವಲ್ಲಿ ಕಾಣದಿರುವುದೆ?

ಆದರೇನು? 'ವಿಸ್ತಾರಾ ಪೃಥಿವೀ ಜನಾಶ್ಚ ವಿವಿಧಾ;' ಎಂಬ ಮಾತಿಗೆ ಹುಸಿಯುಂಟೆ? ಬಹುಮತಾನುಸಾರವಾಗಿ, ಇಂಡೊನೇಶಿಯದ ಈ ಅವಿನಯ ಯುದ್ಧವನ್ನು ಕೂಡಲೆ ನಿಲ್ಲಿಸಬೇಕೆಂಬ ಮಸೂದೆ ಸ್ವೀಕೃತವಾಯಿತು. ಇಕ್ಕಡೆಯವರಿಗೂ ನಿರ್ಣಯವದು ಕೂಡಲೆ ತಿಳಿಸಲ್ಪಟ್ಟಿದೆ. ಆದರೂ ಅದನ್ನು ಅದಷ್ಟು ಮುಂದೆಳೆವ ಒಳಗೈನುಸುಳುವಂತಿದೆ. ಈ ಕೈಗಳೊಳಗೆ ಹಲವೆಲ್ಲ "ತನ್ನಂತೆ ಪರರನ್ನೀಕ್ಷಿಸು" ಎಂದು ಪ್ರಪಂಚಕ್ಕೆ ಅಮರವಾಣಿಯನ್ನೀ ಸಾರುವ ಕ್ರೈಸ್ತಧರ್ಮೀಯರು. ಇಂಥವರು ಹೀಗೆ ಮಾಡುತ್ತಾ ಹಾಗಾಡುವುದೆಂದರೆ ಗಿಳಿಯ ಬಾಯಿ ಪಾಠಕ್ಕೂ ಕಡೆಯಾಗುವುದಲ್ಲವೆ?

ಡಚ್ಚರ ದುರುದ್ದೇಶ

ಈ ಡಚ್ಚರೇ ಮೊದಲಾದವರ ಧಾರ್ಮಿಕ ಚಕ್ರಾಧಿಪತ್ಯ ಪರಿಪಾಲನೈಪಣ್ಯತೆಯು, ಈ ವರೆಗೆ ಹೊರಗಿನ ಪ್ರಪಂಚಕ್ಕೆ ಗೊತ್ತಾಗಿರಲಿಲ್ಲ. ಗಂಭೀರವಾದ ನೀರೊಳಗೇ ಮೊಸಳೆಯ ಚಕ್ರಾಧಿಪತ್ಯವು ಸರಾಗವಾಗಿ ಸಾಗುವಂತಿತ್ತು. ಈಗ ಮೊಸಳೆಯದು ಮರಳಿನ ಮೇಲಾಗಿ ಸುತ್ತಮುತ್ತಣವರ ಕುತೂಹಲಿಕ ದೃಷ್ಟಿಗೆ ಪಕ್ಕಾಗಿದೆ.

ಈ ಸಂಗತಿಯ ನಿಜಸ್ಥಿತಿಯನ್ನು ಇದೇ ಅಗಸ್ಟ ೫ನೇ ತಾರೀಕಿನ ಹಿಂದೂ ಪತ್ರಿಕೆಯ ೫ನೆ ಪುಟದಲ್ಲಿ ಪ್ರಕಟವಾದ ಡಚ್ಚ ಅಧಿಕಾರಿಗಳೊಬ್ಬರ ಹೇಳಿಕೆಯಿಂದಲೇ ತಿಳಿಯಬಹುದಾಗಿದೆ. ಸುಮಾತ್ರದ ತಮ್ಮ ಮನೆಯಲ್ಲಿ ಶ್ರೀ ಡಾ. ಜೆ. ವಾನ್‌ಡರ್ ವೆಲ್ಡೆ ಎಂಬ ಅಧಿಕಾರಿಗಳು, ಅಮೇರಿಕದ ಎಸೋಸಿಯೇಟೆಡ್ ಪ್ರೆಸ್ಸಿನ ಪ್ರತಿನಿಧಿಗಳಲ್ಲಿ ಹೀಗೆ ಹೇಳುತ್ತಾರೆ:—

"ಡಚ್ಚರು ಇಂಡೊನೇಶಿಯದವರಲ್ಲಿ ಈ ಯುದ್ಧವನ್ನು ಸಾರಿದುದು ಬೇರಾವುದಕ್ಕೂ ಅಲ್ಲ. ಇಂಡೊನೇಶಿಯದ ಅತಿಫಲವತ್ತಾದ ಪ್ರದೇಶಗಳ ಅಧಿಕಾರದಲ್ಲಿ ಹಿಂದಿನಂತೆ ಮುಂದೆಯೂ ಕೈ ಇಲ್ಲವಾದರೆ ಡಚ್ಚರು ಬೇಗನೆ ದಿವಾಳಿಯಾಗಿ ಬಿಡುವರು" ತಮಗೊದಗಿರುವ ಇಂಥ ಸಂಕಷ್ಟವನ್ನು ನಿವಾರಿಸಲಿಕ್ಕೆ ಈ ಮಾರ್ಗವನ್ನು ಕಂಡುಹಿಡಿದುದರಲ್ಲಿ ಏನೇನೂ ಅವಿನಯವಿಲ್ಲವೆಂದು ಸಾಹೇಬರ ಭಾವನೆಯಾಗಿ ತೋರುತ್ತಿದೆ. ಸಾಹೇಬರು ತಮ್ಮ ಡಚ್ಚ ಜನಾಂಗದ ಈ ಯುದ್ಧೋದ್ದೇಶವನ್ನು ಇನ್ನಷ್ಟು ಸರಿಯಾಗಿ ವಿಸ್ತರಿಸುತ್ತಾರೆ:—

"ಇಷ್ಟು ದೊಡ್ಡ ದ್ವೀಪದೊಳಗೆ ನಮ್ಮ ಡಚ್ಚರ ಗುರಿ ಎಂದರೆ ಬಲು ಚಿಕ್ಕದು. ಅದೂ ಪ್ರಮುಖವಾಗಿ ಟೀ-ರಬ್ಬರ್-ತಂಬಾಕು-ತೆಂಗಿನ ಮರಗಳ ಪ್ರದೇಶಗಳುಳ್ಳ ಬಡಗು-ಮೂಡಣ ಸಮುದ್ರ ಕರಾವಳಿಯನ್ನೂ ಮತ್ತು ಎಣ್ಣೆಗಣಿಗಳ 'ಪಲೆಂಬಂಗ್' ಎಂಬ ತೆಂಕು-ಮೂಡಣ ಕರಾವಳಿಯನ್ನೂ ಹೊಂದಿಕೊಂಡಿದೆ."

ಸಾಹೇಬರ ಮಾತಿನಲ್ಲಿ ಡಚ್ಚರು ಯುದ್ಧ-ಸಾರದಿದ್ದರೆ ಆ ತಮ್ಮ ಜನಾಂಗಕ್ಕೆ ಒದಗಬಹುದಾದ ದುರವಸ್ಥೆ, ಇಷ್ಟು ದೊಡ್ಡ ಭೂಭಾಗದಲ್ಲಿ ತಮಗೆ ಬೇಕಾದ ಅತಿ ಸ್ವಲ್ಪ ಭಾಗದ ಸೂಚನೆ ಇವೆಲ್ಲ ಎಷ್ಟು ಸ್ಫುಟವಾಗಿ ಚಿತ್ರಿತವಾಗಿ ನೋಡಿರಿ. ಈ ಭಾಗವನ್ನು ಅಚಂಚಲ್ಯವಾಗಿ ತಮ್ಮ ವಶಕ್ಕೆ ಮುಂದೆ ವಿಚಾರವನ್ನು ಬರುವ ಮಿತ್ರ ಜನಾಂಗ ಸಮಿತಿಯು[illegible]ನ್ನು ಕೊಡಬೇಕೆಂಬ ಸೂಚನೆಯಾಗಿ [illegible]ಯಿಂದ ವೈಜ್ಞಾನಿಕ ಸಾಧನಗಳಿಂದ [illegible]ಗಳಿಗೆ ಗಳಾದ ತಮ್ಮ ಹುಟ್ಟೂ[illegible] ಹುರಿದೆ [illegible]ಎಕ್ಕ ಸ್ಥಾನಗಳನ್ನೂ ಭವಿಸಲು ಮೊದಲು ಇಂಡೊನೇಶಿಯದ ಜಪರೀಸ್ಥಾಯಬದ್ಧರೋ, ಈ ಪರಕೀಯರೋ? ಮಾತಿನ ಬಣ್ಣ-ನುಣುಪು-ಅಂದ-ಚಂದಗಳ ಕಾಲ ಕಳೆದು ಹೋಯಿತು. ತಮ್ಮ ಕಾಲಲ್ಲಿ ತಾವು ನಿಂತು ಬಾಳಬೇಕೆಂಬ ಭಾವನೆ ಏಶ್ಯನ್-ಜನಾಂಗಕ್ಕೀಗ ನೆಲೆಗೊಂಡಿದೆ. ಪ್ರಪಂಚವೇ ಒಪ್ಪಿ ಮಾಡಿದ ಸಂಘಾನಕ್ಕೆ ತಪ್ಪಿ, ಊರವ[illegible]ಸುವವರಿಗೆ ಹೀಗೆ ತಮ್ಮ ಸಂಕಷ್ಟವನ್ನು[illegible] ಸುವ ಮೃದು ಭಾವನೆಯಾದರೂ [illegible] ಬಂದುದೋ ತಿಳಿಯದು. ಹೌದು, ದಾರ[illegible] ವುದೆ? ಬೆಣ್ಣೆಯಾದರೂ ಕರಗಲಿಕ್ಕೆ ಬಿಸಿ ಹತ್ತಬೇಕಂತೆ.

ಭಾರತದ ನೀತಿ

ಇಷ್ಟು ಬೇಗನೆ ಇಂಡೊನೇಶಿಯದ ಈ ಗಲಭೆ ಸಂಪುಟದೊಳಗೆ ಬರುವಂತೆ ಮಿತ್ರ ಜನಾಂಗ ಸಂಘದಲ್ಲಿ ಸೂಚನೆಯನ್ನು ತಂದುದು ಅಸ್ಟ್ರೇಲಿಯದ ಪ್ರತಿನಿಧಿಗಳು ಎನ್ನುವ. ಅವರೂ ಬೇಗನೆ ಅಧಿಕಾರಾಪನ್ನರಾಗಿ ರೂಪಿತವಾಗಲಿರುವ ನಮ್ಮ ಪಾಕಿಸ್ಥಾನ-ಇಂಡಿಯಗಳ ಮುಖಂಡರು ಈ ಸಂದರ್ಭದಲ್ಲಿ ಏಕರಥಾರೋಪಣವೆಸಗಿದುದೂ ಶ್ರೀ ಪಂಡಿತ ಜವಾಹರಲಾಲರು ನಮ್ಮ ಪ್ರತಿನಿಧಿಗಳ ಮೂಲಕವಾಗಿ ಸೂಚನೆಗೆ ಪ್ರಬಲವಾದ ಅನುಮೋದನೆಯನ್ನು ಕೊಡಿಸಿದುದೂ ಆನಂದದ ಸಂಗತಿ. ನಮ್ಮೊಳಗೆ ಕಾಂಗ್ರೆಸ್-ಮುಸ್ಲಿಮ್ ಲೀಗುಗಳಲ್ಲಿ ಬಹಳ ಭಿನ್ನ ಭಾವನೆ ಇದೆ. ಮುಂದೆ ಅವುಗಳು ಮುಗಿಯದ ವಿರೋಧಿಗಳಾಗುವವು ಎಂದು ಆನಂದಗೊಳ್ಳುತ್ತಿದ್ದವರು ಒಂದಿಷ್ಟು ನಿರಾಶರಾಗಲೂ ಬಹುದು. ಆಗಲಿ; ನಮ್ಮ ಭಾರತೀಯರ ಉಜ್ವಲ ರಾಜನೀತಿಯ ಸ್ವರೂಪವೆಂಥದು ಎಂಬುದನ್ನು ಪರಾಂಬರಿಸಲಿ.

ಈ ಸಂದರ್ಭದಲ್ಲಿ ನಮ್ಮ ಏಶ್ಯನ್—ಜನಾಂಗದ [illegible] ಜನಾಂಗ ಸಂಘಕ್ಕೆ ಒಂದು [illegible] ಕೊಡಲು [illegible]

ಸಮ್ಮಿಶ್ರ ಮಂತ್ರಿಮಂಡಲ

ಯಾವುದೊಂದು ಸರಕಾರ ಸುಸೂತ್ರವಾಗಿ ಆಡಳಿತವನ್ನು ಸಾಗಿಸಬೇಕಾದರೆ ಆ ಸರಕಾರದ ಸೂತ್ರಚಾಲಕರಲ್ಲಿ ಐಕ್ಯವಿರುವದವಶ್ಯವೆಂದು ಬೇರೆ ಹೇಳಬೇಕಿಲ್ಲ. ಧ್ಯೇಯ ಧೋರಣಗಳಲ್ಲಿ ಭಿನ್ನಾಭಿಪ್ರಾಯ ಹೆಚ್ಚಿದ್ದರೆ ಅಲ್ಲದೆ ಐಕ್ಯ ವಿಲ್ಲದಿದ್ದರೆ ಆಡಳಿತ ಯಂತ್ರವು ಕ್ರಮಬದ್ಧವಾಗಿ ಸಾಗಲಾರದು. ಕೇಂದ್ರ ಅಂತರಾಳ ಮಂತ್ರಿ ಮಂಡಳದಲ್ಲಿ ಈ ಬಗೆಯ ಐಕ್ಯಮತ್ಯವಿದ್ದರೂ

—ಏನೇ ಇರಲಿ

ಕರ್ನಾಟಕದ ಇತಿಹಾಸದಲ್ಲಿ ಸ್ವಾತಂತ್ರ್ಯ ಸಂಗ್ರಾಮಗಳು

ಶ್ರೀ. ರಾ. ಸ್ವಾ. ಪಂಚಮುಖಿ
ಎಂ. ಎ. ಅವರಿಂದ

ಹಿಂದುಸ್ಥಾನವು ಬಹು ಪ್ರಾಚೀನಕಾಲದಿಂದಲೂ ಸ್ವತಂತ್ರ ರಾಷ್ಟ್ರವೆಂದು ಆಳುತ್ತ ಬಂದಿದ್ದರೂ ಸುಮಾರು ೧೩ ನೆಯ ಶತಮಾನದಲ್ಲಿ ಪರಧರ್ಮೀಯರ ಆಕ್ರಮಣದಿಂದ ಅದರ ಭೌತಿಕ ಮತ್ತು ಅದರ ಆಧ್ಯಾತ್ಮಿಕ ಬಲವು ಕುಂದುತ್ತ ಬಂತು. ಮುಸಲ್ಮಾನ ಮಂಡಲಾಧಿಪತಿಗಳು ದಕ್ಷಿಣಾಪಥದಲ್ಲಿಯೂ ಕಾಲು ಚಾಚಿದರು. ಕ್ರೈಸ್ತರು ವ್ಯಾಪಾರಕ್ಕಾಗಿ ಭಾರತ ವರ್ಷದಲ್ಲಿ ಚಂಚುಪ್ರವೇಶಮಾಡಿ ಅಲ್ಲಿಯ ರಾಜಮನೆತನಗಳ ವ್ಯವಹಾರಗಳಲ್ಲಿ ತಮ್ಮ ಸ್ವಾರ್ಥಸಾಧನೆಗೆ ಕೈಹಾಕಿದರೂ ಹಿಂದೀಯರಲ್ಲಿ ಧೈರ್ಯ ಸ್ಥೈರ್ಯ ಶೌರ್ಯಾದಿಗುಣಗಳು ಕಡಿಮೆಯಾಗುತ್ತ ಬಂದದ್ದರಿಂದ ಪರದೇಶೀಯರಿಗೆ ಇಲ್ಲಿಯ ರಾಜ್ಯಭಾರದಲ್ಲಿ ಭಾಗವಹಿಸಲು ಅವಕಾಶ ಸಿಕ್ಕಿತು. ಕಡೆಗೆ ಸ್ವತಂತ್ರ ಪ್ರಭುಗಳೆಂದು ಅನಾದಿಯಿಂದ ಮೆರೆಯುತ್ತಿದ್ದ ಹಿಂದೂ ಜನರು ರಾಜ್ಯತಂತ್ರದಲ್ಲಿಯೂ ಪರಾಧೀನರಾಗಿ ಬಾಳುವ ಪ್ರಸಂಗ ಬಂದಿತು. ಈ ಪರಾಧೀನತೆಯನ್ನು ಕಿತ್ತೊಗೆಯಲು ಅಖಂಡ ಮಾನವಪ್ರಯತ್ನಗಳು ಈಗ ೬೦ ವರ್ಷಗಳಿಂದ ನಡೆದಿದ್ದರೂ ದೈವೀ ಬೆಂಬಲವಿಲ್ಲದೆ ಇದುವರೆಗೂ ಫಲಿಸಿರಲಿಲ್ಲ. ಜಗತ್ತನ್ನೇ ರಕ್ತದ ಮಡುವಿನಲ್ಲಿ ಕೆಡವಿ, ತನ್ನ ಸಂಕಲ್ಪಕ್ಕೆ ವಿಪರೀತವಾಗಿ ಅಸ್ತವ್ಯಸ್ತವಾಗಿ ಮೆರೆಯುತ್ತಿದ್ದ ರಾಷ್ಟ್ರಗಳನ್ನು ತಮ್ಮ ತಮ್ಮ ಯೋಗ್ಯತೆಗೆ ತಕ್ಕಸ್ಥಾನಕ್ಕೆ ನೇಮಿಸಬೇಕೆಂದು ಶ್ರೀ ಪರಮಾತ್ಮನು ಈ ಮಹಾಯುದ್ಧ ನಾಟಕವನ್ನು ಹೂಡಿ ಯೋಗ್ಯತೆ ಮೀರಿ ಬೆಳೆದಿದ್ದ ದುಷ್ಟರ ರೆಕ್ಕೆಗಳನ್ನು ಕತ್ತರಿಸಿ ಶಿಷ್ಟರನ್ನು ಪ್ರತಿಪಾಲಿಸಲು ಈಗ ತೊಡಗಿದ್ದಾನೆ. ಆ ಮಹಾಸಂಕಲ್ಪದ ಮೊದಲನೆಯ ಮೆಟ್ಟಿಲಾಗಿ ನಾಳೆ ಗುರುವಾರ ರಾತ್ರಿ ಅಮೃತಸಿದ್ಧಿಯೋಗದಲ್ಲಿ (೧೪—೮—೧೯೪೭ ಮಧ್ಯರಾತ್ರಿ) ಸ್ವತಂತ್ರರಾಜ್ಯದ ಸೂತ್ರಗಳು ಹಿಂದೀಯರ ಕೈಯಲ್ಲಿ ಬರುತ್ತಲಿವೆ. ಇಂಥ ಅಘಟಿತ ಘಟನೆಯ ವ್ಯಾಪಾರಗಳನ್ನು ದೇವರು ನಮ್ಮ ಅಭ್ಯುದಯಕ್ಕಾಗಿ ಅನೇಕ ಸಲ ಪ್ರಕಟಮಾಡಿದ್ದಾನೆ. ಅವುಗಳಲ್ಲಿ ಕರ್ನಾಟಕದ ಪ್ರಾಚೀನ ಚರಿತ್ರೆಗಳಿಂದ ಒಂದೆರಡನ್ನು ಇಲ್ಲಿ ಉದಾಹರಿಸುತ್ತೇನೆ.

೧. ಕ್ರಿ. ಶ. ಪೂ. ೩ ನೆಯ ಶತಮಾನದಲ್ಲಿ ಕರ್ನಾಟಕವು ಮೌರ್ಯರ ಅಂಕಿತಕ್ಕೆ ಒಳಪಟ್ಟಿತ್ತು; ಅಶೋಕಧರ್ಮ ಮಹಾರಾಜನ ಬಂಡೆ ಲೇಖಗಳೂ ಶಾಸನಗಳೂ ಸಿದ್ದಾಪುರ, ಜಟಿಂಗ ರಾಮೇಶ್ವರ, ಬ್ರಹ್ಮಗಿರಿ, ಕೊಪ್ಪಳಗಳಲ್ಲಿ ಸಿಕ್ಕಿವೆ. ಮೌರ್ಯರ ಮಾಂಡಲಿಕರಾದ ಆಂಧ್ರರು ಅಥವಾ ಶಾತವಾಹನರು ಕ್ರಿ. ಶ. ೧—೨ ಶತಮಾನಗಳಲ್ಲಿ ಈ ಭಾಗದ ರಾಜರಾದರು. ಅವರ ಅಧಿಕಾರಕ್ಕೊಳಪಟ್ಟು ಮಾಂಡಲಿಕರಾದ ಪಲ್ಲವರು ಕರ್ನಾಟಕದ ಎಲ್ಲ ಭಾಗಕ್ಕೂ ಅಧಿಪತಿಗಳಾದರು. ಪಲ್ಲವರು ತೊಂಡಮಂಡಲದ ರಾಜರು. ಮದ್ರಾಸದ ಹತ್ತಿರ ಇದ್ದ ಕಂಚಿಯು ಅವರ ರಾಜಧಾನಿಯಾಗಿತ್ತು. ಇಷ್ಟು ದೂರ ದೇಶದ ತಮಿಳುಭಾಷೆಯನ್ನಾಡುವ ಪಲ್ಲವರು ಕರ್ನಾಟಕದಲ್ಲಿ ರಾಜ್ಯಭಾರ ಮಾಡುವದು ಆಶ್ಚರ್ಯವೇ ಸರಿ. ಕರ್ನಾಟಕದಲ್ಲಿ ಶೂರಕ್ಷತ್ರಿಯ ಮನೆತನಗಳು ಧೀರದ್ವಿಜರ ಪಂಗಡಗಳು ವಿಶೇಷವಾಗಿರಲಿಕ್ಕೆ ಬೇಕು. ಅವರು ಸಮಯವನ್ನು ಸಾಧಿಸಿ ಪಲ್ಲವಬಲದಿಂದ ಪಾರಾಗಿ ಸ್ವತಂತ್ರರಾಗಲು ಹವಣಿಸುತ್ತಿದ್ದಿರಬೇಕು. ಇಂಥ ಸಮಯದಲ್ಲಿ ಒಬ್ಬ ಬ್ರಾಹ್ಮಣವಟು ಧೈರ್ಯದಿಂದ ಮುಂದೆಬಂದು ಪಲ್ಲವರನ್ನು ಚದುರಿಸಿ ಕನ್ನಡ ರಾಜ್ಯವನ್ನು ಮೊದಲು ಸ್ಥಾಪಿಸಿದನು. ಆ ದ್ವಿಜನು ಇತಿಹಾಸ ಪ್ರಸಿದ್ಧನಾದ ಮಯೂರಶರ್ಮನು.

ಸ್ಥಾನಕುಂದೂರಲ್ಲಿ ಪ್ರಸಿದ್ಧ ದ್ವಿಜಕುಲತಿಲಕನೆಂಬ ಹೆಸರಾದ ಮಯೂರಶರ್ಮನು ತನ್ನ ಗುರುವಾದ ವೀರಶರ್ಮನೊಂದಿಗೆ ಪಲ್ಲವೇಂದ್ರಪುರಿಯಾದ ಕಂಚಿಗೆ ಪ್ರವಚನವನ್ನು ಕಲಿಯಲಿಕ್ಕೆ (ಪ್ರವಚನಮಧಿ ಜಿಗಾಂಸುಃ) ಹೋದನು. ಕಂಚಿಯು ಆಗ ಪ್ರಸಿದ್ಧವಾದ ಘಟಿಕಾಸ್ಥಾನ (ವಿದ್ಯಾಪೀಠ) ವಾಗಿತ್ತು. ಒಂದು ದಿನ ಅಲ್ಲಿ ಅಶ್ವಮೇಧಯಾಗಕ್ಕೆ [illegible] ಧಕ್ಕೆಯುಂ[illegible] [illegible]ತನಾಗಿ ಹೊ[illegible] ಅಪಮಾನ [illegible] ಕಂಚಿಕೆ. [illegible] ಮತ್ತು ಸ್ಪರ್ಧೆಯಲ್ಲಿ ಬಹಳ ಹಿನ್ನಡೆ.

ವಿಜಿಗೀಷಮಾಣೋ ವಸುಂಧರಾಮ್ ॥" [ತಾಳಗುಂದ ಸ್ತಂಭ ಶಾಸನ] ಈ ಕಲಿಯುಗದಲ್ಲಿ ಬ್ರಾಹ್ಮಣ್ಯವು ಕ್ಷತ್ರನ ಮುಂದೆ ನಿಸ್ತೇಜವಾಯಿತಲ್ಲ! ಗುರುಕುಲಗಳಲ್ಲಿ ಯಥಾವಿಧಿ ವಾಸಮಾಡಿ ಸ್ವಶಾಖೆಯನ್ನು ಅಧ್ಯಯನ ಮಾಡಿದರೂ ಬ್ರಹ್ಮಸಿದ್ಧಿಯು ನೃಪರಿಗೆ ಅಧೀನವಾಗುವುದೆಂದರೆ ಇದಕ್ಕಿಂತ ದುಃಖದ ಸಂಗತಿಯಾವುದು?" ಹೀಗೆ ಗರ್ಜಿಸುತ್ತ ಆ ಬಡಬ್ರಾಹ್ಮಣನು ಕುಶಸಮಿಧಾದಿ ಯಜ್ಞಸಾಮಗ್ರಿಗಳನ್ನು ಹಿಡಿಯುವುದರಲ್ಲಿ ನುರಿತ ಕೈಯಲ್ಲಿ ಇಡೀ ಪೃಥ್ವಿಯನ್ನು ಜಯಿಸುವ ಮಹತ್ವಾಕಾಂಕ್ಷೆಯಿಂದ ಪ್ರಕಾಶಿಸುವ ಶಸ್ತ್ರವನ್ನು ಹಿಡಿದೆತ್ತಿದನು. ಯಜ್ಞಶಾಲೆಯಿಂದ ಹೊರಬಿದ್ದು ಅಡ್ಡಬಂದ ಶತ್ರುಗಳನ್ನು ಸಂಹರಿಸುತ್ತ ಪಲ್ಲವರಾಜ್ಯದ ಸೀಮಾಪಾಲಕರನ್ನು ಗೆದ್ದು ಕರ್ನೂಲ ಜಿಲ್ಲೆಯಲ್ಲಿದ್ದ ಶ್ರೀ ಪರ್ವತದ ಕಟ್ಟಡವಿಯಲ್ಲಿ ಕೆಲವು ಕಾಲ ನಿಂತು ಅಲ್ಲಿ ಯುದ್ಧ ಸನ್ನಾಹವನ್ನು ಮಾಡಿಕೊಂಡನು. ಬೃಹದ್ಬಾಣರೇ ಮೊದಲಾದ ಪಲ್ಲವ ಮಾಂಡಲಿಕರನ್ನು ಸೋಲಿಸಿ ಅವರಿಂದ ಕಪ್ಪವನ್ನೆತ್ತಹತ್ತಿದನು. ಇವನನ್ನು ಮಣಿಸಬೇಕೆಂದು ಪಲ್ಲವರು ದೊಡ್ಡ ಸೈನ್ಯದೊಂದಿಗೆ ಯುದ್ಧಕ್ಕೆ ಬಂದರು. ಆದರೆ ಮಯೂರಶರ್ಮನು 'ಭುಜಖಡ್ಗ ಮಾತ್ರವ್ಯಪಾಶ್ರಯನಾಗಿ ಅವರನ್ನು ಸೋಲಿಸಿದನು. ಅವರು ಕಡೆಗೆ ಗಾಬರಿಗೊಂಡು ಇಂಥ ವೀರನೊಡನೆ ವೈರವು ತಮಗೆ ಹಾನಿಕರವೆಂದು ಬಗೆದು ಅವನೊಡನೆ ಒಪ್ಪಂದಮಾಡಿಕೊಂಡರು. ಇದರಿಂದ ಪಶ್ಚಿಮ ಸಮುದ್ರದಿಂದ ಪ್ರೇಹಾರಾಂತದ ವರೆಗೆ (ಕರ್ನೂಲ ಜಿಲ್ಲೆ?) ವಿಸ್ತಾರವಾದ ರಾಜ್ಯಭಾಗಕ್ಕೆ ಮಯೂರಶರ್ಮನು ಸ್ವತಂತ್ರರಾಜನಾದನು. ಇವನ ಮನೆತನವು ಕದಂಬವಂಶವೆಂದು ಇತಿಹಾಸದಲ್ಲಿ ಪ್ರಸಿದ್ಧವಾಗಿದೆ. ಈ ಮನೆತನದ ರಾಜರು ಉತ್ತರ ಹಿಂದುಸ್ಥಾನದ ಗುಪ್ತವಾಕಾಟಕ ರಾಜರೊಂದಿಗೆ ಬಾಂಧವ್ಯವನ್ನು ಬೆಳೆಸಿ ಇಡಿಯ ಭಾರತವರ್ಷದ ರಾಜಕಾರಣದಲ್ಲಿ ಗಣ್ಯವಾದ ಸ್ಥಾನವನ್ನು ಪಡೆದರು. ಇವರು ಕ್ರಿ. ಶ. ೩೫೦ ರಿಂದ ೫೫೦ ರ ವರೆಗೆ ಅಖಿಲಕರ್ನಾಟಕಾಧಿಪತಿಗಳೆಂದು ಹೆಸರಾದರು. ಅಂತು ಏಕಾಕಿಯಾದ ಮಯೂರಶರ್ಮನ ಸ್ವಾತಂತ್ರ್ಯ ಸಂಗ್ರಾಮವು ಕರ್ನಾಟಕದ ಸ್ವಾತಂತ್ರ್ಯದ ಧ್ವಜವನ್ನು ಊರಿ ಕರ್ನಾಟಕ ಸಾಮ್ರಾಜ್ಯ ಸ್ಥಾಪನೆಗೆ ಎಡೆಮಾಡಿ ಕೊಟ್ಟಿತು.

೨. ಪಲ್ಲವರು ಕರ್ನಾಟಕದ ಮೇಲಿನ ತಮ್ಮ ಕಣ್ಣನ್ನು ಕಿತ್ತಲಿಲ್ಲ. ಹೇಗಾದರೂ ಮಾಡಿ ಅದನ್ನು ತಿರುಗಿ ಸೆಳೆದುಕೊಳ್ಳುವ ಹವಣಿಕೆಯಲ್ಲಿಯೇ ಇದ್ದರು. 'ಪಲ್ಲವ ಪ್ರಲಯಾನಲ'ರಾದ ಕದಂಬರು ಇದಕ್ಕೆ ಅನುವು ಕೊಟ್ಟಿದ್ದಿಲ್ಲ. ಕದಂಬರ ನಂತರ ಬಾದಾಮಿಯ ಚಾಲುಕ್ಯರು ಅಖಿಲಕರ್ನಾಟಕಾಧಿಪತಿಗಳಾದರು. ಅವರಲ್ಲಿ ೨ ನೆಯ ಪುಲಿಕೇಶಿಯು ಪ್ರಬಲರಾಜನು. ಅವನು ಪ್ರಭುಮಂತ್ರೋತ್ಸಾಹ ಶಕ್ತಿತ್ರಯ ಸಂಪನ್ನನಾಗಿದ್ದುದರಿಂದ ದಿಗ್ವಿಜಯ ಮಾಡಿ ಹರ್ಷವರ್ಧನನನ್ನು ಸೋಲಿಸಿ ಪರಮೇಶ್ವರನೆಂಬ ಬಿರುದನ್ನು ಪಡೆದು ಲಾಟ, ಕಲಿಂಗ, ಕೋಸಲ, ಕಟಿಚ್ಛೂರಿ ಮೊದಲಾದ ದೇಶಾಧೀಶ್ವರರನ್ನು ಪಾದಾಕ್ರಾಂತರನ್ನಾಗಿ ಮಾಡಿ ದಕ್ಷಿಣಕ್ಕೆ ಕಂಚಿಗೆ ಹೋಗುವಷ್ಟರಲ್ಲಿ ಅಲ್ಲಿಯ ಪಲ್ಲವ ರಾಜನು ಇವನ ಪ್ರತಾಪಕ್ಕೆ ಹೆದರಿ ಕಂಚಿಯ ಪ್ರಾಕಾರದಲ್ಲಿ ಅವಿತುಕೊಂಡು ಕೂತನು. ಪಾಂಡ್ಯ ಚೋಳ ಕೇರಳರನ್ನು ಪಲ್ಲವಬಂಧನದಿಂದ ಬಿಡಿಸಿ ಅವರ ಸಖ್ಯವನ್ನು ಪಡೆದನು. ಹೀಗೆ ಉಜ್ವಲವಾದ ದಿಗ್ವಿಜಯಂಗೈದು ['ಅಗಮದಧಿಪತಿತ್ವಂ ಯೋ ಮಹಾರಾಷ್ಟ್ರಕಾಣಾಂ। ನವನವತಿ ಸಹಸ್ರಗ್ರಾಮಭಾಜಾಂ ತ್ರಯಾಣಾಂ'] ೯೯೦೦೦ ಗ್ರಾಮಗಳುಳ್ಳ ಮಹಾರಾಷ್ಟ್ರಕ ತ್ರಯಗಳಿಗೆ ಅಧಿಪತಿಯಾದನು. ಆ ಮೇಲೆ ವಾತಾಪಿಯನ್ನು (ಬಾದಾಮಿಯನ್ನು) ಪ್ರವೇಶಿಸಿ ರಾಜ್ಯಾಭಿಷಿಕ್ತನಾದನು. ಈ ಪ್ರಭುವೇ ಕರ್ನಾಟಕದಲ್ಲಿ ಮೊದಲು ಸಾಮ್ರಾಜ್ಯ ಕರ್ತನು. ಗುಜರಾತ ಆಂಧ್ರದೇಶಗಳಲ್ಲಿದ್ದ ಭಾಗಗಳಿಗೆ ತನ್ನ ತಮ್ಮಂದಿರನ್ನು ನೇಮಿಸಿ ಮಧ್ಯವರ್ತಿಯಾದ ಕರ್ನಾಟಕದಲ್ಲಿ ತಾನು ನೆಲೆಸಿ ರಾಜ್ಯಭಾರಮಾಡುತ್ತಿದ್ದನು. ಪುಲಿಕೇಶಿಯ ರಾಜಧಾನಿಯನ್ನೂ ಅವನ ವೈಭವವನ್ನೂ [illegible] ಚೀನದೇಶದ ಪ್ರಯಾಣಿಕನಾದ ಹುಯೆ[illegible]ಂಗನು ಬಹುಪರಿಯಾಗಿ ಬಣ್ಣಿಸಿದ್ದಾನೆ. [illegible]ಕೇಶಿಗೆ ಎದುರಾಗಿ ನಿಲ್ಲುವದು ಪಲ್ಲವರಿಗೆ [illegible]ಗಲಿಲ್ಲ. ಆದರೂ ಅವರು ಸಮಯ [illegible]ಧಿಸುತ್ತಿದ್ದರು. ಮಹೇಂದ್ರವಿಕ್ರಮನ [illegible]ಗನಾದ ನರಸಿಂಹ ವಿಕ್ರಮವರ್ಮನು [illegible]ದೊಂದಿಗೆ ವಾತಾಪಿಯನ್ನು ಮುತ್ತಿ [illegible]ಕೇಶಿಯು ವೃದ್ಧನಾಗಿರಬೇಕು.

ಮತ್ತು ರಾಜ್ಯದಲ್ಲಿ ಅಂತಃಕಲಹಗಳು ಉಂಟಾದಂತೆ ತೋರುತ್ತದೆ. ಈ ಸಂಧಿಯಲ್ಲಿ ನರಸಿಂಹವಿಕ್ರಮವರ್ಮನು ತನ್ನ ನೆರೆಹೊರೆಯವರಾಗಿದ್ದ ಪಾಂಡ್ಯ ಚೋಳ, ಕೇರಳರಾಜರ ಸಹಾಯದಿಂದ ಚಾಲುಕ್ಯ ರಾಜ್ಯವನ್ನು ಆಕ್ರಮಿಸಿದನು. ಪುಲಿಕೇಶಿಯ ಹೆಸರು ಕೇಳದಂತೆ ಅಡಗಿತು. ತ್ರೈರಾಜ್ಯಪಲ್ಲವರು ಕರ್ನಾಟಕ ರಾಜ್ಯವನ್ನು ಆಳತೊಡಗಿದರು. ಈ ಮಹಾ ವಿಪತ್ತನ್ನು ಕರ್ನಾಟಕದ ವೀರಪುರುಷರು ಸಹಿಸಲಾರದಾದರು. ಪುಲಿಕೇಶಿಯ ಮಗನಾದ ವಿಕ್ರಮಾದಿತ್ಯನು ಸಾಹಸದಿಂದ ಕಳೆದುಹೋದ ರಾಜ್ಯವನ್ನು ಉದ್ಧರಿಸಲು ವಿಶ್ವಪ್ರಯತ್ನ ಮಾಡಿದನು. ಖಡ್ಗಮಾತ್ರ ಸಹಾಯನಾಗಿ 'ಚಿತ್ರಕಂಠ'ವೆಂಬ ಕುದುರೆಯ ಮೇಲೆ ಕೂತು ಶತ್ರುಸೈನ್ಯವನ್ನು ಚದರಿಸಿ 'ಅವನಿಪತಿತ್ರಿತಯಾಂತರಿತಾಂ ಸ್ವಗುರೋಃ ಶ್ರಿಯಮಾತ್ಮಸಾತ್ಕೃತ್ವಾ' ಪಾಂಡ್ಯ ಚೋಳ ಕೇರಳ ಪಲ್ಲವರಿಂದ ಆಕ್ರಮಿಸಲ್ಪಟ್ಟಿದ್ದ ತನ್ನ ತಂದೆಯ ರಾಜ್ಯವನ್ನು ಸ್ವಾಧೀನಪಡಿಸಿಕೊಂಡನು. ಇದಕ್ಕಾಗಿ ಅನೇಕ ಭೀಕರವಾದ ಸಂಗ್ರಾಮಗಳನ್ನು ಮಾಡಬೇಕಾಯಿತು. ತನ್ನ ಮಗನಾದ ವಿನಯಾದಿತ್ಯನನ್ನೂ ಮೊಮ್ಮಗನಾದ ವಿಜಯಾದಿತ್ಯನನ್ನೂ ಯುದ್ಧಕಲೆಯಲ್ಲಿ ನುರಿಸಿ ಒಬ್ಬನನ್ನು ಉತ್ತರಾಪಥದ ರಾಜರಗೂಡ ಯುದ್ಧಮಾಡಲಿಕ್ಕೂ ಇನ್ನೊಬ್ಬನನ್ನು ಪಲ್ಲವ ಬಲವನ್ನು ಓಡಿಸಿ ಸ್ವರಾಜ್ಯವನ್ನು ಸ್ಥಾಪಿಸಲಿಕ್ಕೂ ನೇಮಿಸಿದನು. ವಿಜಯಾದಿತ್ಯನು 'ಶೈಶವೇ ಏವಾಧಿಗತಾಶೇಷಶಸ್ತ್ರಾಸ್ತ್ರ'ನಾಗಿದ್ದನು. (ಶಿಶುವಾಗಿರುವಾಗಲೇ ಅಸ್ತ್ರಶಸ್ತ್ರ ಪ್ರಯೋಗ ವಿದ್ಯೆಯನ್ನು ಕಲಿತವನಾಗಿದ್ದನು) ಒಮ್ಮೆ—ಉತ್ತರಾಪಥದ ರಾಜರೊಡನೆ ತನ್ನ ತಂದೆಯು ಹೋರಾಡುವಾಗ ವಿಜಯಾದಿತ್ಯನು ತಂದೆಯ ಅಗ್ರಭಾಗದಲ್ಲಿ ರಭಸದಿಂದ ಕಾಳಗವನ್ನೆಸಗುವಾಗ ವಿಧಿವಶದಿಂದ ಶತ್ರುಗಳ ಕೈಯಲ್ಲಿ ಸಿಕ್ಕನು. ಆದರೂ ಪ್ರತಾಪದಿಂದ ಆ ಅವಗ್ರಹದಿಂದ ಪಾರಾಗಿ ಬಂದು ವಿಷಯಪ್ರಕೋಪವನ್ನೂ ಅರಾಜಕತೆಯನ್ನೂ ದೂರುಮಾಡಿ ದೇಶದಲ್ಲಿ ಶಾಂತಿಯನ್ನು ಸ್ಥಾಪಿಸಿದನು ವಿಕ್ರಮಾದಿತ್ಯನ ಹೋರಾಟವು ಅಪ್ರತಿಮವಾಗಿತ್ತು. ಏಕಾಕಿಯಾಗಿ ಖಡ್ಗಮಾತ್ರ ಸಹಾಯದಿಂದ ಪುತ್ರ ಪೌತ್ರರ ನೆರವಿನಿಂದ ಮಹಾಪ್ರಬಲರಾಗಿ ಮೆರೆಯುತ್ತಿದ್ದ ಅವನಿಪತಿತ್ರಿತಯವನ್ನು ದೇಶದಿಂದ ಓಡಿಸಿ ಪುನಃ ಚಾಲುಕ್ಯರಾಜ್ಯವನ್ನು ವಾತಾಪಿಯಲ್ಲಿ ಸ್ಥಾಪಿಸಿದನು. ಪರರ ಆಕ್ರಮಣದಲ್ಲಿ ನಿಂತುಹೋಗಿದ್ದ ಬ್ರಹ್ಮದೇಯ ದೇವದಾಯಗಳನ್ನು ಉಜ್ಜೀವಗೊಳಿಸಿ ಪ್ರಜೆಗಳಿಗೆ ಅನೇಕ ಹಿತಕಾರ್ಯಗಳನ್ನು ಮಾಡಿ 'ಸಾಹಸ ರಸಿಕ' 'ರಣರಸಿಕ' ಎಂದು ಪ್ರತಾಪದಿಂದ ರಾಜ್ಯಭಾರಮಾಡಿದನು. ೨ ನೆಯ ಪುಲಿಕೇಶಿಯು ಮೊದಲು ಸಾಮ್ರಾಜ್ಯಸ್ಥಾಪಕನಾದನು. ಕೂಡಲೆ ಕಳೆದು ಹೋಗಿದ್ದ ಸಾಮ್ರಾಜ್ಯವನ್ನು ಸಾಹಸದಿಂದ ಬದುಕಿಸಿ ತನ್ನ ಮನೆತನದಲ್ಲಿ ಕ್ರಿ ಶ ೭೫೭ ರ ವರೆಗೆ ನಿಲ್ಲುವಂತೆ ಮಾಡಿದ ಕೀರ್ತಿಯು ಅವನ ಮಗನಾದ ವಿಕ್ರಮಾದಿತ್ಯನಿಗೆ ಕರ್ನಾಟಕದ ರಾಜ್ಯಾಂಕುರವು ಚಿಗಿಯಲಿಕ್ಕೆ ವಿಕ್ರಮಾದಿತ್ಯನು ಮಾಡಿದ ಉಪಕಾರವು ಚಿರಸ್ಮರಣೀಯವಾಗಿದೆ. ಅವನಿಲ್ಲದಿದ್ದರೆ ೭ ನೆಯ ಶತಮಾನದಿಂದ ಪರಕೀಯರ ಆಕ್ರಮಣವು ಕರ್ನಾಟಕದಲ್ಲಿ ಸುಸ್ಥಿರವಾಗಿ ನಿಲ್ಲಬಹುದಾಗಿತ್ತು.

ಈ ಮೇಲಿನ ಎರಡು ಉದಾಹರಣೆಗಳಲ್ಲಿ ಕರ್ನಾಟಕ ರಾಜ್ಯ ಸ್ಥಾಪನೆಯು ಕೇವಲ ಮನುಷ್ಯಪ್ರಯತ್ನವನ್ನು ಅವಲಂಬಿಸಿಲ್ಲವೆಂಬುದು ಸ್ಪಷ್ಟವಿದೆ. ಒಂಟಿಯಾಗಿ ಹೋರಾಡಿದ ಮಯೂರಶರ್ಮನಾಗಲಿ, ವಿಕ್ರಮಾದಿತ್ಯನಾಗಲಿ, ಮಹಾಪರಾಕ್ರಮಶಾಲಿಗಳಾದ ಪಲ್ಲವ ಮತ್ತು 'ಅವನಿಪತಿತ್ರಿತಯ'ದ ದೊಡ್ಡ ಸೈನ್ಯವನ್ನು ನಾಶಗೊಳಿಸಿ ರಾಜ್ಯವನ್ನು ಸ್ಥಾಪಿಸಲು ಶಕ್ಯವೇ. ದೈವೀ ಬಲವು ಹಿಂದೆನಿಂತು ಇಂಥ ಅಘಟಿತಘಟನೆಯನ್ನು ಪೂರೈಸಿತು. ಅದರಂತೆ ಈಗ ಜಗತ್ತಿನಲ್ಲಿ ಅಪ್ರತಿಮಶೂರರೆನಿಸಿದ ಪಾಶ್ಚಾತ್ಯರಾಜರ ಪ್ರಭೂತ ಸೈನದೊಂದಿಗೆ ಹೋರಾಡಿ ಸ್ವಾತಂತ್ರ್ಯವನ್ನು ಗಳಿಸುವದು ನಿರ್ಬಲವಾದ ಏಕಾಕಿ ಭಾರತವರ್ಷಕ್ಕೆ ಶಕ್ಯವಾಗಿದ್ದಿತೇ? ಆದರೂ ಈ ಅಶಕ್ಯವಾದ ಕಾರ್ಯವನ್ನು ಸರ್ವಶಕ್ತನಾದ ಪರಮಾತ್ಮನು ನಮ್ಮಿಂದ ಮಾಡಿಸಿದನು. ಅವನು ಜಾಗತಿಕ ಯುದ್ಧವೆಂಬ ಮಹಾಘಟನೆಯನ್ನು ಏರ್ಪಡಿಸಿ ಯಾದವೀ ಕಲಹದಿಂದ ಪರಸ್ಪರರ ಶಕ್ತಿಯನ್ನು ಕುಂಠಿಸಿ ಪರಮಾತ್ಮನ ಕಾರುಣ್ಯದಲ್ಲಿ ಅಚಲ ವಿಶ್ವಾಸವುಳ್ಳ ದೀನ ಭಾರತಭೂಮಿಗೆ ಅನಾಯಾಸವಾಗಿ ಸ್ವಾತಂತ್ರ್ಯವನ್ನು ದಯಪಾಲಿಸಿರುವನು. ಆ ಪ್ರಭುವಿನ ಉಪಕಾರವನ್ನು ಕ್ಷಣಬಿಡದೆ ಸ್ಮರಿಸುತ್ತ, ಈ ಹೊಸಗಳಿಕೆಯನ್ನು ಧರ್ಮದಿಂದ ರಕ್ಷಿಸಿ ನಮ್ಮ ಉತ್ತರೋತ್ತರ ಉನ್ನತಿಯನ್ನು ಮಾಡಿಕೊಳ್ಳುವ ಹೊಣೆಯು ನಮ್ಮ ಮೇಲೆ ಇರುವದೆಂಬುದನ್ನು ನಾವೆಲ್ಲರೂ ಲಕ್ಷ್ಯದಲ್ಲಿಡಬೇಕು.

(ಸ್ವಾತಂತ್ರ್ಯ ಸಂಚಿಕೆಗಾಗಿ ಬಂದುದು; ಸ್ಥಳಾಭಾವದಿಂದ ಇಲ್ಲಿ ಪ್ರಕಟಿಸಲಾಗಿದೆ)

ಸಂಸ್ಮರಣೀಯ ಸಮಾರಂಭ

ಅಗಸ್ಟ ೧೪ ಮಧ್ಯರಾತ್ರಿಯಿಂದ ೧೫ ನೆಯ ತಾರೀಖು ಪೂರ್ಣ ಹಿಂದುಸ್ತಾನದಲ್ಲಿ ನಡೆದ ಸ್ವರಾಜ್ಯ ಪ್ರತಿಗ್ರಹ ಸಮಾರಂಭವು ಅತ್ಯಂತ ಅಪೂರ್ವವಾಗಿದ್ದಿತು. ಸುಶಿಕ್ಷಿತರು ಮುಂದುವರಿದವರೆಂದು ಹೇಳಿಕೊಳ್ಳುತ್ತಿರುವ ನಗರ ವಾಸಿಗಳಷ್ಟೇ ಅಲ್ಲಿ ಬ್ರಿಟಿಶರ ನೂರೈವತ್ತು ವರುಷಗಳ ಮಾದರೀ (?) ಆಡಳಿತದಲ್ಲಿಯೂ ಅಶಿಕ್ಷಿತರೂ ಹತ್ತಿಕ್ಕಲ್ಪಟ್ಟವರೂ ಆಗಿ ಉಳಿದ ಹಳ್ಳಿಯ ಜನರು ಕೂಡ ಅತ್ಯಂತ ಸಂಭ್ರಮದಿಂದ ಸ್ವಾತಂತ್ರ್ಯೋತ್ಸವವನ್ನು ಆಚರಿಸಿದರು. ಈ ಉತ್ಸವಾಚರಣೆಯ ಸಂಬಂಧದಲ್ಲಿ ನಮ್ಮ ಕಡೆಗೆ ಬರುತ್ತಿರುವ ವರದಿಗಳನ್ನೆಲ್ಲ ಪ್ರಸಿದ್ಧಿಸಿದರೆ ಅದೊಂದು ಹೆಬ್ಬೊತ್ತಿಗೆಯೆ ಆಗಬಹುದು ಇಷ್ಟೊಂದು ಉತ್ಸಾಹ, ಸಂಭ್ರಮ ದೇಶದಲ್ಲಿ ಹಿಂದೆಂದೂ ಕಂಡು ಬಂದಿರಲಿಕ್ಕಿಲ್ಲೆಂದು ಸ್ಪಷ್ಟವಾಗಿ ಹೇಳಬಹುದಾಗಿದೆ. ದಿಲ್ಲೀ ರಾಜಧಾನಿಯಲ್ಲಿ ನಡೆದ ಉತ್ಸವವಂತೂ ಬಣ್ಣಿಸಲಾಗದಷ್ಟು ಸಂಭ್ರಮದಿಂದ ಸಾಗಿತ್ತು. ದೀರ್ಘ ಕಾಲದ ವರೆಗೆ ದಾಸ್ಯದಲ್ಲಿ ಕೊಳೆಯುತ್ತಿದ್ದ ರಾಷ್ಟ್ರವಿಂದು ಜಾಗ್ರತವಾಗಿ ಸ್ವಾತಂತ್ರ್ಯ ಸೂರ್ಯೋದಯವನ್ನು ಸ್ವಾಗತಿಸುವಾಗಿನ ಸಂಭ್ರಮವದೆಷ್ಟು ಸಂಸ್ಮರಣೀಯವಾಗಿರಬಲ್ಲುದೆಂಬುದು ಸುಸ್ಪಷ್ಟವೆ ಇದೆ. ಭಾರತದ ಸ್ವಾತಂತ್ರ್ಯ ಸಂಪಾದನೆಯಲ್ಲಿ ಅಳಲಿ ಸೇವೆಯನ್ನು ಸಲ್ಲಿಸಿದ ಸ್ತ್ರೀಪುರುಷರು ಕೃತಾರ್ಥತೆಯ ಪರಮಾನಂದವನ್ನು ಪ್ರದರ್ಶಿಸುತ್ತಿದ್ದರೆ ಆಳರಸರೊಡನೆ ಕೂಡಿಕೊಂಡು ಸ್ವಾತಂತ್ರ್ಯ ಸಾಧಕರನ್ನು ಸದೆಬಡೆಯುವಲ್ಲಿ ಸಹಾಯಕರಾದವರು ಇಂದಿನ ಸಮಾರಂಭವನ್ನು ನೋಡಿ ಮನಸ್ಸಿನಲ್ಲಿಯೆ ಮರಮರನೆ ಮರುಗಿ ಪಶ್ಚಾತ್ತಾಪವನ್ನು ವ್ಯಕ್ತಪಡಿಸುತ್ತಿರಲುಸಾಕು. ಇನ್ನು ಮುಂದೆಯಾದರೂ ಇಂಥ ಮಹನೀಯರು ಸ್ವಾರ್ಥಸಾಧನೆಯ ಮಾರ್ಗವನ್ನು ಬಿಟ್ಟುಗೊಟ್ಟು ದೇಶದ ಸಾರ್ವಾಂಗಿಕ ಪ್ರಗತಿಗಾಗಿ ಮನಸಾ ಪ್ರಯತ್ನಿಸಿದರೆ ಹಿಂದಿನ ಪಾಪದ ಪ್ರಕ್ಷಾಲನೆಯನ್ನು ಮಾಡಿಕೊಂಡಂತಾಗುವದು. ಈ ಪರ್ವ ಕಾಲದಲ್ಲಿಯೆ ಅನೇಕ ಮಹನೀಯರು ದಾಸ್ಯದ ಚಿನ್ಹಗಳಾಗಿದ್ದ ಬಿರುದು ಬಾವಲಿಗಳನ್ನು ಬಿಟ್ಟುಗೊಟ್ಟು ಕೃತಾರ್ಥರಾದರು. ಆದರೆ ಹಿಂದಿನ ಆಳರಸರೊಡನೆ ಕೂಡಿಕೊಂಡು ಸ್ವರಾಜ್ಯಕ್ಕೆ ಅಡ್ಡಿಯನ್ನುಂಟುಮಾಡಿದಂತೆ ಈ ಮಹನೀಯರು ಇನ್ನು ಮುಂದೂ ತಮ್ಮ ಆ ಕಾಯಕವನ್ನು ನಡೆಸದಂತೆ ಜಾಗ್ರತೆ ವಹಿಸಬೇಕಾದುದು ಅವಶ್ಯವಾಗಿದೆ. ಹಿಂದುಸ್ತಾನದ ಮೊದಲನೇ ಗವರ್ನರ ಜನರಲ್‌ರಾಗಿರುವ ಲಾರ್ಡ ಲುಯಿ ಮೌಂಟಬ್ಯಾಟನ್‌ರು ಹೇಳಿದಂತೆ ಎಲ್ಲರೂ ಭಾರತದ ಸೇವಕರೆಂದೇ ಭಾವಿಸಿ ಅದರ ಪ್ರಗತಿಗಾಗಿಯೇ ದೇಹ ಸವೆಸಿ ಸಂಪಾದಿಸಿದ ಸ್ವಾತಂತ್ರ್ಯದ ಸವಿಯನ್ನು ಸವಿಯಬೇಕೆಂದು ಸವಿನಯ ಸೂಚಿಸಬಯಸುತ್ತೇವೆ.

ಜಾಗ್ರತೆ ವಹಿಸಬೇಕು

ಸ್ವಾತಂತ್ರ್ಯ ಸಮಾರಂಭದಲ್ಲಿ ಕೆಲವೊಂದು ಅನಿಷ್ಟ ಪ್ರಕಾರಗಳು ಸಂಭವಿಸಿದ್ದರಿಂದ ಎಷ್ಟೋ ಜನರಿಗೆ ಬಹಳ ಕೆಡಕೆನಿಸಿತೆಂಬ ದೂರುಗಳು ನಮ್ಮ ಕಡೆಗೆ ಬಂದಿವೆ. ಈಗ ಆದದ್ದಾಯಿತು. ಇನ್ನು ಮುಂದೆಯಾದರೂ ಇಂಥ ಅನಿಷ್ಟಗಳು ಸಂಭವಿಸದಂತೆ ನೋಡಿಕೊಳ್ಳುವದವಶ್ಯವೆನಿಸಿದ್ದರಿಂದ ಸಕಾಲದಲ್ಲಿಯೆ ಆ ಬಗ್ಗೆ ಎಚ್ಚರಿಸುವದವಶ್ಯವಾಗಿದೆ. ಹಿಂದುಸ್ತಾನದ ಹೊಸ ರಾಷ್ಟ್ರಧ್ವಜವನ್ನು ಎಲ್ಲೆಲ್ಲಿಯೂ ಒಳ್ಳೆ ಸಂಭ್ರಮದಿಂದ ಏರಿಸಲಾಯಿತು. ಆದರೆ ಹಲವು ಸ್ಥಳಗಳಲ್ಲಿ ಧ್ವಜ ಏರಿಸುವ ಕ್ರಮ ಗೊತ್ತಿಲ್ಲದವರು ಕೇವಲ ಪ್ರತಿಷ್ಠೆಗಾಗಿ ಅದನ್ನೇರಿಸುವ ಪ್ರಯತ್ನ ಮಾಡಿ ಕ್ರಮಬದ್ಧವಾಗಿ ಆ ಕಾರ್ಯಕ್ರಮವನ್ನು ನಡೆಸದಿದ್ದುದು ಶೋಚನೀಯವಾಗಿದೆ. ಒಮ್ಮೆ ಏರಿಸಿದ ಧ್ವಜವನ್ನು ಅರ್ಧಕ್ಕೆ ಕೆಳಗಿಳಿಸುವದು, ಇಲ್ಲವೆ ಅದನ್ನು ತಿರುವಿ ಮುರುವಿ ಏರಿಸುವದು ಮಧ್ಯದಲ್ಲಿಯೆ ಹಗ್ಗ ಹರಿಯುವದು ಮೊದಲಾದ್ದೆಲ್ಲ ಅತ್ಯಂತ ಅನಿಷ್ಟವಾಗಿದ್ದು ರಾಷ್ಟ್ರಧ್ವಜಕ್ಕೆ ಅಪಮಾನಕಾರಕವಾಗಿವೆ. ರಾಷ್ಟ್ರಧ್ವಜವಂದನೆಯ ರೀತಿ ಪದ್ಧತಿಗಳನ್ನು ಬಲ್ಲ, ಹಿಂದುಸ್ತಾನೀ ಸೇವಾದಲದಲ್ಲಿ ತರಬೇತಿ ಹೊಂದಿದ ಅನೇಕ ಸ್ವಯಂಸೇವಕರು ದೇಶದಲ್ಲಿರುವಾಗ ಅವರಿಗೆ ಈ ಕಾರ್ಯವನ್ನು ಒಪ್ಪಿಸದೆ ಇಂಥ ಅನಿಷ್ಟ ಘಟನೆಗಳಿಗೆ ಅವಕಾಶ ಕೊಡುವದು ದುರ್ದೈವವೆನ್ನೈ! ಇನ್ನು ಮುಂದೆಯಾದರೂ ರಾಷ್ಟ್ರಧ್ವಜವಂದನೆ ಕ್ರಮಬದ್ಧವಾಗಿ ಸಾಗುವಂತೆ ನೋಡಿಕೊಳ್ಳುವದು ಅವಶ್ಯವಾಗಿದೆ. ಯಾವದೊಂದು ದೇಶದಲ್ಲಿ ಆ ದೇಶದ ಅಧಿಕೃತ ರಾಷ್ಟ್ರಧ್ವಜ ಮತ್ತು ಬೇರೆ ಬೇರೆ ಪಕ್ಷ ಪಂಗಡಗಳ ಧ್ವಜಗಳು ಹಾರಾಡಬಲ್ಲವು. ಆದರೆ ಪರದೇಶಗಳ ರಾಷ್ಟ್ರಧ್ವಜಗಳು ಆಯಾ

ಸಂಪಾದಕೀಯ ಟೀಕೆಟಿಪ್ಪಣಿಗಳು

ರಾಷ್ಟ್ರಗಳ ರಾಯಭಾರ ಕಚೇರಿಗಳ ಮೇಲೆಯಲ್ಲದೆ ಬೇರೆ ಯಾವ ಖಾಸಗಿ ಇಲ್ಲವೆ ಸಾರ್ವಜನಿಕ ಕಟ್ಟಡಗಳ ಮೇಲೆ ಹಾರಾಡಲಾರವು. ಈ ನಿಯಮಕ್ಕನುಸಾರವಾಗಿಯೆ ಹಿಂದುಸ್ತಾನದ ಕಚೇರಿಗಳ ಮೇಲೆ ಹಾರಾಡುತ್ತಿದ್ದ ಬ್ರಿಟಿಶರ ಯುನಿಯನ್ ಜ್ಯಾಕನ್ನು ಅಗಸ್ಟ ೧೪ ನೇ ತಾರೀಖು ಸಾಯಂಕಾಲದೊಳಗಾಗಿಯೆ ಕೆಳಗಿಳಿಸಿದ್ದು ಸರ್ವಶ್ರುತ. ಆದರೂ ೧೫ ನೇ ತಾರೀಖು ಮತ್ತು ಈಚೆಗೆ ಅನೇಕ ಸ್ಥಳಗಳಲ್ಲಿ ಪಾಕಿಸ್ತಾನ ಸರಕಾರದ ಧ್ವಜ ಖಾಸಗಿ ಮತ್ತು ಸಾರ್ವಜನಿಕ ಕಟ್ಟಡಗಳ ಮೇಲೆ ಹಾರಾಡುತ್ತಿದ್ದುದು ಕಂಡು ಬಂದಿದೆ. ಲೀಗ ಧ್ವಜಗಳನ್ನು ಹಚ್ಚಲು ಯಾರದೂ ಆಕ್ಷೇಪವಿರಲಾರದು. ಆದರೆ ಪಾಕಿಸ್ತಾನ ಸರಕಾರದ ಅಧಿಕೃತ ಧ್ವಜವನ್ನು ಹಿಂದುಸ್ತಾನದಲ್ಲಿ ಏರಿಸುವದೆಂದರೆ ಹಿಂದುಸ್ತಾನ ಧ್ವಜಕ್ಕೆ ಅಪಮಾನ ಮಾಡಿದಂತೆಯೆ ಸೈ. ಪಾಕಿಸ್ತಾನದಲ್ಲಿ ಹಿಂದುಸ್ತಾನದ ರಾಯಭಾರಿಗಳಾದ ಶ್ರೀ. ಶ್ರೀಪ್ರಕಾಶರು ತಮ್ಮ ಕಚೇರಿಯ ಮೇಲೆ ಹಿಂದೀ ರಾಷ್ಟ್ರಧ್ವಜ ಹಚ್ಚಿದ್ದಕ್ಕೆ ಕರಾಚಿಯಲ್ಲಿ ಲೀಗ ಪ್ರಭೃತಿಗಳು ಅನ್ಯಾಯವಾಗಿ ಆಕ್ಷೇಪಿಸಿದ್ದನ್ನು ಅವರು ಪಾಕಿಸ್ತಾನ ಸರಕಾರದ ನಿದರ್ಶನಕ್ಕೆ ತಂದುಕೊಟ್ಟದ್ದುಂಟು. ಕರಾಚಿಯಲ್ಲಿ ಹಾಗೆ ಪ್ರಕರಣ ನಡೆದರೆ ಹಿಂದುಸ್ತಾನದಲ್ಲಿ ಅನೇಕ ಲೀಗ ಅನುಯಾಯಿಗಳ ಖಾಸಗಿ ಮನೆ ಮತ್ತು ಮಸೀದೆಗಳ ಮೇಲೆ ಪಾಕಿಸ್ತಾನ ಧ್ವಜ ಅನಿರ್ಬಂಧವಾಗಿ ಹಾರಾಡುತಿವೆ. ಈ ಬಗ್ಗೆ ಸಕಾಲದಲ್ಲಿಯೆ ಜಾಗ್ರತೆ ವಹಿಸುವದು ಅವಶ್ಯ. ಇಲ್ಲದಿದ್ದರೆ ನಿರರ್ಥಕವಾಗಿ ತಿಕ್ಕಾಟಕ್ಕೆ ಅವಕಾಶ ಕೊಟ್ಟಂತಾಗಬಹುದು. ಸಂಬಂಧಿಸಿದವರು ಈ ಬಗ್ಗೆ ದಕ್ಷತೆ ವಹಿಸುವರೆಂದು ನಂಬುತ್ತೇವೆ.

ಹೊಸ ಹೊಣೆಗಳು

ಈ ಸ್ವಾತಂತ್ರ್ಯದ ಸಂಗಡ ಹೊಸಹೊಣೆಗಳೂ ಹಿಂದೀಯರ ಮೇಲೆ ಬಿದ್ದಿವೆಂಬುದು ಸುಸ್ಪಷ್ಟವಾಗಿದೆ. ಪರದಾಸ್ಯದಿಂದ ದೇಶವಿಂದು ಅತ್ಯಂತ ನಿಕೃಷ್ಟ ಸ್ಥಿತಿಗೆ ಮುಟ್ಟಿದೆ. ಪ್ರತಿಯೊಂದು ಪದಾರ್ಥದಲ್ಲಿ, ಆಹಾರ ಪದಾರ್ಥದಲ್ಲಿಯೂ ಪರದೇಶಗಳ ಮೋರೆಯನ್ನು ನೋಡುತ್ತ ಕೂಡ್ರುವ ಪ್ರಸಂಗ ಬಂದಿದೆ. ಈ ಪರಿಸ್ಥಿತಿಯನ್ನು ಸುಧಾರಿಸಬೇಕಾದರೆ ಆಡಳಿತ ವಹಿಸಿಕೊಂಡವರಷ್ಟೇ ಅಲ್ಲ ಭಾರತೀಯರೆಲ್ಲ ತಮ್ಮ ಹೊಣೆಯನ್ನು ನಿರ್ವಹಿಸಬೇಕಾಗಿದೆ. ಆಹಾರ ಬಟ್ಟೆ ಉಳಿದ ಉಪಯುಕ್ತ ವಸ್ತುಗಳೆಲ್ಲ ಭಾರತೀಯ: ರಿಗೆ ಸುಲಭವಾಗಿ ಸಿಕ್ಕುವಂತೆ ನೋಡಿಕೊಳ್ಳಬೇಕಾಗಿದೆ. ಕಳ್ಳಪೇಟೆ, ಲಂಚಗುಳಿತನವನ್ನು ನಿರ್ಮೂಲ ಮಾಡಬೇಕಾಗಿದೆ. ಪರದೇಶಗಳಿಗೆ ಬಳೆದುಹೋದ ಹೊನ್ನಿನ ಹೊಳೆಯನ್ನು ಮತ್ತೆ ಭಾರತದತ್ತ ತಿರುಗಿಸಬೇಕಾಗಿದೆ. ಶೈಕ್ಷಣಿಕ ಪ್ರಗತಿಯನ್ನು ಸಾಧಿಸಬೇಕಾಗಿದೆ. ನೂರೈವತ್ತು ವರುಷಗಳ ವರೆಗೆ ಬ್ರಿಟಿಶರಂಥ ಮುಂದುವರಿದವರು ಭಾರತದಲ್ಲಿ ಆಡಳಿತವನ್ನು ನಡೆಸಿದರೂ ನೂರಕ್ಕೆ ೧೦ ರಷ್ಟು ಕೂಡ ಜನ ಸುಶಿಕ್ಷಿತರಾಗಿಲ್ಲ. ಭಾರತದಲ್ಲಿ ಕೇವಲ ತಮ್ಮ ಆಡಳಿತಕ್ಕನುಕೂಲವಾಗುವಂಥ ಶಿಕ್ಷಣವನ್ನೆ ಅವರು ಕೊಟ್ಟದ್ದುಂಟು. ಇದೆಲ್ಲ ಬದಲಾಗಿ ಭಾರತದ ಸಾರ್ವಾಂಗಿಕ ಅಭಿವೃದ್ಧಿಗೆ ಅವಶ್ಯವಾಗಿ ಸಹಾಯಕವಾಗುವಂತೆ ಶೈಕ್ಷಣಿಕ ಪುನರ್ಘಟನೆಯಾಗಬೇಕು. ಹೀಗೆ ಒಂದಲ್ಲ ಎರಡಲ್ಲ ಅನೇಕ ಸಮಸ್ಯೆಗಳು ಭಾರತ ಸರಕಾರವನ್ನೆದುರಿಸುತ್ತಿರುವುದರಿಂದ ಆಡಳಿತ ವಹಿಸಿಕೊಂಡವರು ಅತ್ಯಂತ ದಕ್ಷತೆಯಿಂದ ಮುಂದೆ ಸಾಗಬೇಕಾಗಿದೆ. ಇಂದು ದೇಶದಲ್ಲಿ ತಲೆಯೆತ್ತಿದ ಅಶಾಂತಿಯ ಭೂತವನ್ನು ಕೂಡಲೆ ನಿರ್ನಾಮಗೊಳಿಸಬೇಕಾಗಿದೆ. ಇದಕ್ಕಾಗಿ ಬೇಕಾದಂಥ ಉಗ್ರೋಪಾಯಗಳನ್ನೂ ಕೈಕೊಳ್ಳಬಹುದಾಗಿದೆ ಇದೆಲ್ಲ ಸಿದ್ಧಿಸಬೇಕಾದರೆ ಆಡಳಿತೆದಾರರ ಗೂಡ ಜನಸಾಮಾನ್ಯವೆಲ್ಲ ಸಹಕರಿಸುವದತ್ಯಂತ ಅವಶ್ಯವಾಗಿದೆ. 'ಇನ್ನೇನು ಸ್ವರಾಜ್ಯ ಸಿಕ್ಕಿತು, ಮನಬಂದಂತೆ ನಡೆಯಬಲ್ಲೆವು, ಅಧಿಕಾರಿಗಳೇನು ಹೇಳುವರೆಂ' ದು ಮುಂತಾಗಿ ಭಾವಿಸಿ ಆಡಳಿತದಲ್ಲಿ ಶೈಥಿಲ್ಯವನ್ನುಂಟು ಮಾಡಲು ಯಾರಾದರೂ ಪ್ರಯತ್ನಿಸ ಹತ್ತಿದರೆ ಮಹಾಪರಾಧ ಮಾಡಿದಂತಾಗುವುದಲ್ಲದೆ ಇಷ್ಟೊಂದು ಸ್ವಾರ್ಥತ್ಯಾಗದಿಂದ ಸಂಪಾದಿಸಿದ ಸ್ವಾತಂತ್ರ್ಯಕ್ಕೆ ಬೇಗನೆ ಎರವಾಗುವ ದುರ್ಧರ ಪ್ರಸಂಗವೂ ಬರಬಹುದು. ಆದುದರಿಂದ ಅಧಿಕಾರಿಗಳೂ ಜನರೂ ತಮ್ಮ ತಮ್ಮ ಪಾಲಿನ ಹೊಣೆಯನ್ನರಿತುಕೊಂಡು ಚಾಚೂ ಎನ್ನದೆ ಅದನ್ನು ನಿರ್ವಹಿಸಿ ದೇಶದ ಸಾರ್ವಾಂಗಿಕ ಸಮೃದ್ಧಿಯನ್ನು ಸಾಧಿಸುವದು ಕರ್ತವ್ಯವಾಗಿದೆ. ಈ ಸಮಯದಲ್ಲಿ ಘಟನಾ ಸಮಿತಿಯ ಅಧ್ಯಕ್ಷರಾದ ಬಾಬೂ ರಾಜೇಂದ್ರ ಪ್ರಸಾದರು ಅಧಿಕಾರಿಗಳಿಗೆ ಮಾಡಿದ ಸಮಯೋಚಿತ ಸದುಪದೇಶವನ್ನು ಅಧಿಕಾರಿಗಳೆಲ್ಲ ಚೆನ್ನಾಗಿ ಮನನಮಾಡಿಕೊಂಡು ತಮ್ಮ ವರ್ತನವನ್ನು ಸರಿಪಡಿಸಿಕೊಳ್ಳುವರೆಂದು ನಂಬಿದ್ದೇವೆ.

ಖಂಡನೀಯ ದೊಂಬಿಗಳು

ಹಲವರಿಗೆ ಬೇಕಾಗಿದ್ದಂತೆ ಹಿಂದುಸ್ತಾನ ಮತ್ತು ಪಾಕಿಸ್ತಾನವೆಂಬ ಎರಡು ತುಂಡುಗಳನ್ನು ಮಾಡಿ ಬ್ರಿಟಿಶರು ಸ್ವರಾಜ್ಯವನ್ನು ಕೊಟ್ಟು ಹೊರ ಹೊರಟಿದ್ದರೂ ಇನ್ನೂ ಹಲವು ಕಡೆಗೆ ಪುಂಡಾಟಿಕೆ ನಡೆದದ್ದು ಅತ್ಯಂತ ಶೋಚನೀಯ ಮತ್ತು ನಿಷೇಧಾರ್ಹವಾಗಿದೆ. ವಿಶೇಷತಃ ಅಮೃತಸರ ಮೊದಲಾದ ಕಡೆ ಅಧಿಕಾರ ಸ್ವೀಕಾರದ ನಂತರ ನಡೆದ ಪುಂಡಾಟಿಕೆ ಅತ್ಯಂತ ನಿಂದ್ಯವಾಗಿದೆ. ಪಾಕಿಸ್ತಾನ ಸರಕಾರದ ಗಡಿ ರಕ್ಷಕ ಸೈನಿಕರೂ ಈ ದೊಂಬಿಗಳಲ್ಲಿ ಭಾಗಿಯಾಗಿದ್ದರೆಂದು ಸುದ್ದಿ. ಅದಕ್ಕಾಗಿ ಅವರನ್ನು ಸೆರೆಹಿಡಿಯಲಾಗಿದೆಂದೂ ಪ್ರಸಿದ್ಧವಾಗಿದೆ. ಇದೆಲ್ಲ ನಿಜವಾಗಿದ್ದರೆ ಅತ್ಯಂತ ಶೋಚನೀಯವಾದುದು. ಬೇಲಿಯೆ ಎದ್ದು ಹೊಲವನ್ನು ಮೇಯಹತ್ತಿದರೆ ಕಾಯುವುದೆಂತು? ಶಾಂತಿ ಪ್ರಸ್ಥಾಪನೆಗಾಗಿ ನಿಯಮಿಸಲ್ಪಟ್ಟ ಪೋಲೀಸರು, ಸೈನಿಕರು ಮತ್ತು ಅಧಿಕಾರಿಗಳೆ ದೊಂಬಿಯಲ್ಲಿ ಭಾಗವಹಿಸಿದರೆ ಇಲ್ಲವೆ ದೊಂಬಿಗಾರರಿಗೆ ಪ್ರೋತ್ಸಾಹನೆ ಕೊಟ್ಟರೆ ದೇಶದಲ್ಲಿ ಶಾಂತತೆಯೆಂತು ನೆಲಿಸಬೇಕು? ಹಿಂದುಸ್ತಾನ ಮತ್ತು ಪಾಕಿಸ್ತಾನ ಎರಡೂ ರಾಷ್ಟ್ರಗಳ ಮುಖ್ಯ ಮಂತ್ರಿಗಳೂ ಅಧಿಕಾರಿಗಳೂ ಕೂಡಿ ಶಾಂತಿ ಪ್ರಸ್ಥಾಪನೆಗೆ ಟೊಂಕ ಕಟ್ಟಿ ಸಂಯುಕ್ತ ಪ್ರಕಟನೆಯನ್ನು ಹೊರಡಿಸಿದ್ದು ಸಮಯೋಚಿತವಾಗಿದೆ. ಈ ಪುಂಡಾಟಿಕೆಯನ್ನು ಸ್ವಲ್ಪವೂ ಅಲಕ್ಷಿಸುವದಿಲ್ಲ ಎಲ್ಲ ಬಗೆಯಿಂದಲೂ ಅದನ್ನು ಹತ್ತಿಕ್ಕಲಾಗುವದೆಂಬ ದೃಢ ನಿರ್ಧಾರವನ್ನು ಈ ಎರಡೂ ಸರಕಾರಗಳು ಮಾಡಿದ್ದು ಸ್ತುತ್ಯವಾಗಿದೆ. ಇದರ ಮರ್ಮವನ್ನು ತಿಳಿದುಕೊಂಡು ಆಯಾ ಪ್ರಾಂತಗಳಲ್ಲಿದ್ದ ಅಧಿಕಾರಿಗಳೂ ಜನರೂ ವಿಶೇಷತಃ ಪುಂಡರೂ ವರ್ತಿಸಿದ್ದಾದರೆ ಈ ಪುಂಡಾಟಿಕೆ ಬೇಗ ನಿಲ್ಲುವುದು. ಪುಂಡುಗಾರರನ್ನು, ಅವರನ್ನು ಪ್ರೋತ್ಸಾಹಿಸುವವರನ್ನು ರಾಷ್ಟ್ರದ್ರೋಹಿಗಳೆಂದು ನಿರ್ಣಯಿಸಿ ಉಗ್ರಶಿಕ್ಷೆಗೆ ಗುರಿಮಾಡಿದರೆ ಮಾತ್ರ ಇದು ಸಾಧ್ಯ. ಬಹಳ ದಿನಗಳಿಂದ ಮನೆಮಾಡಿಕೊಂಡಿದ್ದ ಈ ಪುಂಡಾಟಿಕೆ ಬೇಗ ನಿಲ್ಲದಿದ್ದರೆ ಸಮಾಜಸ್ವಾಸ್ಥ್ಯವೆ ಉಳಿಯಲಾರದೆಂಬುದು ಸ್ಪಷ್ಟವಿದೆ.

ಗಡಿ ನಿರ್ಣಯದ ತೀರ್ಪು

ಪಂಜಾಬ ಬಂಗಾಲಗಳ ಸದ್ಯದ ಗಡಿಗಳನ್ನು ಗೊತ್ತುಪಡಿಸಲು ಸರ್ ರ್ಯಾಡ ಕ್ಲಿಫ್‌ರ ಅಧ್ಯಕ್ಷತೆಯಲ್ಲಿ ನಿಯಮಿಸಲ್ಪಟ್ಟ ಗಡಿನಿರ್ಣಾಯಕ ಸಮಿತಿಯ ತೀರ್ಪು ಹೊರಬಿದ್ದಿದ್ದು ಅದರ ಮುಖ್ಯಾಂಶವನ್ನು ಬೇರೆ ಕಡೆ ಕೊಟ್ಟಿದ್ದೇವೆ. ಈ ವಿಷಯದಲ್ಲಿ ಭಿನ್ನಾಭಿಪ್ರಾಯ ಸಮಿತಿಯ ಸದಸ್ಯರಲ್ಲಿ ಮತೈಕ್ಯವಾಗದ್ದರಿಂದ ಚೆಅರಮನ್‌ರಾದ ಸರ್ ರ್ಯಾಡಕ್ಲಿಫ್ ರೊಬ್ಬರೆ ತೀರ್ಪನ್ನು ಕೊಟ್ಟಿರುವರು. ಅಂತೆಯೆ ಇದನ್ನು ಸೀಮಾ ಸಮಿತಿಯವರ ತೀರ್ಪೆಂದು ಕರೆಯದೆ ಸರ್ ರ್ಯಾಡಕ್ಲಿಫ್‌ರ ತೀರ್ಪೆಂದು ಕರೆಯುವದು ಹೆಚ್ಚು ಸಮಂಜಸವಾಗುವದು. ಪಂಚರ ನಿರ್ಣಯವು ಬಹುಶಃ ಯಾವ ಪಕ್ಷಗಳಿಗೆ ಒಪ್ಪಿಗೆಯಾಗುವ ಸಂಭವವಿರುವದಿಲ್ಲ. ಅದರಂತೆ ಈ ತೀರ್ಪಿನ ಹಣೆಬರಹವೂ ಆಗಿದೆ. ಹಿಂದುಗಳು ಮುಸಲ್ಮಾನರು ಶೀಖರು ಕೂಡಿಯೇ ಈ ತೀರ್ಪಿನ ಬಗ್ಗೆ ಅಸಂತೋಷ ಮತ್ತು ಅತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ. ಪಂಜಾಬಿನಲ್ಲಿ ಶೀಖರನ್ನು ಬೇರೆ ಬೇರೆ ಆಡಳಿತಗಳಲ್ಲಿ ಒಡೆದುಹಾಕಿದ್ದರಿಂದ ತಮ್ಮ ಒಕ್ಕಟ್ಟಿಗೆ ಧಾರ್ಮಿಕ ಕಾರ್ಯ ಕೆಲಸಗಳಿಗೆ ವ್ಯತ್ಯಯವುಂಟಾಯಿತೆಂದು ಶೀಖರು ದೂರಿದ್ದಾರೆ. ತಮ್ಮ ಧಾರ್ಮಿಕ ಪವಿತ್ರ ಸ್ಥಾನಗಳನ್ನು ಒಡೆದು ಬಿಟ್ಟದ್ದು ಅತ್ಯಂತ ಅನ್ಯಾಯವೆಂದು ಅವರ ಅಭಿಪ್ರಾಯ. ಬಂಗಾಲದಲ್ಲಿ ಬಹುಸಂಖ್ಯಾಕ ಹಿಂದುಗಳಿದ್ದ ಖುಲ್ನಾ ಜಿಲ್ಲೆ ಮತ್ತು ಚಿತಗಾಂಗ ಗುಡ್ಡಗಾಡು ಪ್ರದೇಶವನ್ನು ಪೂರ್ವ ಬಂಗಾಲದಲ್ಲಿ ಸೇರಿಸಿದ್ದು ಅತ್ಯಂತ ಅನ್ಯಾಯವಾಗಿದೆ. ಏನೇನೋ ಕಾರಣಗಳನ್ನು ಹೇಳಿ ಸರ್ ರ್ಯಾಡಕ್ಲಿಫ್‌ರು ತಮ್ಮ ನಿರ್ಣಯವನ್ನು ಸಮರ್ಥಿಸಿಕೊಂಡಿದ್ದಾರೆ. ಈ ಗಡಿ ನಿರ್ಣಾಯಕ ಸಮಿತಿಯ ತೀರ್ಪು ಎಷ್ಟೇ ಅನ್ಯಾಯದ್ದು ಇಲ್ಲವೆ ತ್ಯಾಜ್ಯವಾಗಿದ್ದು ಇದ್ದರೂ ಅದು ಬಂಧನಕಾರಕವಾಗಿದ್ದರಿಂದ ಎಲ್ಲರೂ ಅದನ್ನು ಕಾರ್ಯರೂಪದಲ್ಲಿ ತರುವದು ಕ್ರಮಪ್ರಾಪ್ತವಾಗಿದೆ. ಆಯಾ ಭಾಗಗಳ ಸರಕಾರಗಳು ಈಗಾಗಲೆ ಈ ನಿರ್ಣಯಕ್ಕೆ ತಲೆಬಾಗಿದ್ದುಂಟು. ಆಯಾ ಜನರು ಕೂಡ ಇದರ ಬಗ್ಗೆ ತಲೆ ಕೆಡಿಸಿಕೊಂಡು ಅಶಾಂತಿಗೆ ಅವಕಾಶ ಕೊಡದಾರದೆಂದು ಸೂಚಿಸಬೇಕಾಗಿದೆ.

ಹೈದ್ರಾಬಾದದ ಸಮಸ್ಯೆ

ಹಿಂದುಸ್ತಾನದಲ್ಲಿಯ ಬಹುತರ ಎಲ್ಲ ಸಂಸ್ಥಾನಗಳು ಒಕ್ಕೂಟ ಸರಕಾರಗಳಲ್ಲಿ ಸೇರಿ ತಮ್ಮ ಸಂಸ್ಥಾನಗಳ ಮತ್ತು ಇಡೀ ರಾಷ್ಟ್ರದ ಪ್ರಗತಿಯನ್ನು ಸಾಧಿಸಲಣಿಯಾಗಿರುವಾಗ ಹೈದರಾಬಾದ ಸಂಸ್ಥಾನವೊಂದು ಇನ್ನೂ ಯಾವ ಒಕ್ಕೂಟದಲ್ಲಿಯೂ ಸೇರದೆ ಸ್ವತಂತ್ರ ಸಾರ್ವಭೌಮ ಸಂಸ್ಥಾನವೆಂದು ಸಾರಿಕೊಂಡು ಸಿದ್ಧದು ನಿಂತುದು ಶೋಚನೀಯವಾಗಿದೆ. ಹೈದ್ರಾಬಾದದಿಂದ ಬರುವ ಸುದ್ದಿಗಳನ್ನು ನಂಬುವುದಾದರೆ ಅಲ್ಲಿಯ ಪರಿಸ್ಥಿತಿ ಅತ್ಯಂತ ಭಯಾನಕವಾಗಿದೆಂದು ತಿಳಿಯುತ್ತದೆ. ಹೈದ್ರಾಬಾದು ಒಕ್ಕೂಟ ಸರಕಾರದಲ್ಲಿ ಸೇರಬೇಕು, ಪ್ರಜೆಗಳಿಗೆ ಹೊಣೆಗಾರವಾದ ಆಡಳಿತ ಸಂಸ್ಥಾನದಲ್ಲಿ ನೆಲಗೊಳ್ಳಬೇಕು ಎಂದು ಹೇಳಿ ಸಂಸ್ಥಾನ ಕಾಂಗ್ರೆಸ್ಸಿನವರು ಹೂಡಿದ ಸತ್ಯಾಗ್ರಹ ಚಳವಳಿಯನ್ನು ಹತ್ತಿಕ್ಕುವುದಕ್ಕಾಗಿ ಅಧಿಕಾರಿಗಳು ದಬ್ಬಾಳಿಕೆಯ ಸತ್ರವನ್ನೆ ನಡೆಸಿರುವರೆಂದು ಬರುವ ಸುದ್ದಿಗಳಿಂದ ಗೊತ್ತಾಗುತ್ತದೆ. ಹಕ್ಕುಬಾಧ್ಯತೆಗಳಿಗಾಗಿ ಹೋರಾಡುವವರನ್ನು ಹತ್ತಿಕ್ಕಲು ಇಂಥ ದಬ್ಬಾಳಿಕೆಯನ್ನು ನಡೆಸುವದು ಪ್ರಜಾರಂಜಕಧರ್ಮಿಗಳಾದ ಅರಸರಿಗೆಂದಿಗೂ ಶೋಭಿಸದು. ಇದರಿಂದ ದೇಶದಲ್ಲಿ ಶಾಂತಿಯೆಂದಿಗೂ ಪ್ರಸ್ಥಾಪಿತವಾಗಲಾರದು. ಆದುದರಿಂದ ಸತ್ಯಾಗ್ರಹಿಗಳನ್ನು ವಿಚಿತ್ರ ಹಿಂಸೆಗೆ ಗುರಿಮಾಡದಂತೆ ನಿಜಾಂ ಪ್ರಭುಗಳು ನೋಡಿಕೊಳ್ಳಬೇಕಾದುದು ಕರ್ತವ್ಯವಾಗಿದೆ. ಪ್ರಜೆಗಳ ಈ ಬೇಡಿಕೆಯಾದರೂ ಅತ್ಯಂತ ನ್ಯಾಯ್ಯವಾಗಿದೆ. ಸಮಂಜಸವಾಗಿದೆ. ನಿಜಾಂ ಪ್ರಭುಗಳ ಕೃಪಾಛತ್ರದಲ್ಲಿಯೆ ಅವರು ಹೊಣೆಗಾರ ಸರಕಾರವನ್ನು ಬೇಡುತ್ತಿರುವರು. ಹಿಂದೀ ಒಕ್ಕೂಟದಲ್ಲಿ ಸೇರಿ ಪ್ರಗತಿಯನ್ನು ಸಾಧಿಸಿಕೊಳ್ಳಬೇಕೆಂದು ಕೇಳುತ್ತಿರುವರು. ಈ ಬೇಡಿಕೆಗಳಲ್ಲಿ ಅಪರಾಧವೇನಿದೆ? ನಿಜಾಂ ಪ್ರಭುಗಳು ಇವುಗಳನ್ನು ಮನ್ನಿಸುವದರ ಬದಲು ದಬ್ಬಾಳಿಕೆ ನಡೆಸುವುದು ನ್ಯಾಯ್ಯವಾಗಲಾರದು. ಚರ್ಚಿಲ್ಲರು ಮತ್ತೆ ಅಧಿಕಾರಾರೂಢರಾಗುವವರೆಗೆ ನಿಜಾಂ ಪ್ರಭುಗಳೇನೋ ದಾರಿ ನೋಡುವರಂತೆ. ಕೂಲಿಕಾರ ಪಕ್ಷ ಉರುಳಿ ಟೋರಿ ಪಕ್ಷ ಅಧಿಕಾರಕ್ಕೆ ಬಂದರೆ ತಮ್ಮ ಕರಾರುಗಳಿಗೆ ಒಪ್ಪಿಗೆ ದೊರೆಯಬಹುದೆಂದು ಅವರು ಹಾರೈಸಿದ್ದಾರಂತೆ. ಹಿಂದುಸ್ತಾನ ಸರಕಾರ ಮತ್ತು ಹೈದರಾಬಾದ ಸಂಸ್ಥಾನ ಸರಕಾರ ಇಲ್ಲವೆ ಬ್ರಿಟಿಶ ಸರಕಾರಗಳ ನಡುವೆ ನಡೆದ ಒಡಂಬಡಿಕೆಯ ಕರಾರುಗಳಾವುವೆಂಬ ಬಗ್ಗೆ ಅಧಿಕೃತವಾಗಿ ಯಾವ ಪ್ರಕಟನೆಯೂ ಹೊರಟಿಲ್ಲ. ಆದುದರಿಂದ ಈ ಬಗ್ಗೆ ಹೆಚ್ಚಿಗೆ ಚರ್ಚೆಮಾಡುವ ಅವಕಾಶವಿಲ್ಲ. ಆದರೂ ಪ್ರತಿಗಾಮಿ ಬ್ರಿಟಿಶ ಟೋರಿ ಪಕ್ಷದ ಸಹಾಯವನ್ನಪೇಕ್ಷಿಸಿ ನಿಜಾಂ ಪ್ರಭುಗಳು ಕಾಲವಿಲಂಬ ಮಾಡುತ್ತಿದ್ದರೆ ಅವರ ಗೌರವಕ್ಕೆ ಅದೆಂದಿಗೂ ಶೋಭಿಸದು. ಆದುದರಿಂದ ನಿಜಾಂ ಪ್ರಭುಗಳು ಇನ್ನುಮೇಲಾದರೂ ತಮ್ಮ ಧೋರಣದ ಪುನರ್ವಿಚಾರ ಮಾಡಿ ಸಮಂಜಸವಾದ ಮಾರ್ಗವನ್ನನುಸರಿಸಿ ತಮ್ಮ ಸಂಸ್ಥಾನದ ಮತ್ತು ಇಡೀ ದೇಶದ ಹಿತವನ್ನು ಸಾಧಿಸಿ ಕೃತಾರ್ಥರಾಗಬೇಕೆಂದು ಬಿನ್ನವಿಸುತ್ತೇವೆ.

ಸಮ್ಮಿಶ್ರ ಮಂತ್ರಿಮಂಡಲ

ಯಾವುದೊಂದು ಸರಕಾರ ಸುಸೂತ್ರವಾಗಿ ಆಡಳಿತವನ್ನು ಸಾಗಿಸಬೇಕಾದರೆ ಆ ಸರಕಾರದ ಸೂತ್ರಚಾಲಕರಲ್ಲಿ ಮತೈಕ್ಯವಿರುವದವಶ್ಯವೆಂದು ಬೇರೆ ಹೇಳಬೇಕಿಲ್ಲ. ಧ್ಯೇಯ ಧೋರಣಗಳಲ್ಲಿ ಭಿನ್ನಾಭಿಪ್ರಾಯ ಹೆಚ್ಚಿದ್ದರೆ ಇಲ್ಲವೆ ಮತೈಕ್ಯವಿಲ್ಲದಿದ್ದರೆ ಆಡಳಿತ ಯಂತ್ರವು ಕ್ರಮಬದ್ಧವಾಗಿ ಸಾಗಲಾರದು. ಕೇಂದ್ರ ಅಂತರಾಳ ಮಂತ್ರಿಮಂಡಳದಲ್ಲಿ ಈ ಬಗೆಯ ಮತೈಕ್ಯವಿರುವದು.

—[illegible]ನೇ ಪುಟಕ್ಕೆ

ನಮ್ಮ ಹೊಲಿಗೆಯ ಕಲೆ

ಲೇ. ಶ್ರೀ ಸಿ. ನಾರಾಯಣರಾವ್,
ಸೂಜೀ ಕಲಾವಿದ, ಮೈಸೂರು

ಒಂದು ದೇಶದ ಸಂಸ್ಕೃತಿ ಮತ್ತು ನಾಗರಿಕತೆಗಳ ಹೊರಮೈಯ್ಯೆಂದರೆ ಉಡುಪು. ನಮ್ಮವರು ಪರದೇಶಗಳಿಗೆ ನಮ್ಮ ಉಡುಪಿನಲ್ಲಿಯೇ ಹೋಗಿ ಹಾಸ್ಯಕ್ಕೆ ಗುರಿಯಾದುದಕ್ಕೆ ಹಲವು ನಿದರ್ಶನಗಳಿವೆ. ಅಷ್ಟಲ್ಲದೆ ಶಿಕ್ಷೆಗೆ ಇಲ್ಲವೆ ನಾನಾ ವಿಧದ ತೊಂದರೆಗಳಿಗೆ ಸಿಕ್ಕಿದ್ದೂ ಉಂಟು. ಮೊನ್ನೆ ಮೊನ್ನೆ ಅಮೇರಿಕಕ್ಕೆ ಹೋದ ನಮ್ಮ ನಾಡಿಗ ಕೃಷ್ಣಮೂರ್ತಿಯವರಿಗೂ ಇಂತಹ ಅನುಭವವೊಂದು ಉಂಟಾಯಿತೆಂದು ಸುದ್ದಿ. “ವಸ್ತ್ರೇಣ, ವಪುಷಾ, ವಾಚಾ...” ಎಂಬ ಮಾತಿನಂತೆ ಮನುಷ್ಯನ ಹೊರವ್ಯಕ್ತಿತ್ವವನ್ನು ಮೊದಲು ಬಿಂಬಿಸುವುದು ಅವನ ಉಡಿಗೆ. ಅದಕ್ಕೆ ಅನೇಕ ಪದ್ಧತಿಗಳಿವೆಯೆಂಬುದು ಮೇಲಿನ ಮಾತಿನಿಂದ ತಿಳಿದು ಬರುತ್ತದೆ.

ಇಂದಿನ ವರೆಗೆ ದಾಸ್ಯದಲ್ಲಿದ್ದ ಹಿಂದುಸ್ಥಾನವು ತನ್ನ ನಗರಗಳಲ್ಲಿ ಯುರೋಪ್ಯ ಬಾಹ್ಯಾಲಂಕರಣ ರೀತಿಯನ್ನೇ ಅನುಸರಿಸಲು ಪ್ರಯತ್ನಪಡುತ್ತ ಬಂತು. ನಗರ ನಿರ್ಮಾಣವೇ ಪಾಶ್ಚಾತ್ಯ ಪದ್ಧತಿಯ ಮೇರೆಗೆ ನಡೆಯಿತೆಂದ ಮೇಲೆ ನಗರಸ್ಥ ನಾಗರಿಕರ ಊಟ ಉಡಿಗೆಗಳ ರೀತಿನೀತಿಗಳ ಬಗ್ಗೆ ಹೊಸದಾಗಿ ಹೇಳಬೇಕೆ? ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರಭಾವದಿಂದ ಈ ಅಂಧಾನುಕರಣ ಉಡುಪಿನಲ್ಲಿ ಕಡಿಮೆಯಾಗ ತೊಡಗಿದೆ. ಉಡುಪಿನಲ್ಲಿ ಸ್ವಾತಂತ್ರ್ಯ ಘೋಷಿಸಿದ್ದೆಂದರೆ ಖಾದಿ—ಅದರಲ್ಲೂ “ನೆಹರೂ ಶರ್ಟು” ಮತ್ತು “ಗಾಂಧೀ ಟೋಪಿ”!

ಉಡುಪಿನ ನೈತಿಕ ಬಲವನ್ನು ತಿಳಿಯಬೇಕಾದರೆ ಪೋಲೀಸು ಮತ್ತು ಸೈನ್ಯಶಾಖೆಗಳತ್ತ ನೋಡಬೇಕು. ಕಳೆದ ಮಹಾಯುದ್ಧದಲ್ಲಿ ಸೈನ್ಯಕ್ಕೆ ಸೇರಿದವರಲ್ಲಿ ಅನೇಕರು ಕೆಲವಂಟ್ಟಿಗಾದರೂ ಉಡುಪಿನಿಂದ ಮೊದಲಾಗುವ ಅಲ್ಲಿಯ ಶಿಸ್ತಿಗೆ ಮೆಚ್ಚಿ ಸೇರಿದರೆಂದರೆ ತಪ್ಪಾಗಲಾರದು. ಸಮವಸ್ತ್ರವು ಸಹೋದ್ಯೋಗಿಗಳಲ್ಲಿ ಎಂತಹ ಭ್ರಾತೃಭಾವ ಹುಟ್ಟಿಸುತ್ತದೆಂಬದನ್ನು ಯೋಧರು ಬಲ್ಲರು. ಹಿಂದುಸ್ಥಾನದ ರಾಷ್ಟ್ರೀಯತೆ ಉಳಿಯಬೇಕಾದರೆ ನಮ್ಮ ನಾನಾ ಪ್ರಾಂತೀಯರು ರಾಷ್ಟ್ರೀಯ ಉಡುಪನ್ನು ಧರಿಸಬೇಕೆಂದು ಕೇಂದ್ರ ಸರಕಾರ ಕಾಯಿದೆ ಮಾಡುವುದು ಅತ್ಯವಶ್ಯವಾದುದು.

ಇಂದು ನಮ್ಮ ಹೊಲಿಗೆಯ ಕಲೆಯು ಬಹಳ ಹಿಂದುಳಿದಿದೆ. ಪಾಶ್ಚಾತ್ಯಾನುಕರಣ ಸಹ ಚೆನ್ನಾಗಿ ಆಗುತ್ತಿಲ್ಲ. ಎಲ್ಲ ವಿಧದ ದಾರಿದ್ರ್ಯದ ಜೊತೆಗೆ ಕಲಾದಾರಿದ್ರ್ಯವೂ ಕೂಡಿಕೊಂಡಿದೆ. ನಮ್ಮ ಹಳ್ಳಿ ಪಟ್ಟಣಗಳಲ್ಲಿಯ ಹೊಲಿಗೆಯ ಕಸಬು ಕೇವಲ ಕೂಲಿಯ ಕೆಲಸವಾಗಿ ಉಳಿಯದೆ ಒಂದು ನಾಗರಿಕ ಕಲೆಯೆನಿಸಬೇಕಾದರೆ ಕೆಲಸಗಾರರಲ್ಲಿ ಸ್ವಾತಂತ್ರ್ಯದ ಹೊಸಗಾಳಿಯು ಹೊಸ ಹುರುಪನ್ನೆಬ್ಬಿಸಬೇಕು. ಪಾಶ್ಚಾತ್ಯ ದೇಶಗಳಲ್ಲಿ ಹೊಲಿಗೆಯ Academy—ಮಹಾವಿದ್ಯಾಲಯಗಳು ಉತ್ತಮ ಕಲಾವಂತಿಕೆಯ ಪ್ರಶಸ್ತಿಗಳನ್ನು ಕೊಡುತ್ತಿವೆ; ಅಂತಹ ಅಭ್ಯಾಸಾನುಕೂಲವನ್ನು ಪಡೆಯಲು ನಮ್ಮಲ್ಲೂ ಸಾರ್ವಜನಿಕ ಮತ್ತು ಸರಕಾರೀ ಸಹಾಯದಿಂದ ಸಂಸ್ಥೆಗಳುದಯಿಸಬೇಕು. ಪ್ರಧಾನವಾದ ಪ್ರಯೋಜನ ದೃಷ್ಟಿಯನ್ನು ಮರೆಯದೆ ಕಲಾಕೌಶಲವನ್ನು ಕೋರ್ಪಡಿಸುವತ್ತ ನಾವಿಂದು ಸಾಗಬೇಕಾಗಿದೆ. ಆಡಂಬರದ ವಸ್ತ್ರಾಲಂಕಾರದತ್ತ ಲಕ್ಷ್ಯಕೊಡುವುದಕ್ಕಿಂತ ಬಡ ಹಿಂದುದೇಶದಲ್ಲಿ ಆರೋಗ್ಯ, ನೈರ್ಮಲ್ಯ, ಮಿತವ್ಯಯಗಳತ್ತ ಗಮನವಿಡಿ ತದನುಸಾರವಾಗಿ ನಾವು ನಮ್ಮ ಕಲಾಕುಶಲತೆಯನ್ನು ಬಳಸಿ ಹಿಂದೀ ಸ್ತ್ರೀ ಪುರುಷರ ನಾಗರಿಕ ಮತ್ತು ಔದ್ಯೋಗಿಕ ಉಡಿಗೆತೊಡಿಗೆಗಳನ್ನು ರೂಪಿಸಬೇಕಾಗಿದೆ.

ಹೊಲಿಗೆಯ ಕಲೆಯ ಸೌಕರ್ಯಕ್ಕಾಗಿ ಅಗತ್ಯವಿರುವ ಯಾಂತ್ರಿಕೋಪಕರಣಗಳು ಸುಲಭ ದರದಲ್ಲಿ ಎಲ್ಲ ಉದ್ಯೋಗಿಗೂ ಸಿಗಬೇಕಾದರೆ ಅವನ್ನು ನಮ್ಮಲ್ಲೇ ತಯಾರಿಸಬೇಕು. ಯುದ್ಧೋತ್ತರ ಪುನರ್ರಚನಾ ಯೋಜನೆಯ ಕಾರಖಾನೆಗಳ ಯೋಜನೆಯ ಕಾರ್ಯಕರ್ತರು ದರ್ಜಿಗಳ ಅವಶ್ಯಕತೆಗಳನ್ನು ಮರೆಯಕೂಡದು. ಈ ಮಾತನ್ನು ನಮ್ಮ ಸೌಚಿಕ ಸಹೋದರರೂ ತಮ್ಮ ಗಮನಕ್ಕೆ ತಂದುಕೊಳ್ಳಬೇಕಾಗಿದೆ. ಈ ಒಂದು ಉತ್ತಮ ಕಲೆಯು ಗ್ರಾಮ ಕೈಗಾರಿಕೆಗಳಲ್ಲೂ ಪ್ರಮುಖ ಪಾತ್ರವಹಿಸಬಲ್ಲುದು. ವೈಯಕ್ತಿಕ ಉದ್ಯೋಗ ಸಾಧನೆಗಾಗಿ ಕೈಗಾರಿಕೆಗಳ ವಿಕೇಂದ್ರೀಕರಣವನ್ನು ಬಯಸುವ ನಮ್ಮ ಮುತ್ಸದ್ದಿಗಳು ಹೊಲಿಗೆಯ ಸ್ಥಾನವನ್ನು ಮರೆಯದೆ ಅದರ ವೈಜ್ಞಾನಿಕ ಮತ್ತು ವ್ಯಾಪಾರೀ ಲಾಭದಾಯಕತೆಯನ್ನು ಹೆಚ್ಚಿಸಿ ಅದೊಂದು ಆಕರ್ಷಕ ಉದ್ಯೋಗವೆನಿಸಲು ಅಗತ್ಯವಾದ ಯಂತ್ರೋಪಕರಣ ಹಾಗೂ ಸಾಹಿತ್ಯವನ್ನು ಹಳ್ಳಿಪಟ್ಟಣಗಳಲ್ಲಿರುವ ಅಸಂಖ್ಯಾತರಾದ ಹೊಲಿಗೆಯವರಿಗೆ ಒದಗಿಸಿ ಕೊಡಲು ಯತ್ನಿಸಬೇಕು.

ಹೊಟ್ಟೆಯಾದ ಕೂಡಲೆ ಬರುವ ಬಟ್ಟೆಯ ಕೆಲಸ ಹೀಗಿದೆ. ಮತ್ತೊಂದು ಹೊಸ ಸಂಗತಿಯೆಂದರೆ, ಉಡುಪಿನ ಮಾದರಿಯಿಂದಲೇ ಒಂದು ವ್ಯಕ್ತಿಯ ಗುಣಸ್ವಭಾವಗಳನ್ನು ಸಹ ಸ್ಥೂಲವಾಗಿ ಗುರುತಿಸಬಹುದೆಂದು ಮನಃಶಾಸ್ತ್ರೀತ್ಯಾ ಹೇಳಲಾಗುತ್ತದೆ. ಅಲ್ಲದೆ, ವಸ್ತ್ರವು ಮಾನವನ ಅನೇಕ ವಿಧದ ಭಾವನೆಗಳ ಪ್ರತೀಕವಾಗಬಲ್ಲುದೆಂಬುದಕ್ಕೆ ನಮ್ಮ ರಾಷ್ಟ್ರೀಯ ಧ್ವಜವೇ ಸಾಕ್ಷಿ. ಎರಡನೆಯ ಮಹಾಯುದ್ಧದಲ್ಲಿ ಜಪಾನಿಗಳು ತಮ್ಮ ಯೋಧರನ್ನು ರಣಕ್ಕೆ ಕಳಹುವಾಗ ಒಂದು ಕವಚವನ್ನು ತೊಡಿಸುತ್ತಿದ್ದರು; ಆ ಕವಚಕ್ಕೆ ಸಾವಿರ ಹೆಂಗಸರು ಒಂದೊಂದು ಹೊಲಿಗೆಯಿಂದ ಅವರ ಶುಭಾಶಯಗಳನ್ನು ಬಿಂಬಿಸುತ್ತಿದ್ದರು. ಉಡುಪಿನ ಉತ್ಸಾಹದಾಯಕತೆಗೆ ಉದಾಹರಣವಾಗಿ Thomas Hood ಎಂಬವರ The Song of the Shirt — ಶರ್ಟಿನ ಗೀತ ಎಂಬ ಕವನವನ್ನು ತೆಗೆದುಕೊಳ್ಳಬಹುದು. ಹೀಗೆ ನಾಡಿನಲ್ಲಿ ಬಹೂಪಯೋಗಿಯಾದ ಹೊಲಿಗೆಯ ಕಲೆಯತ್ತ ನಮ್ಮ ಉದ್ಯೋಗಿಗಳೂ ಕೈಗಾರಿಕೆಯ ಯೋಜಕರೂ ಲಕ್ಷ್ಯವಿತ್ತು ಇಲ್ಲಿಯೂ ಸ್ವತಂತ್ರ ಹಿಂದುಸ್ಥಾನ ಮುನ್ನಡೆ ತೋರುವಂತೆ ನೋಡಿಕೊಳ್ಳುವುದು ಅಗತ್ಯವಲ್ಲವೆ?

ಹವಾಯ್ ದ್ವೀಪಸ್ತೋಮ

ಸೊಬಗಿನ ಬೀಡು— ಭೂನಂದನ

ಲೇ—ಶ್ರೀ. ನಾಡಿಗ ಕೃಷ್ಣಮೂರ್ತಿ

— ವಿಶೇಷ ಲೇಖನ ೩ —

ಪೆಸಿಫಿಕ್ ಸಾಗರದ ಮಧ್ಯದಲ್ಲಿರುವ ಸುಂದರವಾದ ಹವಾಯ್‌ದ್ವೀಪಗಳ ಗುಂಪು ಅಮೇರಿಕದ ಸಂಯುಕ್ತ ಸಂಸ್ಥಾನದ ೪೯ ನೆಯ ಸಂಸ್ಥಾನವಾಗುವದು. ಹವಾಯ್ ದ್ವೀಪಗಳ ಜ್ಞಾಪಕ ಬಂದಾಗ ಜಪಾನೀಯರು ದಾಳಿ ಮಾಡಿದ ಪರ್ಲ್ ಹಾರ್ಬರ್ ನೆನಪು ಬರುವುದಲ್ಲವೆ? ಹೊನಲೂಲು, ಹವಾಯ್ ದ್ವೀಪದ ಸುಂದರ ನಗರ ಹಾಗೂ ಮುಖ್ಯ ಪಟ್ಟಣ. ಅಲ್ಲಿಂದ ಕೇವಲ ೪೦ ಮೈಲು ಪರ್ಲ್ ಹಾರ್ಬರ್.

ಯುದ್ಧವು ಪ್ರಪಂಚವನ್ನೇ ಬದಲಾಯಿಸಿತು. ಆದರೆ ಹವಾಯ್ ದ್ವೀಪವನ್ನು ಬದಲಿಸಲು ಸಾಧ್ಯವಾಗಲಿಲ್ಲ. ವರ್ಷಾದ್ಯಂತ್ಯವೂ ಇಲ್ಲಿಯ ಹವೆ ತಂಪಾಗಿ ಆಹ್ಲಾದಕರವಾಗಿರುತ್ತದೆ. ಯಾವಾಗ ಬೇಕಾದರೂ ಸುಗಂಧವೀಯುವ ಅರಳಿದ ಹೂವುಗಳು ನಿಮ್ಮನ್ನು ಸ್ವಾಗತಿಸುತ್ತವೆ. ಹೊನಲೂಲುವಿಗೆ ನಮ್ಮ ಹಡಗು ಬಂದಿಳಿದಾಗ, ಹವಾಯಿಗಳು ನಮಗೆ ಅದ್ಭುತ ಸ್ವಾಗತವನ್ನಿತ್ತರು. ವಾದ್ಯಸಮೇತ ಅಲಂಕೃತರಾದ ಹುಡುಗಿಯರು ಸ್ವಾಗತ ಗೀತೆಯನ್ನು ಹಾಡಿದರು. ನಾವು ಹಡಗು ಇಳಿಯುತ್ತಲೇ ಸಿದ್ಧರಾಗಿ ನಿಂತಿದ್ದ ರಮಣಿಯರು ನಮ್ಮ ಕೊರಳಿಗೆ ಹೂಮಾಲೆಯನ್ನು ಹಾಕಿದರು. (ಆ ಮಾಲೆಗಳಿಂದ ಹಣವನ್ನೂ ಕಿತ್ತರು!) ದೂರದಿಂದಲೇ ಹವಾಯಿಯ ಸುಂದರ ಪರ್ವತಗಳನ್ನೂ ರಮಣೀಯವಾದ ಪ್ರದೇಶಗಳನ್ನೂ ನೋಡಿ ಆನಂದಿಸಬಹುದು.

ಜಪಾನಿನ ಬಂದರಾದ ಯೊಕೋಹಾಮದಿಂದ ೯ ದಿನಗಳ ಹಡಗಿನ ಪ್ರಯಾಣದಿಂದ ಹವಾಯಿ ದ್ವೀಪವನ್ನು ತಲುಪಬಹುದು. ಸಾನ್‌ಫ್ರಾನ್ಸಿಸ್ಕೋದಿಂದ ಕೇವಲ ೨೦೯೫ (ಹಡಗಿನ) ಮೈಲುಗಳು. ಆದರೂ ಹಡಗಿನ ಮುಖಾಂತರ ಕೇವಲ ೫ ದಿನಗಳಲ್ಲಿ ಹೊನಲೂಲುವನ್ನು ಮುಟ್ಟಬಹುದು. ವಿಮಾನದ ಮೂಲಕ ಕೇವಲ ಹತ್ತು ಗಂಟೆಗಳು.

ಹವಾಯ್ ದ್ವೀಪಗಳು ೧೫೦೦ ಮೈಲು ಉದ್ದ ಚಾಚಿಕೊಂಡಿವೆ. ಓಹೂ, ಕವಾಯಿ, ಮಾಯಿ, ಹವಾಯಿ ಮತ್ತು ಮೊಲಕಾಯಿ ಎಂಬುವೇ ಮುಖ್ಯವಾದ ಐದು ದ್ವೀಪಗಳ ಗುಂಪು. ಈ ಐದು ದ್ವೀಪಗಳ ಚದುರಳತೆ ೬೨೭೭ ಚದುರ ಮೈಲುಗಳು. ಇಲ್ಲಿಯ ಹವೆ ೬೪° ರಿಂದ ೮೬° ರ ವರೆಗೆ ಬದಲಾಯಿಸುತ್ತಿರುತ್ತದೆ. ಈಶಾನ್ಯ ದಿಕ್ಕಿನಿಂದ ಬೀಸುವ ಮಂದ ಮಾರುತಗಳು ಹೆಚ್ಚು ಸೆಕೆಯುಂಟಾಗದಂತೆ ತಡೆಯುತ್ತವೆ. ಮಳೆ ಸ್ವಲ್ಪ ಸ್ವಲ್ಪ ಬೀಳುತ್ತದೆ. ವರ್ಷದ ಪ್ರತಿ ದಿನವೂ ಸೂರ್ಯನು ಪ್ರಕಾಶಮಾನವಾಗಿರುತ್ತಾನೆ.

ಹವಾಯ್ ದ್ವೀಪಗಳ ಜನಸಂಖ್ಯೆ ೫ ಲಕ್ಷ. ಇದರಲ್ಲಿ ೧/೩ ಭಾಗ ಕಾಕೇಶಿಯನ್ನರು ೧/೩ ಭಾಗ ಜಪಾನೀಯರು. ಉಳಿದ ೧/೩ ಭಾಗದಲ್ಲಿ ಹವಾಯಿಗಳು, ಚೀನೀಯರು, ಫಿಲಿಪಿನ್ನರು, ಪೋರ್ಟೊರೀಕೋದವರು ಮತ್ತು ಕೋರಿಯನ್ನರು. ಇದರಲ್ಲಿ ಬೇಕಾದಷ್ಟು ಸಂಕರ ಜನಾಂಗದವರೂ ಇದ್ದಾರೆ.

೧೭೭೮ ನೆಯ ಇಸ್ವಿಯಲ್ಲಿ ಬ್ರಿಟನ್ನಿನ ಕ್ಯಾಪ್ಟನ್ ಜೇಮ್ಸ್ ಕುಕ್ ಎಂಬಾತನು ಹವಾಯ್ ದ್ವೀಪಗಳನ್ನು ಕಂಡುಹಿಡಿದನು. ಆಗ ಹವಾಯಿಯ ಸ್ವತಂತ್ರ ಜನಾಂಗವಾದ ಪಾಲಿನೇಶಿಯನ್ ಗುಂಪಿನವರು ಅಲ್ಲಿ ವಾಸಿಸುತ್ತಿದ್ದರು. ಅವರಲ್ಲಿಯೇ ಅನೇಕ ಗುಂಪುಗಳಿದ್ದವು. ೧೯ನೇ ಶತಮಾನಕ್ಕೆ ಮುಂಚೆ ಕಮ್ಮೆಮ್ಮ ಎಂದೊಬ್ಬ ಪಾಳೆಯಗಾರ ತುಂಬಾ ಬಲಶಾಲಿಯಾಗಿ, ಎಲ್ಲ ಗುಂಪುಗಳನ್ನೂ ಗೆದ್ದು ತಾನೇ ಅದಕ್ಕೆ ಅಧಿಪತಿಯಾದನು. ೧೮೨೦ ರಲ್ಲಿ ನ್ಯೂ ಇಂಗ್ಲೆಂಡಿನ ಮಿಶನರಿಗಳು ಈ ದ್ವೀಪಕ್ಕೆ ಮೊದಲು ಬಂದ ಬಿಳಿಯರು. ಅವರ ಪ್ರಭಾವ ದಿನೇ ದಿನೇ ಹೆಚ್ಚುತ್ತ ಬಂದು ೧೮೪೦ ರ ವೇಳೆಗೆ, ಆ ದ್ವೀಪದಲ್ಲಿಯೂ ಶಾಸನಬದ್ಧವಾದ ಆಡಳಿತ ಬರಲು ಕಾರಣವಾಯಿತು. ಆ ಮೇಲೆ ಹೆಚ್ಚು ಹೆಚ್ಚಾಗಿ ಅಮೇರಿಕನ್ನರು, ಬ್ರಿಟಿಷರು ಬಂದು ನೆಲಸ ತೊಡಗಿದರು. ಸರಕಾರದ ಪದ್ಧತಿಯ ಮೇಲೆ ಅವರ ಪ್ರಭಾವವು ಬೀಳುತ್ತ ಬಂದಿತು. ಈ ಪರಕೀಯರ ದಾಳಿಯನ್ನು ತಡೆಯಲೋಸುಗ, ಹವಾಯಿಯ ಕೊನೆಯ ರಾಣಿಯಾದ, ರಾಣಿ ಲಿಲುಕಲಾನಿಯ ಮುಖಂಡತ್ವದಲ್ಲಿ ೧೮೯೩ ರಲ್ಲಿ ಒಂದು ಕ್ರಾಂತಿಯುಂಟಾಯಿತು. ಆ ಕ್ರಾಂತಿಯಲ್ಲಿ ರಾಣಿ ತನ್ನ ರಾಜ್ಯ ಕಳೆದುಕೊಂಡಳು. ವಲಸೆ ಬಂದು ನೆಲಸಿದ ಪರಕೀಯರು ರಾಜ್ಯಸೂತ್ರ ಹಿಡಿದುಕೊಂಡು ೧೮೯೪ ರಲ್ಲಿ ತಾತ್ಕಾಲಿಕ ಸರಕಾರ ಸ್ಥಾಪಿಸಿದರು. ಕೊನೆಗೆ ೧೮೯೮ ರಲ್ಲಿ ಈ ದ್ವೀಪಗಳ ಆಡಳಿತ, ಮೇಲ್ವಿಚಾರಣೆ ಅಮೇರಿಕಕ್ಕೆ ಸೇರಿತು. ೧೯೦೦ ರಲ್ಲಿ ಹವಾಯಿಯು ಅಮೇರಿಕದ ಅಧಿರಾಜ್ಯವಾಯಿತು. ಈ ಐದು ದ್ವೀಪಗಳ ಸಂಕ್ಷೇಪ ಪರಿಚಯವನ್ನು ಈ ಕೆಳಗೆ ಮಾಡಿಕೊಡಲು ಇಚ್ಛಿಸುತ್ತೇನೆ:

ಓಹೂ ದ್ವೀಪ

ಪೆಸಿಫಿಕ್ ಸಾಗರದ ಮಾರ್ಗವಾಗಿ ನಡೆಯುವ ವ್ಯಾಪಾರದ ಮುಖ್ಯ ಕೇಂದ್ರ ಓಹೂ ದ್ವೀಪ. ಈ ದ್ವೀಪಗಳ ರಾಜಧಾನಿಯೂ, ಸುಪ್ರಸಿದ್ಧ ಬಂದರೂ ಆದ ಹೊನಲೂಲು ಪಟ್ಟಣವಿರುವುದು ಈ ಓಹೂ ದ್ವೀಪದಲ್ಲಿಯೇ. ಏಶಿಯ, ಆಸ್ಟ್ರೇಲಿಯ ಮತ್ತು ಉತ್ತರ ಅಮೇರಿಕಗಳಿಗೆ ಇಲ್ಲಿಂದ ಸಮುದ್ರಯಾನ ಮತ್ತು ವಿಮಾನಯಾನದ ಸೌಕರ್ಯಗಳಿವೆ. ಹೊನಲೂಲು ಪಟ್ಟಣ ಆಧುನಿಕ ಅಮೇರಿಕದ ಪಟ್ಟಣದ ಮಾದರಿಯಲ್ಲಿದೆ. ಇಲ್ಲಿಯ ಮುಖ್ಯವಾದ ವ್ಯಾಪಾರ ಸಕ್ಕರೆ, ಮತ್ತು ಪರಂಗಿ ಹಣ್ಣು. ಆದರೂ ನಾವಿಲ್ಲಿಳಿದಾಗ ಸಕ್ಕರೆಯ ರೇಶನ್ ಇತ್ತು. ಹವಾಯ್ ದ್ವೀಪಗಳ ಬ್ಯಾಂಕುಗಳು, ಇತರ ಅಧಿಕಾರೀ ಕಚೇರಿಗಳು ಎಲ್ಲವೂ ಇದೇ ಪಟ್ಟಣದಲ್ಲಿ ನಡೆಯುತ್ತವೆ. ಹವಾಯ್ ವಿಶ್ವವಿದ್ಯಾನಿಲಯ, ಹವಾಯ್ ಪುಸ್ತಕಭಂಡಾರ ಪಾಲಿನೇಶಿಯನ್ನರ ಹಳೆಯ ವಸ್ತು ಸಂಗ್ರಹಾಲಯ ಮುಂತಾದುವು ಇರುವುದು ಇಲ್ಲಿಯೇ. ಹವಾಯ್ ದ್ವೀಪಗಳಿಗೆ ಪ್ರಪಂಚದ ಜನ ವಿಹಾರಕ್ಕಾಗಿ ಬರುತ್ತಾರೆ. ಈ ದ್ವೀಪದ ೪೦ ಮೈಲು ಸುತ್ತಲೂ ಕಾರಿನಲ್ಲಿ ತಿರುಗಾಡಿ ಸುಂದರ ದೃಶ್ಯಗಳನ್ನು ನೋಡಬಹುದು. ಇದರೊಂದಿಗೆ ಚರಿತ್ರಾರ್ಹವಾದ ಪರ್ಲ್ ಹಾರ್ಬರ್ ಇರುವುದು. ಇದರ ಉತ್ತರಕ್ಕೆ ಸುಪ್ರಸಿದ್ಧವಾದ ವೈಮಿಯಾ ಸುರಂಗವೂ ಮತ್ತು ಸಕ್ಕರೆ ತಯಾರಿಸುವ ಪಟ್ಟಣಗಳಾದ ಖಾಕು ಮತ್ತು ವೈಹವಾ ಪಟ್ಟಣಗಳಿವೆ. ಇಲ್ಲಿಯೇ ತಾಜ್‌ಮಹಲ್‌ನಂತೆಯೇ ಚಿಕ್ಕದಾಗಿರುವ ಮಾರ್ಮನ್ ದೇವಾಲಯವೂ ಇದೆ.

ಹೊನಲೂಲು ಪಟ್ಟಣದ ಮಧ್ಯದಲ್ಲಿ ಅಯೋಲಾನಿ ರಾಜನ ಅರಮನೆ ಇದೆ. ಇಲ್ಲಿಯೇ ಈಗ ರಾಜ್ಯಸೂತ್ರ ನಡೆಯುತ್ತಿರುವುದು. ವೈಕಾಕಿಯ ಸಮುದ್ರದ ದಂಡೆಯೂ ವಿಹಾರಕ್ಕೆ ಅನುಕೂಲವಾಗಿದೆ.

ಕವಾಯಿ-ಉದ್ಯಾನವನಗಳ ದ್ವೀಪ

ಈ ದ್ವೀಪದ ಅರಣ್ಯ ಸಂಪತ್ತು, ಉದ್ಯಾನವನಗಳ ಬೆಳವಣಿಗೆಗೆ ಅನುಕೂಲ ಮಾಡಿಕೊಟ್ಟಿದೆ. ಈ ಹವಾಯ್ ದ್ವೀಪಗಳಲ್ಲೆಲ್ಲ ಇದೇ ಹಳೆಯದು; ಕ್ಯಾಪ್ಟನ್ ಜೇಮ್ಸ ಕುಕ್ಕನು ಮೊದಲು ಬಂದಿಳಿದಿದ್ದು ಇಲ್ಲಿಯೇ. ಹವಾಯಿ ಜನಪದ ಸಾಹಿತ್ಯದ ಸಂಪತ್ತು ಇದೇ ದ್ವೀಪದಲ್ಲಿಯೇ ಬೆಳೆದಿದೆ. “ಮಲಗಿದ ದೆವ್ವ” “ಪರ್ವತ ರಂಧ್ರ” “ಮೆನ್ ಹ್ಯೂನ್ ಸುರಂಗ” ಮೊದಲಾದ ಕಟ್ಟಡಗಳನ್ನು ಹವಾಯಿ ದೇವತೆಗಳು ಕಟ್ಟಿದ್ದೆಂದು ಇಲ್ಲಿಯ ಪುರಾಣ. ಇಲ್ಲಿಯ ಕೈಗಾರಿಕೆಯೂ ಸಕ್ಕರೆ ಮತ್ತು ಫರಂಗಿಯ ಹಣ್ಣುಗಳಿಗೆ ಸಂಬಂಧಿಸಿದುವೇ.

ಮಾಯಿ—ಸುರಂಗದ್ವೀಪ

ಹವಾಯಿಯ ಸೌಜನ್ಯಕ್ಕೆ ಹೆಸರಾದದ್ದು ಈ ದ್ವೀಪ. ಇದು ಹೊನಲೂಲುವಿಗೂ ಮತ್ತು ಹವಾಯ್ ದ್ವೀಪಕ್ಕೂ ಮಧ್ಯೆ ಇರುವುದರಿಂದ ಯಾವ ಪ್ರಯಾಣಿಕನೂ ಇದನ್ನು ನೋಡದೆ ಹೋಗುವಂತಿಲ್ಲ. ಹಲೇಕಲಾ, ಎಂಬ ಭೂಶಿರ ಇಲ್ಲಿಯೇ ಇರುವದರಿಂದ ಜನರನ್ನು ಆಕರ್ಷಿಸುತ್ತದೆ. ಇಲ್ಲಿಯ ಜನಸಂಖ್ಯೆ ೫೦,೦೦೦. ಈ ದ್ವೀಪ ಹಳ್ಳಿಯ ಸಂಸ್ಕೃತಿಯ ತೌರೂರಾದರೂ ಆಧುನಿಕ ನಾಗರಿಕತೆ ಬೆಳೆದು ಬಂದಿದೆ. ಇಲ್ಲಿಯೂ ಬೇಕಾದಷ್ಟು ಸಕ್ಕರೆ, ಪರಂಗಿಹಣ್ಣಿನ ವ್ಯವಸಾಯ ನಡೆಯುತ್ತದೆ. ಹೊನಲೂಲುವಿನಿಂದ ೭೦ ಮೈಲು ದೂರ ಹಡಗಿನ ಮೂಲಕ ೫ ಘಂಟೆಯ ದಾರಿ.

ಹವಾಯ್--ಮುಖ್ಯ ದ್ವೀಪ

ಈ ದ್ವೀಪಗಳಲ್ಲೆಲ್ಲ ಮೊಲಕಾಯಿ ದ್ವೀಪ ಎಷ್ಟು ಅಪ್ರಾಮುಖ್ಯವೋ!, ಹವಾಯಿ ದ್ವೀಪ ಅಷ್ಟು ಪ್ರಾಮುಖ್ಯ. ಮಂಜು ಮುಸುಕಿದ ಪರ್ವತಶ್ರೇಣಿಗಳು, ಭೂಶಿರಗಳು, ದೊಡ್ಡದಾದ ಅರಣ್ಯಗಳು, ತೆಂಗಿನ ಮರಗಳು ಈ ದ್ವೀಪದ ಮೆರುಗನ್ನು ಹೆಚ್ಚಿಸಿವೆ. ಇಲ್ಲಿಯ ಕೈಗಾರಿಕೆ ಸಕ್ಕರೆಯದು. ಆದರೆ ವ್ಯವಸಾಯವೂ ಸಾಕಷ್ಟಿದೆ. ಇಲ್ಲಿ ಕಾಫಿ ಬೆಳೆ ಬಹಳ ಉತ್ತಮವಾಗಿದೆ. ಹೊನಲೂಲುವಿನಿಂದ ಪ್ರಯಾಣ ಮಾರ್ಗವಿದೆ. ಹಡಗು ಇಲ್ಲವೆ ವಿಮಾನ ಹವಾಯ್ ದ್ವೀಪವನ್ನು ಮುಟ್ಟಿಸುತ್ತದೆ. ಕೇವಲ ಒಂದು ಘಂಟೆ ೪೫ ನಿಮಿಷ ಈ ಪ್ರಯಾಣದ ಅವಧಿ. ಹವಾಯ್ ದ್ವೀಪದ ದಕ್ಷಿಣ ತೀರದಲ್ಲಿ ಕೋನಾ ಜಿಲ್ಹೆಯೊಂದಿದೆ. ಇದು ಮೀನು ವ್ಯವಸಾಯದ ಮುಖ್ಯ ಸ್ಥಳ. ಈ ಸ್ಥಳದಲ್ಲಿ ಹವಾಯಿಯ ಮೂಲ ಜನಾಂಗದವರು ಇನ್ನೂ ಇದ್ದಾರೆ. ಅವರಿನ್ನೂ ಹಳೆಯ ಪದ್ಧತಿಯಲ್ಲೇ ಅನಾಗರಿಕ ಜೀವನ ನಡೆಯಿಸುತ್ತಿರುವುದನ್ನು ಈಗಲೂ ನೋಡಬಹುದು.

ಇಲ್ಲಿಯ ವರೆಗೆ ಅಧಿರಾಜ್ಯವಾಗಿದ್ದ ಹವಾಯಿ ದ್ವೀಪಗಳು ಇನ್ನು ಮುಂದೆ ಸ್ವತಂತ್ರವಾದ ಅಮೇರಿಕದ ೪೯ ನೆಯ ಸಂಸ್ಥಾನವಾಗುವವು. ಹವಾಯ್ ತನ್ನ ಭವಿಷ್ಯ ರೂಪಿಸಿಕೊಳ್ಳುವದು. ತನ್ನ ರಾಜ್ಯಭಾರದಲ್ಲಿ ಕಾಂಗ್ರೆಸ್ ಮತ್ತು ಸೆನೆಟನಲ್ಲಿ ಪ್ರಾತಿನಿಧ್ಯಹೊಂದಿ ಜವಾಬ್ದಾರಿ ತೆಗೆದುಕೊಳ್ಳುವದು. ಅಮೇರಿಕೆದ ಸಂಯುಕ್ತ ಸಂಸ್ಥಾನದ ಕಿರೀಟದಲ್ಲಿ ಹವಾಯ್ ಒಂದು ಸುಂದರವಾದ ಮುತ್ತಾಯಿತು.

೧೯೪೭ನೆಯ ವರ್ಷದ ಬಿ. ಎ. ಇಂಟರ ಮಿಡಿಯಟ್ ಮತ್ತು ಮ್ಯಾಟ್ರಿಕ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗದ, ಆದರ ನಿಯಮಗಳನ್ವಯ ಪೂರಕ ಪರೀಕ್ಷೆಗೆ ಕುಳಿತುಕೊಳ್ಳಲು ಅಪ್ಪಣೆಯಿಲ್ಲದ ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯೋತ್ಸವದ ನಿಮಿತ್ತ ಪೂರಕ ಪರೀಕ್ಷೆಗಳಿಗೆ ಕುಳಿತುಕೊಳ್ಳಲು ಅಪ್ಪಣೆ ಕೊಡಬೇಕೆಂದು ಪಾಟಣಾ ವಿಶ್ವವಿದ್ಯಾಲಯದ ಉಪಕುಲಪತಿಗಳು ಸಿಂಡಿಕೇಟ ಸಭೆಗೆ ಶಿಫಾರಸು ಮಾಡಿರುವರು.

ಕರ್ಮವೀರ ಹರಿಜನ ಪುರವಣಿ

"ಮುಸಲ್ಮಾನರಿಗೆ"

"ಪಾಕಿಸ್ತಾನದಲ್ಲಿಯ ಮುಸಲ್ಮಾನೇತರರು ಕೈಕಾಲು ಬಿಡಹತ್ತಿರುವ ಲಕ್ಷಣಗಳು ಕಾಣ ಹತ್ತಿವೆ. ತಮ್ಮ ಮತ್ತು ತಮ್ಮ ವಿತ್ತಜೀವಿತಗಳ ಬಗೆಗೆ ಅವರಿಗೆ ಸುರಕ್ಷಿತತೆ ಎನಿಸುತಿರುವಂತೆ ತೋರುವದಿಲ್ಲ. ನೀವು, ನಿಮ್ಮ ಪರಮಾತ್ಮ ಮತ್ತು ನಿಮ್ಮ ಇತಿಹಾಸವನ್ನನುಲಕ್ಷಿಸಿದ್ದಾದರೆ ಅವರು ಹೀಗೆ ಭಾವಿಸತಕ್ಕದ್ದಲ್ಲ. ಆದರೆ ಕಳೆದ ಇನ್ನೂರುವರುಷಗಳವರೆಗಿನ ಬ್ರಿಟಿಶರ ಪ್ರಭುತ್ವದ ಪರಿಣಾಮವಾಗಿ ಅವರು ಇಸ್ಲಾಮದ ಇತಿಹಾಸದಿಂದ ಬಹಳದೂರ ಉಳಿದಿರುವರು. ಇಸ್ಲಾಮ ಸಾಹಿತ್ಯ, ಕಾನೂನು ಶಾಸ್ತ್ರ ಮತ್ತು ಜೀವನದಿಂದಲೂ ಅವರು ಬಹಳದೂರ ಇದ್ದಾರೆ. ಆದುಪರಿಂದ ಪಾಕಿಸ್ತಾನದಲ್ಲಿ ಯಾವದೇ ಮುಸಲ್ಮಾನನಿಗೆಇರುವಷ್ಟು ಹಕ್ಕು ಬಾಧ್ಯತೆಗಳುತನಗೂ ಇರಬಲ್ಲವೆಂಬುದು ಅವರಿಗೆ ತಿಳಿಯದಂತಾಗಿದೆ. ಮುಸಲ್ಮಾನೇತರ ಅಲ್ಪಸಂಖ್ಯಾಕರ ಸಂಬಂಧ ಪಲ್ಲಿ ನೀವು ಮಾಡಬೇಕಾದ ಕರ್ತವ್ಯದ ಬಗ್ಗೆ ಕಾಯದೆ ಅಜಂ ಮಹಮ್ಮದಅಲ್ಲಿ ಜಿನ್ನಾರವರು ಈ ಮೊದಲು ನಿಮ್ಮನ್ನು ಎಚ್ಚರಿಸಿರುವರು. ಅಲ್ಲದೆ ಭಾವೀಭದ್ರತೆ ಮತ್ತು ಅಭಿವೃದ್ಧಿಯ ಬಗ್ಗೆ ಯಾವದೇ ರೀತಿಯಿಂದ ಚಿಂತಿಸುವ ಕಾರಣವಿಲ್ಲೆಂದೂ ನಿಮ್ಮ ಪರವಾಗಿ ಅವರಿಗೆ ಆಶ್ವಾಸನ ಕೊಟ್ಟಿದ್ದಾರೆ. ನಿಮಗೆ ಮತ್ತೊಮ್ಮೆ ನೆನಪುಮಾಡಿಕೊಡಬೇಕೆಂದು ನಿಮ್ಮ ಕುರಾಣದೊಳಗಿನ, ಹಾದಿಸ ಮತ್ತು ಇತಿಹಾಸದೊಳಗಿನ ಕೆಲ ಉಲ್ಲೇಖಗಳನ್ನು, ಉದ್ಧರಿಸಬಯಸುತ್ತೇವೆ. ನೀವು ನಿಷ್ಠ ಮುಸಲ್ಮಾನರಾಗುವಿರೆಂದೂ ನಿಮ್ಮ ದೇವರು ಮತ್ತು ನಿಮ್ಮ ಧರ್ಮಗುರುವಿನ ಆದೇಶಗಳನ್ನು ಅಲ್ಲಗಳೆಯಲಾರಿರೆಂದೂ ನಾವು ಆಶಿಸುತ್ತೇವೆ. ನಿಮ್ಮ ಕೃತ್ಯಗಳಿಂದಲೇ ಮುಸಲ್ಮಾನೇತರರು ಇಸ್ಲಾಮ ಮತ್ತು ಪಾಕಿಸ್ತಾನವನ್ನು ವರೆಗೆ ಹಚ್ಚುವರು.

೧) ಪವಿತ್ರ ಕುರಾಣವು ಸಾರುತ್ತದೆ:

"ಪರಮಾತ್ಮನು ಬಲು ಬೇಗ ನಿಮ್ಮನ್ನು ಮತ್ತು ನಿಮ್ಮ ಮುಸಲ್ಮಾನೇತರ ಶತ್ರುಗಳನ್ನು ಮಿತ್ರತ್ವದ ಬಂಧನದಿಂದ ಕಟ್ಟುತ್ತಾನೆ. ಹಾಗೆ ಮಾಡಲು ಪರಮಾತ್ಮನು ಶಕ್ತನಾಗಿರುವನು. ಅವನು ಕರುಣಾಪೂರ್ಣ, ದಯಾಪೂರಿತನು. ಯಾರು ನಿಮ್ಮೊಡನೆ ಹೋರಾಡಿಲ್ಲವೊ ಇಲ್ಲವೆ ನಿಮ್ಮನ್ನು ನಿಮ್ಮ ಮನೆ ಬಿಟ್ಟು ಹೊರಗೆ ಹಾಕಿಲ್ಲವೊ ಅಂಥವರೊಡನೆ ನ್ಯಾಯ ಮತ್ತು ವಿನಯಪೂರ್ವಕವಾಗಿ ವರ್ತಿಸತಕ್ಕದ್ದು. ಯಾರು ನ್ಯಾಯನಿಷ್ಠುರರಾಗಿರುವರೋ ಅವರನ್ನೆ ಪರಮಾತ್ಮನು ಪ್ರೀತಿಸುವನು." (ಕುರಾಣ ೨೮ ನೆ ಪ್ರಕರಣ)

೨) ಆ ಪುಸ್ತಕ ಮತ್ತೆ ಹೇಳುವದೇನಂದರೆ:- "ಮುಸಲ್ಮಾನೇತರರ ದೇವ-ದೇವತೆಗಳನ್ನು ಅಪಶಬ್ದಗಳಿಂದ ನಿಂದಿಸಬೇಡಿ; ಹಾಗೆ ಮಾಡಿದ್ದಾದರೆ ಅವರೂ ನಿಮ್ಮ ಅಲ್ಲಾನನ್ನು ಕಟುವಾಕ್ಯಗಳಿಂದ ಟೀಕಿಸಬಹುದು" (ಕುರಾಣ ಪ್ರಕರಣ ೬)

೩) ಧರ್ಮಗುರು ಹೇಳಿದ್ದು— "ಯಾವನೊಬ್ಬ ಮುಸಲ್ಮಾನನು ಮುಸಲ್ಮಾನೇತರನನ್ನು ಪೀಡಿಸಿದರೆ, ಅವನಿಗೆ ಹಾನಿಯನ್ನುಂಟು ಮಾಡಿದರೆ ಇಲ್ಲವೆ ಯೋಗ್ಯತೆಮೀರಿ ಅವನಿಗೆ ಕೆಲಸದ ಭಾರವನ್ನು ಹೊರಿಸಿದ್ದಾದರೆ, ಅವನ ಒಪ್ಪಿಗೆ ಪಡೆಯದೆ ಅವನಿಂದ ಏನನ್ನಾದರೂ ಕಸಿದುಕೊಂಡು ಹೋದದ್ದಾದರೆ ನ್ಯಾಯ ನಿರ್ಣಯದ ಕಾಲಕ್ಕೆ ನಾನು ಆ ಮುಸಲ್ಮಾನೇತರನ ಬೆಂಬಲಕ್ಕೆ ನಿಂತು ಮುಸಲ್ಮಾನನ ವಿರುದ್ಧ ಪರಮಾತ್ಮನಲ್ಲಿ ದೂರು ಮಾಡಿಕೊಳ್ಳುವೆ. (ಜಾಮಾ ಫುಲ್‌ಫಾನ್ ಎಂದು ಕರೆಯಲ್ಪಡುವ ಹಾದೀಸ ಸಂಗ್ರಹ ಪುಸ್ತಕ ೨ ಪುಟ ೧೩ ಮತ್ತು ಬಿಷ್ಕತ್)

೪) ಧರ್ಮಗುರುವು ಹೇಳುವನು— ತಮ್ಮ ಧರ್ಮಮಂದಿರಗಳಲ್ಲಿ ಏನು ಬೇಕಾದ್ದನ್ನು ಮಾಡಬಹುದೆಂದು ನಾನು ಮುಸಲ್ಮಾನೇತರರಿಗೆ ವಚನ ಕೊಟ್ಟಿದ್ದೇನೆ. ಅವರ ಶಕ್ತಿಮೀರಿ ಕೆಲಸಮಾಡಲು ನಾನು ಅವರಿಗೆ ಹೇಳುವದಿಲ್ಲ. ಅವರ ಹೊರಗಿನ ಶತ್ರುಗಳಿಂದ ನಾನು ಅವರನ್ನು ರಕ್ಷಿಸುವೆ. ಅವರ ಧರ್ಮದಲ್ಲಿ ಅವರಿಗೆ ಸಂಪೂರ್ಣ ಸ್ವಾತಂತ್ರ್ಯವುಂಟು. (ಮೇಲಿನ ಗ್ರಂಥ ಪುಟ ೧೪)

[೫] ಮುಸಲ್ಮಾನೇತರರ ರಕ್ತವು ನನ್ನ ರಕ್ತದಷ್ಟೇ ಚನ್ನಾಗಿದೆ ಎಂದು ನುಡಿಯುವನು ಈ ಧರ್ಮಗುರುವು. ನಿರಪರಾಧಿಯಾದ ಮುಸಲ್ಮಾನೇತರನ ರಕ್ತವನ್ನು ಸುರಿಸಿದ ಅಪರಾಧವನ್ನು ಮಾಡಿದ ಮುಸಲ್ಮಾನನು ನನ್ನ ರಕ್ತವನ್ನು ಸುರಿಸಿದ ಅಪರಾಧ ಮಾಡಿದಂತೆಯೇ ಸೈ [ನಯಾಲಕುಲುಬ]

೬) ಹಿಂದುಸ್ತಾನದಲ್ಲಿಯ ಮುಸಲ್ಮಾನರ ಅಡಳಿತದ ಇತಿಹಾಸಕಾರನಾದ ಅಬುಸ್ ಸಾರವಾಣಿಯವರು ಈರೀತಿ ಉಲ್ಲೇಖಿಸಿದ್ದಾರೆ: ಷೀರಶಹಾನ ಆಳಿಕೆಯ ಕಾಲಕ್ಕೆ ಅವನ ಯುವರಾಜನು ಆಗ್ರಾದಲ್ಲೊಂದು ದಿನ ಆನೆಯೊಂದರ ಮೇಲೆ ಕುಳಿತು ಮುಸಲ್ಮಾನೇತರ್ ಅಂಗಡಿಕಾರನ ಮನೆಯ ಮುಂದೆ ಹಾಯಿದುಹೋದನು. ಆಗಅವನು ಆ ವ್ಯಾಪಾರಿಯ ಹೆಂಡತಿಯನ್ನು ದಿಟ್ಟಿಸಿ ನೋಡಿ ಅವಳ ಕಡೆಗೆ ಒಂದು ಎಲೆಯನ್ನು ಒಗೆದನು. ಅವಳು ತನ್ನ ಗಂಡನಿಗೆ ಈ ಸಂಗತಿಯನ್ನು ತಿಳಿಸಿದನು. ವಿಚಾರಾಂತ್ಯದಲ್ಲಿ ಅಪರಾಧಿಯ ಪತ್ತೆಯು ಗಂಡನಿಗೆ ಹತ್ತಿತು. ಆದರೆ ಭಾವೀ ಅರಸನ ವಿರುದ್ಧ ದೂರಿಕೊಳ್ಳಲು ಅವನು ಸಿದ್ಧನಾಗಲಿಲ್ಲ. ಆದರೆ ನೆರೆಯಲ್ಲಿದ್ದ ಮುಸಲ್ಮಾನರು ಅರಸನ ಕಡೆಗೇ ಅರ್ಜಿ ಮಾಡಿಕೊಳ್ಳಿರೆಂದು ಅವನಿಗೆ ಪ್ರೋತ್ಸಾಹಿಸಿದರು. ಈ ಸುದ್ದಿ ಷೀರಶಹಾನಿಗೆ ಗೊತ್ತಾದ ಕೂಡಲೆ ರಾಜಪುತ್ರನ ವಿರುದ್ಧ ವಾರಂಟು ಹೊರಡಿಸಿದನು. ಮತ್ತು ರಾಜಪುತ್ರನ ಹೆಂಡತಿ ಅಂದರೆ ತನ್ನ ಸ್ವಂತ ಸೊಸೆಯನ್ನೇ ಕರೆಯಿಸಿ, ಆ ಅಂಗಡಿಕಾರನ ಕೈಯಲ್ಲಿ ಒಂದು ಎಲೆಯನ್ನು ಕೊಟ್ಟು "ಈ ಎಲೆಯನ್ನು ರಾಜಪುತ್ರನ ಹೆಂಡತಿಯ ಮೇಲೆ ಒಗೆದು ನಿಮ್ಮ ಮರ್ಯಾದೆಯ ಪ್ರತೀಕಾರ ಮಾಡಿ ಒಬ್ಬ ಮನುಷ್ಯನ ಹೆಂಡತಿಯ ಅಪಮಾನ ಮಾಡುವದೆಂದರೇನೆಂಬದರ ಅನುಭವ ಈ ಮೂರ್ಖ ರಾಜಪುತ್ರನಿಗೆ ಬರುವಂತೆ ಮಾಡಿರಿ' ಎಂದು ಹೇಳಿದನು. (ಬಾರಿ ಖಿಅಫಗಾನಿ)

೭) ಖಲೀಫ ಅಲ್ಲಿಯು ತನ್ನ ಚಿಲಖತ್ತನ್ನು ಕಳೆದುಕೊಂಡಿದ್ದನು. ಮುಸಲ್ಮಾನೇತರ (ಜ್ಯೂ) ನೊಬ್ಬ ಅದನ್ನು ತೆಗೆದುಗೊಂಡು ಹೋಗುತಿರುವದನ್ನು ನೋಡಿದನು. ಅವನು ತನ್ನ ಕೈಕೆಳಗಿನ ಕಾಝಿಯ ಮುಂದೆ ಆ ಕಳ್ಳನನ್ನು ನಿಲ್ಲಿಸಿದನು. ಕಾಝಿಯು ಸಾಕ್ಷಿದಾರರಾರೆಂದು ಕೇಳಿದನು. ಸಾಕ್ಷಿದಾರರೆಂದರೆ ಕೇವಲ ಅವನ ಹೆಂಡತಿ ಫಾತಿಮಾ ಮತ್ತು ಹಸನ ಮತ್ತು ಹುಸೇನ ಈ ಇಬ್ಬರು ಮಕ್ಕಳು. ಆ ಜ್ಯೂ ಮನುಷ್ಯನಿಗೆ ಕಾಝಿಯು ಸಂಶಯದ ಲಾಭ ಕೊಟ್ಟನು. ಪರಿಣಾಮವಾಗಿ ಅಲ್ಲಿ ಸಾಹೇಬರಿಗೆ ಆ ಚಿಲಖತ್ತು ಕಾಯಂವಾಗಿ ಇಲ್ಲದಂತಾಯಿತು. ಸಾಕ್ಷಿದಾರರು ಎಷ್ಟೇ ಪ್ರಸಿದ್ಧವ್ಯಕ್ತಿಗಳಾಗಿದ್ದರೂ ಫಿರ್ಯಾದಿಯ ಆಪ್ತೇಷ್ಟರಾಗಿದ್ದರಿಂದ ಅವರ ಹಿತಸಂಬಂಬಂಧಿಗಳೆಂದು ಕಾಝಿಯ ಅಭಿಪ್ರಾಯ. ನ್ಯಾಯವನ್ನು ಕೊಡಬೇಕು. ಇಷ್ಟೇ ಅಲ್ಲ ಆದರೆ ಜನತೆಗೆ ಅದನ್ನು ತೋರಿಸಿಕೊಡತಕ್ಕದ್ದೆಂಬುದಾಗಿ ಇಸ್ಲಾಮದ ನ್ಯಾಯಶಾಸ್ತ್ರ ಸಾರುತ್ತದೆ. (ಇಸ್ಲಾಮದ ಇತಿಹಾಸ)

೮. ದಮಸ್ಕಸ್‌ದಲ್ಲಿ ಮುಸಲ್ಮಾನ ರಾಜನೊಬ್ಬನು ಅರಮನೆಯಂಥ ಮಸೀದೆಯೊಂದನ್ನು ಕಟ್ಟಿಸುತಿದ್ದನು. ಅದರ ವೇದಿಕೆ ಒಂದು ಚರ್ಚಿನ ಪಟಾಂಗಣದಲ್ಲಿ ಅತಿಕ್ರಮಣ ಮಾಡುತಿದ್ದಿತು. ಮಸೀದೆಯ ಕಟ್ಟಡವನ್ನು ಪೂರ್ಣಗೊಳಿಸುವದಕ್ಕಾಗಿ ಆ ಚರ್ಚದ ಕಂಪೌಂಡನ್ನು ಮಾರಲು ಚರ್ಚಿನ ಪಾದ್ರಿಯು ಒಪ್ಪಲಿಲ್ಲ. ಆಳುವ ಅರಸನಿಗೆ ಮುಸಲ್ಮಾನ ಕಾಯದೆ ಗೊತ್ತಿರಲಿಲ್ಲ. ಮತ್ತು ಅವನು ಒಳ್ಳೆಯವನೂ ಆಗಿರಲಿಲ್ಲ. ಪರಿಣಾಮವಾಗಿ ಚರ್ಚಿನ ಅಂಗಳದ ಮೇಲೆ ಮಸೀದೆಯ ವೇದಿಕೆಯನ್ನು ಕಟ್ಟಬೇಕೆಂದು ವಿಧಿಸಿದನು. ಮುಂದೆ ಸ್ವಲ್ಪ ಕಾಲದಲ್ಲಿಯೆ ಇದೀ—ಈ—ಅಬ್ದುಲ್ ಅಜೀಜ ಇವರು ಅಧಿಪತಿಗಳಾದರು. ಅವರು ಮಾಡಿದ ಮೊಟ್ಟಮೊದಲನೆಯ ಕೆಲಸವೆಂದರೆ ಆ ಮಸೀದೆಯನ್ನು ಕೆಡಹಿ ಕ್ರಿಶ್ಚನ್‌ರಿಗೆ ಅವರ ಚರ್ಚಿನ ಭೂಮಿಯನ್ನು ತಿರುಗಿ ಕೊಡಿಸಿದ್ದು. (ಇಸ್ಲಾಮದ ಇತಿಹಾಸ)

೯. ಮುಸಲ್ಮಾನರು ಇಜಿಪ್ತವನ್ನು ವಶಪಡಿಸಿಕೊಂಡಾಗ ಮುಸಲ್ಮಾನ ಸೈನ್ಯದಲ್ಲಿಯ ಸೈನಿಕನೊಬ್ಬನು ಜೀಸಸನ ಪ್ರತಿಮೆಗೆ ಗುರಿಯಾಗಿ ಬಾಣವೊಂದನ್ನು ಎಸೆದನು. ಅದರಿಂದ ಆ ಪ್ರತಿಮೆಯ ಎಡಗಣ್ಣು ಪೂರ್ಣವಾಗಿ ನಾಶವಾಗಿ ಹೋಯಿತು. ಸೇನಾಪತಿಯವರಲ್ಲಿ ಕ್ರಿಶ್ಚನ್‌ನು ಮನವಿ ಮಾಡಿಕೊಂಡು ನಷ್ಟ ಪರಿಹಾರವನ್ನು ಕೇಳಿದನು. ಮುಸಲ್ಮಾನ ಸೇನಾಪತಿಯು ಎಡಗಣ್ಣಿಗೆ ಒಂದು ಬಾಣ ಹೊಡೆಯುವ ಅಧಿಕಾರ ಕ್ರಿಶ್ಚನ್‌ರಿಗೆ ಇದೆಯೆಂದು ಸೇನಾಪತಿಯು ಸಾರಿ, ತನ್ನ ಅಯೋಗ್ಯತೆಗಾಗಿ ಸೇನಾಪತಿಯು ಈ ಶಿಕ್ಷೆಯನ್ನು ಸುಭೋಗಿಸಬೇಕೆಂದು ವಿಧಿಸಿದರು. ತನ್ನ ಕೈಕೆಳಗಿನ ಸೈನಿಕನನ್ನು ನಿಯಂತ್ರಣದಲ್ಲಿಡುವದನ್ನು ಅಲಕ್ಷಿಸತಕ್ಕದ್ದಿರಲಿಲ್ಲೆಂಬುದನ್ನು ಸೇನಾಪತಿಯು ಒಪ್ಪಿದನು. (ಇಸ್ಲಾಮದ ಇತಿಹಾಸ)

೧. ಬೇಗಮ ಫಿದರ್ಗಸರಿಝ್ವಿ ಎಸ್. ಡಿ. ಓ. ಬಂಗಲೆ ಕಿಶೋರಗಂಜ.

೨. ಅಹಮುದುದ್ದೀನ ಅಹಮ್ಮದ ಸೆಕ್ರೆಟರಿ ಸಬ್‌ಡಿವಿಜನಲ್ ಮುಸ್ಲಿಂಲೀಗ.

೧. ಮುಹಮ್ಮದ ಅಕ್ತರ ಅಲಿ, ಕಿಶೋರಗಂಜದ ಶಾಹಿದಿ ಮಸೀದೆಯ ಪೂಜಾರಿ.

೨. ಮುಹಮ್ಮದ ಮುಸ್ಲಿಮು ಉದ್ದೀನ ಸುಪರಿಂಟೆಂಡೆಂಟ್ರ, ಪೆಬಟ ನಗರ ಹೀನಿಯರ ಶಾಲೆ.

(ನನಗೆ ಬಂದದ್ದನ್ನು ಇದ್ದಕ್ಕಿದ್ದಂತೆಯೇ ಮೇಲೆ ವಿವರಿಸಲಾಗಿದೆ. ಈ ಉಪದೇಶಗಳಂತೆ ನಡೆದುಕೊಳ್ಳಲಾಗುವದೆಂದು ಆಶಿಸುವಾ. ಸಾವಿರ ಮಾತಾಡುವದಕ್ಕಿಂತ ಒಂದು ಕೆಲಸ ಮಾಡಿ ತೋರಿಸುವದು ಲೇಸು.

ಸೋದೆಪುರ ಮೋ. ಕ. ಗಾಂಧಿ

೧೩—೮—೪೭

ಟಿಪ್ಪಣಿಗಳು

ಪ್ರಾರ್ಥನೆಯಲ್ಲಿ ಇವನ್ನೇಕೆ ಸೇರಿಸಿದ್ದು ?

ಶ್ರೀನಗರದಲ್ಲಿ ನಾನು ಮೂರುದಿನ ತಂಗಿದಾಗ ಶ್ರೀ ಲಾಲಾಕಿಶೋರಲಾಲರಬಂಗಲೆಯ ಅವರಣದಲ್ಲಿ ಪ್ರಾರ್ಥನೆಯನ್ನು ಜರುಗಿಸಿದೆ. ಆದರೆ ನಾನು ಭಾಷಣಗಳನ್ನೇನೂ ಮಾಡಲಿಲ್ಲ. ದಿಲ್ಲಿಯನ್ನು ಬಿಡುವಾಗ ನಾನು ಹಾಗೆ ಸಾರಿದ್ದೆನು. ಆದರೆ ಕೆಲ ಸಭಿಕರು ಪ್ರಶ್ನೆಗಳನ್ನು ಬರೆದು ಕಳಿಸಿದರು. ಒಂದು ಪ್ರಶ್ನೆ ಇಂತಿದ್ದಿತು.

"ನಿನ್ನೆ ಸಾಯಂಕಾಲದ ನಿಮ್ಮ ಪ್ರಾರ್ಥನಾ ಸಭೆಗೆ ನಾನು ಬಂದಿದ್ದೆ. ಆಗ ನೀವು ಎರಡನೆ ಜಾತಿಯವರ ಎರಡು ಪ್ರಾರ್ಥನೆಗಳನ್ನು ಹೇಳಿದಿರಿ. ಹಾಗೆ ನೀವು ಮಾಡಿದ್ದರ ಬಗ್ಗೆ ನಿಮ್ಮ ವಿಚಾರವೇನಿದೆಂಬುದನ್ನು ನಾನು ತಿಳಿಯಬಹುದೆ? ಧರ್ಮವೆಂದರೇನೆಂಬದನ್ನು ವಿವರಿಸುವಿರಾ?"

ಈ ಮೊದಲು ನಾನು ಹೇಳಿದಂತೆ ಕೆಲ ವರುಷಗಳ ಹಿಂದೆ ಸೇವಾಗ್ರಾಮ ಆಶ್ರಮದಲ್ಲಿರುತಿದ್ದ ರೈಹಾನಾ ತಯಬ್ಜಿಯವರ ಸೂಚನೆಯ ಮೇರೆಗೆ ಕುರಾಣದೊಳಗಿನ ಕಲಮಾಗಳನ್ನಾರಿಸಲಾಯಿತು. ಡಾ. ಗಿಲ್ಡರರ ಸೂಚನೆಯ ಮೇರೆಗೆ ಪಾರಸಿ ಪ್ರಾರ್ಥನೆಯನ್ನು ಸೇರಿಸಿದ್ದು ಆಗಾಖಾನ ಅರಮನೆಯಲ್ಲಿ ಸ್ಥಾನಬದ್ಧತೆಯಲ್ಲಿ ನಾವು ಇರುತಿರುವಾಗ ನನ್ನ ಉಪೋಷಣದ ಪಾರಣೆಯ ಕಾಲಕ್ಕೆ ಅವರು ಈ ಪ್ರಾರ್ಥನೆಯನ್ನು ಮಾಡಿದ್ದರು. ಈ ರೀತಿ ಪ್ರಾರ್ಥನೆಗಳನ್ನು ಸೇರಿಸಿದ್ದರಿಂದ ಪ್ರಾರ್ಥನೆಯ ಮಹತ್ವ ಮತ್ತಷ್ಟು ಅಭಿವೃದ್ಧವಾಗಿದೆಂದು ನನ್ನ ಅಭಿಪ್ರಾಯ. ಮೊದಲಿಗಿಂತ ಹೆಚ್ಚು ಜನ ಸಭಿಕರ ಮನವನ್ನು ಅದು ಸೆಳೆದಿದೆ. ಹಿಂದು ಧರ್ಮದ ವಿಶಾಲ ಮತ್ತು ಸಹಿಷ್ಣುತಾ ಭಾವವನ್ನು ಅದು ಪ್ರದರ್ಶಿಸದೆ. ಜಪಾನೀ ಭಾಷೆಯಲ್ಲಿ ಬೌದ್ಧ ಪ್ರಾರ್ಥನೆಯಿಂದ ಪ್ರಾರ್ಥನೆಯನ್ನು ಪ್ರಾರಂಭಿಸಿದ್ದೇಕೆಂದೂ ಈ ಪ್ರಶ್ನೆಕಾರ ಕೇಳತಕ್ಕದ್ದಿತ್ತು. ಪ್ರಾರ್ಥನೆಯ ಪದ್ಯಗಳಿಗೆ ಅದರ ಪಾವಿತ್ರ್ಯಕ್ಕೆ ತಕ್ಕಂತೆ ಹಿನ್ನೆಲೆಯಿದೆ: ಬೌದ್ಧ ಪ್ರಾರ್ಥನೆಯಿಂದ ಇದೀ ಸೇವಾಗ್ರಾಮವೇ ಒಂದು ದಿನ ಪ್ರತಿಧ್ವನಿತವಾಗಿದ್ದಿತು. ಆಗ ಸೇವಾಗ್ರಾಮ ಆಶ್ರಮದಲ್ಲಿ ಬೌದ್ಧ ಭಿಕ್ಷುವೊಬ್ಬ ಇರುತಿದ್ದನು. ಅವನು ತನ್ನ ಮೌನ ಮತ್ತು ಗೌರವಾರ್ಹ ವರ್ತನೆಯಿಂದ ಆಶ್ರಮವಾಸಿಗಳೆಗೆಲ್ಲ ಅತ್ಯಂತ ಪ್ರೀತಿಪಾತ್ರನಾಗಿದ್ದನು.

ಜಮ್ಮು ೫—೮—೪೭

ಹಿಂದೀಯನೇಕೆ ಇಲ್ಲ?

ಲಾರ್ಡ ಮೌಂಟಬ್ಯಾಟನ್‌ರನ್ನು ಹಿಂದುಸ್ತಾನದ ಮೊದಲನೇ ಗವರ್ನರ ಜನರಲ್‌ರನ್ನಾಗಿ ಏಕೆ ಆರಿಸಲಾಯಿತು ಎಂಬುದು ಅವರ ಎರಡನೇ ಪ್ರಶ್ನೆ. ನನಗೆ ತಿಳಿದಿದ್ದರ ಮಟ್ಟಿಗೆ ಪ್ರಶ್ನೆಗಾರನಿಗೆ ಆ ಕಾರಣ ಚೆನ್ನಾಗಿ ಹೊಳೆದಿರಲು ಸಾಕು. ಅಷ್ಟೇ ಯೋಗ್ಯತೆಯು ಹಿಂದೀಯನು ಆ ಸ್ಥಳಕ್ಕೆ ಇರಲಿಲ್ಲ. ಹಿಂದೀ ಸ್ವಾತಂತ್ರ್ಯ ಮುಖಂಡರು ಜನಕರು ಅವರಾಗಿರದಿದ್ದರೂ ಅವರಲ್ಲಿ ಬಹಳ ಪಾಲು ಅವರಿಗೆ ಸಲ್ಲುತ್ತಿರುವದರಿಂದ, ಸದ್ಯದ ಗಂಡಾಂತರದ ಪರಿಸ್ಥಿತಿಯಲ್ಲಿ ಹಿಂದೀ ಹಡಗವನ್ನು ನಡೆಸಲಿಕ್ಕೆ ಅವರೆ ಅತ್ಯಂತ ಯೋಗ್ಯರಾದ ನಾವಿಕರೆಂದು ಅಂತರಾಳ ಸರಕಾರದ ಸದಸ್ಯರಿಗೆ ಮನವರಿಕೆಯಾಗಿರಲಿಕ್ಕೆ ಬೇಕು. ಈ ನೇಮಕವು ಬ್ರಿಟಿಶರಿಗೆ ಒಂದು ಬಗೆಯಿಂದ ಹೆಮ್ಮೆಯ ಮಾತು ಎಂದು ಹೇಳಬಹುದಾಗಿದ್ದರೂ ಪೂರ್ವಗ್ರಹದೂಷಿತರಾಗದೆ, ಸಂಕುಚಿತ ವೃತ್ತಿಗಿಂತ ಉಚ್ಚಮೆಟ್ಟಲು ಮುಟ್ಟಬಲ್ಲರೆಂಬುದಾಗಿ ತೋರಿಸಿ ಕೊಟ್ಟ ಹಿಂದೀಯರಿಗೂ ಇದು ಹೆಮ್ಮೆಯ ವಿಷಯವಾಗಿದೆ. ಮೊನ್ನೆ ಮೊನ್ನೆವರೆಗೆ ವಿರೋಧಿಗಳಾಗಿದ್ದವರ ಜೋಲಿಯೆ ತಾವು ವಿಶ್ವಾಸವಿಡುವ 'ಬಹಾದ್ದೂರಿ'ಯನ್ನು ಅವರೆ ತೋರಿಸಿಕೊಟ್ಟಿರುವರು.

ಅಲ್ಪಸಂಖ್ಯಾಕರು

ಅಲ್ಪಸಂಖ್ಯಾಕರು ತಮ್ಮ ತಮ್ಮ ವಸತಿಗಳನ್ನು ಬಿಟ್ಟು ಹೊರಹೊರಡಬೇಕೆಂಬದಕ್ಕೆ ನಾನೇಕೆ ಒಪ್ಪಬಾರದೆಂದು ಅವನು ಮುಂದೆ ಪ್ರಶ್ನಿಸುತ್ತಾನೆ.

ಇವನ್ನು ಒಪ್ಪಲು ಯಾರೂ ನನ್ನನ್ನು ಕೇಳಿಲ್ಲ. ಆದರೆ ಇಂಥ ಯಾವದೇ ಚಳವಳಿಯನ್ನು ನಾನು ವಿರೋಧಿಸತಕ್ಕವನೆ. ಯಾವದೇ ಸಾಮಂತ ಸರಕಾರದಲ್ಲಿ ಬಹುಸಂಖ್ಯಾಕರ ಮೇಲೆ ಅವಿಶ್ವಾಸ ತಾಳಲು ಕಾರಣವೇನೂ ಇಲ್ಲ. ಅದರಲ್ಲಿಯೂ ಇದೀಗ ಹಿಂದುಸ್ತಾನದಲ್ಲಿ ಎರಡು ಪ್ರತ್ಯೇಕ ರಾಜ್ಯಗಳಾಗಿರುವದರಿಂದ ಪ್ರತಿಯೊಂದು ಸರಕಾರವು ತನ್ನಲ್ಲಿರುವ ಅಲ್ಪ ಸಂಖ್ಯಾಕರನ್ನು ಯೋಗ್ಯ ರೀತಿಯಿಂದ ನಡೆಸಿಕೊಳ್ಳುವ ಆಶ್ವಾಸನ ಹೆಚ್ಚಾಗಿ ಕೊಡಬಲ್ಲದು. ಅಂಥ ಪರಿಸ್ಥಿತಿ ಎಂದಿಗೂ ಬರಲಾರದೆಂದು ಆಶಿಸುವಾ. ಪ್ರತಿಯೊಂದು ಬಗೆಯ ಹಕ್ಕಿನ ಜತೆಗೆ ಕರ್ತವ್ಯವೂ ಇದೆಂದು ನನ್ನ ಅಭಿಪ್ರಾಯ. ಅದಕ್ಕೂ ಹೆಚ್ಚೆಂದರೆ ಯೋಗ್ಯ ರೀತಿಯಿಂದ ಕರ್ತವ್ಯಪಾಲನೆ ಮಾಡದಿದ್ದರೆ ಯಾವ ಹಕ್ಕು ಬಾಧ್ಯತೆಗಳಿಗೂ ಪಾತ್ರರಾಗಲಾರರೆಂದು ನನ್ನ ಅಭಿಪ್ರಾಯ.

೧೫ ರ ನಂತರ ರಾಜಕಾರಣ ನಿವೃತ್ತಿಯೆ ?

ಹಿಂದುಸ್ತಾನ ಸ್ವತಂತ್ರವಾದ ಬಳಿಕ ಅಂದರೆ ೧೫ ನೇ ತಾರೀಕಿನ ನಂತರ ನಾನು ರಾಜಕಾರಣದಿಂದ ನಿವೃತ್ತನಾಗುವೆನೊ ಎಂದು ಅವನು ಕೇಳುತ್ತಾನೆ.

ಮೊದಲನೆಯದಾಗಿ ನಮಗೆ ಯಾವ ಸ್ವಾತಂತ್ರ್ಯ ಸಿಕ್ಕಿದೆಯೋ ಅದು ರಾಮರಾಜ್ಯದ ಸಮೀಪಕ್ಕೆ ನಮ್ಮನ್ನು ಒಯ್ಯಲು ಸಮರ್ಥವಾಗಿಲ್ಲ. ಅದು ಮೊದಲಿನಂತೆ ಈಗಲೂ ದೂರ ಇರುವಂತೆ ಕಾಣುತ್ತದೆ. ಏನೇಆದರೂ ಕೋಟಿ ವಧಿ ಜನರ ಜೀವನವೇ ನನ್ನ ರಾಜಕಾರಣ ಅದನ್ನು ನಾನು ಬಿಟ್ಟುಗೊಡಲಾರೆ. ಅದನು ಬಿಡುವದೆಂದರೆ ನನ್ನ ಜೀವನ ಕಾರ್ಯವನ್ನು ಮತ್ತು ಪರಮಾತ್ಮನನ್ನು ಅಲ್ಲಗಳೆದಂತೆಯೆ ನನ್ನ ರಾಜಕಾರಣ ಬೇರೆ ದಿಸೆಯಲ್ಲಿ ಸಾಗಬಹುದು. ಆ ಮಾತು ಬೇರೆ. ಅದರದು ಪರಿಸ್ಥಿತಿಯಿಂದ ನಿರ್ಧರಿಸಲ್ಪಡುವದು.

"ಬಿಹಾರದಲ್ಲಿ ನೀವು ಬಹಳ ಕೆಲಸ ಮಾಡಿರುವಿರಿ, ಪಂಜಾಬವನ್ನು ಏಕೆ ಅಲಕ್ಷಿಸಿದಿರಿ" ಎಂಬುದು ಅವರ ಕೊನೆಯ ಪ್ರಶ್ನೆ.

—೧೮ನೇ ಪುಟಕ್ಕೆ

ಕಾಶ್ಮೀರ ಮತ್ತು ನಿರಾಶ್ರಿತರು

ಆಗಸ್ಟ ೫ ನೇ ತಾರೀಕು ವಾಹದಲ್ಲಿ ಪ್ರಾರ್ಥನೋತ್ತರ ಭಾಷಣ ಮಾಡುತ್ತ ಗಾಂಧೀಜಿ ಹೀಗೆ ಹೇಳಿದರು. ವಾಹದಲ್ಲಿಯ ನಿರಾಶ್ರಿತರ ಶಿಬಿರವನ್ನು ಸಂದರ್ಶಿಸುವ, ಶಿಬಿರದ ಆಸ್ಪತ್ರೆಯಲ್ಲಿಯ ರೋಗಿಗಳನ್ನು ಕಾಣುವ ಮತ್ತು ಅದಕ್ಕೆ ಸಂಬಂಧಿಸಿದ ಉಳಿದ ಸಂಗತಿಗಳನ್ನು ತಿಳಿದುಕೊಳ್ಳುವ ಸಂಧಿ ದೊರೆತದ್ದಕ್ಕಾಗಿ ನನಗೆ ಸಂತೋಷವೆನಿಸುತ್ತದೆ. ಪಂಜಾಬಾಸಾಹೇಬಕ್ಕೆ ಎರಡನೇ ಸಲ ಬರುವ ಯೋಗ ಪ್ರಾಪ್ತವಾದುದಕ್ಕಾಗಿಯೂ ನನಗೆ ಸಂತೋಷ. ಶಿಬಿರದಲ್ಲಿಯ ಪ್ರತಿನಿಧಿಗಳೊಡನೆ ನಾನು ಸಂಭಾಷಣೆ ಮಾಡಿದ್ದುಂಟು.

ಆದರೆ ನಿರಾಶ್ರಿತರ ಪ್ರತಿನಿಧಿಗಳೊಡನೆ ನಡೆಸಿದ ಮಾತುಕತೆಗಳಲ್ಲಿ ಉದ್ಭೂತವಾದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವ ಮೊದಲು ಕಾಶ್ಮೀರಕ್ಕೆ ನಾನು ಭೆಟ್ಟಿ ಕೊಟ್ಟದ್ದರ ಬಗ್ಗೆ ಒಂದೆರಡು ಮಾತು ಹೇಳಬಯಸುತ್ತೇನೆ. ಯಾವದೇ ಸಾರ್ವಜನಿಕ ಸಭೆಯನ್ನು ಕೂಡಿಸಬಾರದೆಂದೂ ಭಾಷಣ ಮಾಡಬಾರದೆಂದೂ ನಾನು ಸಂಕಲ್ಪಿಸಿದ್ದೆ ಆದರೆ ಕಾರ್ಯಕರ್ತರನ್ನು ಭೆಟ್ಟಿಯಾಗುವ ಸಂಧಿ ನನಗೆ ದೊರೆಯಿತು. ಶೇಖ ಅಬ್ದುಲ್ಲಾರ ಹೆಂಡತಿಯೂ ಶ್ರೀನಗರದಲ್ಲಿ ಮೂರು ದಿನ ನಾನು ತಂಗಿದಾಗ ಯಾವಾಗಲೂ ನನ್ನ ಸಂಗಡ ಇದ್ದರು ಮಹಾರಾಜಾ ಸಾಹೇಬರನ್ನು ಮಹಾರಾಣಿಯವರನ್ನು ಮತ್ತು ಮುಖ್ಯ ಮಂತ್ರಿ ಕಾಕಸಾಹೇಬರನ್ನು ಕಾಣುವ ಸುಯೋಗವೂ ನನಗೆ ಲಭಿಸಿತು. ಕಾಶ್ಮೀರಿಗಳ ನಿಃಸಂದಿಗ್ಧ ಧುರೀಣರಾಗಿರುವ ಶೇಖ ಅಬ್ದುಲ್ಲಾರನ್ನು ಕಾಣುವ ಸಂಧಿ ದೊರೆಯದ್ದಕ್ಕಾಗಿ ನನಗೆ ವಿಷಾದವೆನಿಸುತ್ತದೆ.

ಶೇಖಸಾಹೇಬರನ್ನು ಕಾಣುವದಕ್ಕಾಗಿ ನಾನೇನು ಅಲ್ಲಿಗೆ ಹೋಗಿರಲಿಲ್ಲ. ಆದರೆ ಕಾಶ್ಮೀರದಲ್ಲಿ ಎರಡು ದಿನ ಪ್ರಾರ್ಥನಾ ಸಭೆಗಳನ್ನು ಕೂಡಿಸುವ ಸಂಧಿ ದೊರೆಯಿತು. ಜಮ್ಮೂವಿನಲ್ಲಿಯೂ ಒಂದು ದಿನ ಪ್ರಾರ್ಥನಾ ಸಭೆ ಸೇರಿಸಿದೆ. ಸಾವಿರಗಟ್ಟಲೆ ಜನರು ಈ ಸಭೆಗಳಿಗಾಗಿ ಬಂದಿದ್ದರು. ಎಲ್ಲವೂ ಸರಿಯಾಗಿ ಸಾಗಿದರೆ ಅಗಸ್ಟ ೧೫ಕ್ಕೆ ಕಾಶ್ಮೀರ ಮತ್ತು ಜಮ್ಮೂ ಕಾಯದೆಯಿಂದ ಸ್ವತಂತ್ರವಾಗುವವೆಂದು ನಾನು ಹೇಳಬಲ್ಲೆ. ಆದರೆ ಅಗಸ್ಟ ೧೫ ರ ನಂತರ ಬಹಳ ದಿನಗಳ ವರೆಗೆ ಸಂಸ್ಥಾನವು ಇದೇ ಸ್ಥಿತಿಯಲ್ಲಿಯೆ ಉಳಿಯದೆಂಬದಾಗಿ ನನಗೆ ಮನವರಿಕೆಯಾಗಿದೆ. ಅದು ಹಿಂದೀ ಒಕ್ಕೂಟವನ್ನಾದರೂ ಸೇರಬೇಕು; ಇಲ್ಲವೆ ಪಾಕಿಸ್ತಾನವನ್ನಾದರೂ ಪ್ರವೇಶಿಸಬೇಕು. ಅಲ್ಲಿ ಮುಸಲ್ಮಾನರು ಬಹುಸಂಖ್ಯಾಕರಾಗಿರುವರು. ಶೇಖ ಸಾಹೇಬರು ಕಾಶ್ಮೀರಿಗಳಲ್ಲಿ ಸ್ಥಳೀಯ ದೇಶಾಭಿಮಾನವನ್ನು ಜಾಗೃತಗೊಳಿಸಿರುವರೆಂಬುದು ನನಗೆ ತಿಳಿದು ಬಂದಿದೆ. ೧೫ ನೇ ತಾರೀಕಿಗೆ ಬ್ರಿಟಿಶ ಸಾರ್ವಭೌಮಾಧಿಕಾರ ಕೊನೆಗೊಳ್ಳುವದು. ಕಾಶ್ಮೀರಿನ ನಿಜವಾದ ಸಾರ್ವಭೌಮತ್ವ ಅಂದಿನಿಂದ ಪ್ರಾರಂಭವಾಗುವದು ಕಾಶ್ಮೀರಿಗಳ ಸಾರ್ವಭೌಮತ್ವವನ್ನು ಅವರು ಅನಂತರ ಉಲ್ಲೇಖಿಸಿದರು. ಅಲ್ಲಿನ ಜನರಾಡುವ ಭಾಷೆ ಒಂದೇ, ಸಂಸ್ಕೃತಿ ಒಂದೇ ನನಗೆ ತಿಳಿದಿದ್ದರ ಮಟ್ಟಿಗೆ ಅವರು ಒಂದೇ ಜನಾಂಗದವರು. ಕಾಶ್ಮೀರಿ ಹಿಂದು ಮತ್ತು ಕಾಶ್ಮೀರಿ ಮುಸಲ್ಮಾನರನ್ನು ನಾನು ಒಮ್ಮೆಲೇ ಪ್ರತ್ಯೇಕವಾಗಿ ಗುರುತಿಸಲಾರೆ. ನಾನು ಕಂಡ ಪ್ರಚಂಡ ಶಿಷ್ಟಮಂಡಳದಲ್ಲಿ ಇದೇನು ಬಹುಸಂಖ್ಯ ಹಿಂದುಗಳದೊ ಇಲ್ಲವೆ ಮುಸಲ್ಮಾನರದೊ ಎಂದು ನನಗೇನು ತಿಳಿಯಲಿಲ್ಲ. ಅದೇನೇ ಇದ್ದರೂ ಕಾಶ್ಮೀರ ಮತ್ತು ಜಮ್ಮೂವಿನಲ್ಲಿಯ ಪ್ರಜೆಗಳ ಮನೋನಿರ್ಧಾರದಂತೆಯೆ ಎಲ್ಲವೂ ನಡೆಯತಕ್ಕದ್ದೆಂಬುದು ನಿಃಸಂದಿಗ್ಧವಾಗಿದೆ. ಈ ಮಾತಿಗೆ ಮಹಾರಾಜಾ ಸಾಹೇಬರು ಮತ್ತು ಮಹಾರಾಣಿಸಾಹೇಬರು ಕೂಡಲೆ ಒಪ್ಪಿದರೆಂಬದನ್ನು ನೋಡಿ ನನಗೆ ಸಂತೋಷವೆನಿಸಿತು. ಅಮೃತಸರದ ಒಪ್ಪಂದವೆಂದು—ಸೌಮ್ಯ ಶಬ್ದಗಳಲ್ಲಿ—ಕರೆಯಿಸಿಕೊಳ್ಳುತ್ತಿರುವ ಒಡಂಬಡಿಕೆಯನ್ನೋದುವ ಸುಯೋಗ ನನಗೆ ದೊರೆತಿತ್ತು. ಆದರೆ ಅದು ನಿಜವಾಗಿ ಮಾರಾಟದ ಕರಾರುಪತ್ರವೇ ಆಗಿದೆ. ಅಗಸ್ಟ ೧೫ಕ್ಕೆ ಅದರ ಇತಿಶ್ರೀಯಾಯಿತೆಂದು ನನ್ನ ತಿಳುವಳಿಕೆ. ಮಾರಿದವರು ಆಗಿನ ಬ್ರಿಟಿಶ ಗವರ್ನರ ಜನರಲರು ಮತ್ತು ಅದನ್ನು ಕೊಂಡವರು ಮಹಾರಾಜಾ ಗುಲಾಬಸಿಂಹರು. ಒಪ್ಪಂದದ ಪರಿಸಮಾಪ್ತಿಯ ನಂತರ ಸಂಸ್ಥಾನವು ಬ್ರಿಟಿಶರ ಒಡೆತನಕ್ಕೆ ಅಂದರೆ ಇಂಗ್ಲಂಡದ ವಶಕ್ಕೆ ಹೋಗತಕ್ಕದ್ದೋ? ಹಿಂದುಸ್ತಾನಕ್ಕೆ ಸೇರುವದಾದರೆ ಯಾವ ಭಾಗಕ್ಕೆ? ಕಾಯದೆಯ ಕೊಡತಿನ ಪ್ರಶ್ನೆಯನ್ನು ವಿಚಾರಿಸುವ ಗೋಜಿಗೆ ಹೋಗದೆ ವ್ಯಾವಹಾರಿಕ ರೀತಿಯಿಂದ ವಿಚಾರಿಸಿದ್ದಾದರೆ ಕಾಶ್ಮೀರ ಮತ್ತು ಜಮ್ಮೂವಿನಲ್ಲಿಯ ಪ್ರಜೆಗಳೇ ಈ ಮಾತನ್ನು ನಿರ್ಧರಿಸತಕ್ಕವರೆಂದು ಸ್ಪಷ್ಟವಾಗಿ ಹೇಳಬಹುದಾಗಿದೆ. ಈ ಮಾತು ಬೇಗನೆ ನಿರ್ಧರಿಸಲ್ಪಟ್ಟಷ್ಟು ಹಿತಕರವಾಗಿದೆ. ಪ್ರಜೆಗಳ ಅಭಿಪ್ರಾಯವನ್ನು ಹೇಗೆ ತಿಳಿದುಕೊಳ್ಳಬೇಕೆಂಬ ಸರಳ ಪ್ರಶ್ನೆ ಉದ್ಭವಿಸುತ್ತದೆ. ಎರಡೂ ಸಾಮಂತ ಸರಕಾರಗಳು, ಮಹಾರಾಜಾ ಸಾಹೇಬರು ಮತ್ತು ಕಾಶ್ಮೀರಿನ ಪ್ರಜೆಗಳು ಈ ಪ್ರಶ್ನೆಯನ್ನು ಬಿಡಿಸಬಲ್ಲರು. ಈ ನಾಲ್ಕು ಪಕ್ಷಗಳು ಕೂಡಿ ಸಂಯುಕ್ತ ನಿರ್ಣಯಕ್ಕೆ ಬಂದುದಾದರೆ ತೊಂದರೆ ತಪ್ಪುವದು. ಕಾಶ್ಮೀರು ಏನಿಲ್ಲೆಂದರೂ ದೊಡ್ಡ ಸಂಸ್ಥಾನ. ಅದಕ್ಕೊಳ್ಳೀ ಆಯಕಟ್ಟಿನ ಮಹತ್ವವಿದೆ. ಹಿಂದುಸ್ತಾನದಲ್ಲಿ ಬೇರ ಎಲ್ಲಿಯೂ ಇಲ್ಲದಷ್ಟು ಮಹತ್ವ ಅದಕ್ಕಿದೆಂದೂ ಹೇಳಬಹುದು. ಕಾಶ್ಮೀರಿನ ಮಟ್ಟಿಗೆ ಇಷ್ಟು ಹೇಳಬಲ್ಲೆ.

ಇದೀಗ ನಿರಾಶ್ರಿತರ ಸಮಸ್ಯೆಯ ಬಗ್ಗೆ ಹೇಳಬಯಸುವೆ. ಅವರು ಸುಮಾರು ೯೦೦೦ ಇರುವರು. ಅವರಲ್ಲಿಯ ಹಿಂದು ಮತ್ತು ಶೀಖರು ನನ್ನೊಡನೆ ಮಾತುಕತೆಯಾಡಿದಾಗ ಬರಲಿರುವ ಅಗಸ್ಟ ೧೫ ರ ಬಗ್ಗೆ ತಮಗೊಳ್ಳೆ ಅಂಜಿಕೆಯುಂಟಾಗಿದೆಂದು ಹೇಳಿದರು. ಆದರೆ ನನಗೆ ಆ ಬಗೆಯ ಅಂಜಿಕೆ ಎಳ್ಳಷ್ಟು ಇರುವದಿಲ್ಲೆಂದು ನಾನು ಒಪ್ಪಿಕೊಂಡೆ. ಅಲ್ಲದೆ ಆ ಬಗೆಯ ಅಂಜಿಕೆ ತಾಳುವದೂ ನನಗೆ ಸರಿಯೆನಿಸದೆಂದು ಹೇಳಿದೆ. ಮುಸಲ್ಮಾನರಿಗೆ ಅವರ ಪಾಕಿಸ್ತಾನ ದೊರೆತು ಬಿಟ್ಟಿದೆ. ಪಂಜಾಬಿನಲ್ಲಿಯ ಹಿಂದುಗಳೊಡನೆ ಇಲ್ಲವೆ ಸೀಖರೊಡನೆ ಅವರ ವ್ಯಾಜ್ಯವೇನೂ ಈಗ ಉಳಿಯಲಿಲ್ಲ. ಪಾಕಿಸ್ತಾನದಲ್ಲಿ ಮುಸಲ್ಮಾನೇತರರು ಮುಸಲ್ಮಾನರಷ್ಟೇ ಸುರಕ್ಷಿತರಾಗಿರುವರೆಂದು ಜಿನ್ನಾ ಸಾಹೇಬರು। ಮತ್ತು ಲೀಗಿನ ಉಳಿದ ಧುರೀಣರು ಆಶ್ವಾಸಿಸಿದ್ದುಂಟು. ಆ ಆಶ್ವಾಸನವನ್ನು ಗ್ರಹಿಸಿರೆಂದು ನಾನು ಸಭಿಕರಿಗೆ ಬಿನ್ನವಿಸಿಕೊಳ್ಳುತ್ತೇನೆ. ಒಂದು ವೇಳೆ ಆ ಆಶ್ವಾಸನ ನಿರರ್ಥಕವಾಗಿ ನಿರಾಶ್ರಿತರ ಅಂಜಿಕೆ ಕಾರ್ಯರೂಪದಲ್ಲಿ ಬಂದಿತೆಂದರೆ ಇಸ್ಲಾಮದ ನಾಶ ಪ್ರಾರಂಭವಾಯಿತೆಂದೇ ಹೇಳಬೇಕಾಗುವದು. ಇಂಥ ಆತ್ಮಘಾತಕ ಕೃತ್ಯದ ಅಪರಾಧವನ್ನು ಮುಸಲ್ಮಾನರು ಮಾಡುವರೆಂದು ನಾನು ನಂಬಲಾರೆ. ನಿರಾಶ್ರಿತ ಸ್ತ್ರೀಪುರುಷರೆಲ್ಲ ಈ ಅಂಜಿಕೆಯನ್ನು ಬಿಟ್ಟುಗೊಡಬೇಕೆಂದು ನಾನು ಹೇಳಬಯಸುವೆ. ನವಖಾಲಿಗೆ ಹೋಗುವದನ್ನು ನಾನು ಬಿಟ್ಟುಗೊಟ್ಟರೆ ವಾಹದಲ್ಲಿಯ ನಿರಾಶ್ರಿತರೊಡನೆಯೆ ಅಗಸ್ಟ ೧೫ ನೇ ದಿನವನ್ನು ಕಳೆಯಬಯಸುವೆ. ಆದರೆ ಈ ಎರಡನೆ ಅತ್ಯುತ್ತಮ ಕಾರ್ಯ ಮಾಡಬೇಕೆಂದು ನಾನು ನಿರ್ಧರಿಸಿರುವೆ. ನಾನು ಹೇಳುವದರೆಲ್ಲರ ಟಿಪ್ಪಣಿಗಳನ್ನು ತೆಗೆದುಕೊಳ್ಳುತ್ತಿರುವ ಡಾಕ್ಟರ ಸುಶೀಲಾ ನಯ್ಯರರನ್ನು ನೀವು ನೋಡಿರುವಿರಿ. ಪಶ್ಚಿಮ ಪಾಕಿಸ್ತಾನದಲ್ಲಿಯ ಗುಜರಾತ ಜಿಲ್ಲೆಯವಳು ಅವಳು. ಪ್ರಾರ್ಥನಾ ಸಭೆಗೆ ಬರುವ ಮೊದಲು ನಾನು ಅವಳೊಡನೆ ಮಾತಾಡಿಕೊಂಡು ಬಂದಿರುವೆ. ಅವಳೂ ನನ್ನೊಡನೆ ನವಖಾಲಿಗೆ ಬರುವವಳಾಗಿದ್ದರೂ ಅಗಸ್ಟ ೧೫ ರ ಬಗ್ಗೆ ತಳೆದಿರುವ ಅಂಜಿಕೆಯನ್ನು ಹೋಗಲಾಡಿಸುವದಕ್ಕಾಗಿ ವಾಹ ನಿರಾಶ್ರಿತ ಶಿಬಿರದಲ್ಲಿಯೇ ನನ್ನ ಪರವಾಗಿ ಇರಲು ಅವಳು ಒಪ್ಪಿಕೊಂಡಿರುವಳು. ಅವಳಿಗೆ ಅಂಥ ಯಾವ ಅಂಜಿಕೆಯೂ ಇಲ್ಲೆಂಬುದು ನನಗೆ ಗೊತ್ತಿದೆ. ಅವಳು ಪ್ಯಾರೇಲಾಲರಂತೆ ನನ್ನಗೂಡ ನವಖಾಲಿಯಲ್ಲಿದ್ದಳು. ನವಖಾಲಿಯಲ್ಲಿ ಅತ್ಯಂತ ಪ್ರಕ್ಷುಬ್ಧ ಭಾಗದಲ್ಲಿ ಅವಳನ್ನಿಡಲಾಗಿತ್ತು. ತನ್ನ ವೈದ್ಯಕೀಯ ಸಹಾಯದಿಂದ ಅವಳು ಹಿಂದುಗಳ ಮನವನ್ನು ಸೆಳೆದುಕೊಂಡಳಷ್ಟೆ ಅಲ್ಲ ಮುಸಲ್ಮಾನರಲ್ಲಿಯೂ ಲೋಕಪ್ರಿಯಳಾಗಿದ್ದಳು. ರಾವಳಪಿಂಡಿ ಮತ್ತು ಅದರ ಸುತ್ತಲಿನ ಪ್ರದೇಶದಲ್ಲಿರುವ ನಿರಾಶ್ರಿತರಿಗೆ ಯಾವದೇ ಬಗೆಯ ಅಂಜಿಕೆಗೆ ಅವಕಾಶವಿರುವದಿಲ್ಲೆಂದು ಇದೀಗ ಡಿಸ್ಟ್ರಿಕ್ಟ ಕಮೀಶನರರು ಹೇಳಿದ್ದನ್ನು ನೀವು ಕೇಳಿರುವಿರಿ. ಅವರು ಮುಸಲ್ಮಾನರು. ಮುಸಲ್ಮಾನರಷ್ಟೇ ನೀವೂ ನಿರ್ಭೀತಿಯಿಂದ ಇರತಕ್ಕದ್ದು.

ರಾವಳಪಿಂಡಿ — ಸುಶೀಲಾ ನಯ್ಯರ

೫—೮—೪೭

(ಹಿಂದುಸ್ತಾನಿಯಿಂದ ಅನುವಾದಿತ)

ಪಿಂಡಿಯಲ್ಲಿಯ ಭಾಷಣವು

ಜುಲೈ ೩೧ ನೇ ತಾರೀಕು ಪ್ರಾರ್ಥನೋತ್ತರ ಭಾಷಣ ಲಾಲಾದೇವರಾಜ ಆನಂದರ ಮನೆಯ ಪಟಾಂಗಣದಲ್ಲಿ ಆಯಿತು. ಆದರೆ ಆ ಸ್ಥಳ ಬಹಳ ಸಣ್ಣದೆನಿಸಿತು. ಪರಿಣಾಮವಾಗಿ ಜನಸಮೂಹ ಮತ್ತು ಗದ್ದಲ ವಿಶೇಷವೆನಿಸಿದ್ದರಿಂದ ಗಾಂಧೀಜಿಯು ಪ್ರಾರ್ಥನೆಯನ್ನು ಕೇವಲ ರಾಮಧುನಕ್ಕೆ ಇಳಿಸಬೇಕಾಯಿತು. ರಾಮಧುನ ಪ್ರಾರ್ಥನೆಯ ನಂತರ ಮಾತಾಡುತ್ತ ಗಾಂಧೀಜಿಯು ತಮಗೆ ಎರಡು ಪತ್ರಗಳು ಬಂದಿದ್ದು ಅವುಗಳಿಗೆ ಉತ್ತರ ಕೊಡಬಯಸುವುದಾಗಿ ಹೇಳಿದರು. ಮೊದಲನೆಯ ಪತ್ರ ಅಂಗ್ಲಭಾಷೆಯಲ್ಲಿದೆ. ಅಕ್ಷರಗಳು ಬಹಳ ಮುದ್ದಾಗಿವೆ. ಆದರೆ ಅಷ್ಟರಿಂದ ನನಗೇನು ಸಮಾಧಾನವಿಲ್ಲ. ಬ್ರಿಟಿಶರು ಹಿಂದುಸ್ತಾನವನ್ನು ಬಿಟ್ಟು ಹೋಗುತ್ತಿರುವರು, ಆದರೆ ಜನರು ಮಾತ್ರ ಗುಲಾಮಗಿರಿಗೆ ಬಹಳ ಮಟ್ಟಿಗೆ ಮನಸೋತಿದ್ದು ಇಂಗ್ಲೀಷಿನ ಮೋಹವನ್ನು ಇನ್ನೂ ಬಿಟ್ಟಿರುವದಿಲ್ಲ. ಆ ಅಂಗ್ಲ ಭಾಷೆಯಲ್ಲಾದರೊ ಬಹಳ ಕಡಮೆ ಜನರು ಮಾತ್ರ ಪ್ರಭುತ್ವವನ್ನು ಸಂಪಾದಿಸಬಲ್ಲರು. ಬ್ರಿಟಿಶ ಖಡ್ಗದಿಂದಾದ ವಿಜಯಕ್ಕಿಂತ ಈ ಭಾಷಾವಿಜಯವು ಅತ್ಯಂತ ಅಪಾಯಕಾರಕವಾದ ಗುಲಾಮಗಿರಿಯ ನಿದರ್ಶನವು. ಪ್ರತಿಯೊಂದು ಭಾಷೆ ಆಯಾ ಸನ್ನಿವೇಶಗಳಲ್ಲಿಯೆ ಉತ್ತಮವಾಗಿದೆ. ದಕ್ಷಿಣ ಆಫ್ರಿಕೆಯಲ್ಲಿಯ ಝುಲು ಜನರಿಗೆ ಇಲ್ಲವೆ ಡಚ್ಚರಿಗೆ ಗುಜರಾಥಿ ಕಲಿಯಿರೆಂದು ನಾನು ಉಪದೇಶಿಸಲಾರೆ. ಅದೇ ರೀತಿಯಾಗಿ ಇಲ್ಲಿ ನೆರೆದ ಭಗಿನಿಯರಿಗೆಲ್ಲ ಇಂಗ್ಲಿಷನ್ನು ಕಲಿಯಿರೆಂದು ಹೇಳಲಾರೆ. ಅದು ಶಕ್ಯವೂ ಇಲ್ಲ ಇಷ್ಟವೂ ಆಗಿಲ್ಲ. ನನ್ನ ಮಾತೃಭಾಷೆ ಗುಜರಾಥಿಯು. ಅದರ ಬಗ್ಗೆ ನನ್ನ ಪ್ರೇಮ ಅಪಾರವಾಗಿದೆ ಆದರೆ ಅದು ಹಿಂದುಸ್ತಾನದ ರಾಷ್ಟ್ರಭಾಷೆಯಾಗಬೇಕೆಂದು ನಾನು ಭಾವಿಸಲಾರೆ. ಗುಜರಾಥಿಯಲ್ಲಿ ಮಾತಾಡುವವರು ಹಿಂದುಸ್ತಾನದಲ್ಲಿ ಬಹಳಾದರೆ ಒಂದು ಕೋಟಿ ಜನ ಮಾತ್ರ. ಆದರೆ ಸುಮಾರು ೩೦ ಕೋಟಿ ಜನ ಭಾರತೀಯರಿಗೆ ಹಿಂದುಸ್ತಾನಿ ಮಾತಾಡಲು ಬರುವದು. ಅವರಿಗೆ ಓದಲಿಕ್ಕೆ ಇಲ್ಲವೆ ಬರೆಯಲಿಕ್ಕೆ ಬರುವದೋ ಇಲ್ಲವೋ ಎಂಬಮಾತು ಪ್ರಸ್ತುತವಲ್ಲ ಹಿಂದುಸ್ತಾನಿಯು ಉರ್ದು ಇಲ್ಲವೆ ನಾಗರಿ ಲಿಪಿಯಲ್ಲಿ ಬರೆಯಲಾಗುತ್ತದೆ. ಎರಡನೆಯ ಪತ್ರವು ಸುಂದರ ಉರ್ದು ಲಿಪಿಯಲ್ಲಿ ಬರೆಯಲಾಗಿದೆ. ನನ್ನೊಡನೆ ಸಂಬಂಧ ಬಂದವರಿಗೆಲ್ಲ ಆ ಎರಡೂ ಲಿಪಿಗಳನ್ನು ಕಲಿಯಬೇಕೆಂದು ನಾನು ಬೋಧಿಸುವೆ. ಅಬಗ್ಗೆ ನನಗೆ ಒಳ್ಳೆ ಅಭಿಮಾನವೂ ಎನಿಸುತ್ತದೆ. ನನ್ನ ಗಂಡು ಮತ್ತು ಹೆಣ್ಣುಮಕ್ಕಳಿಗೆ ಇಂಗ್ಲಿಷಿನ ಬದಲು ಉರ್ದು ಕಲಿಸಬಲ್ಲೆ. ರಾವಳಪಿಂಡಿಯಲ್ಲಿ ಕನಿಷ್ಠ ಒಂದು ವಾರದ ವರೆಗಾದರೂ ಇದ್ದು ಇಲ್ಲಿನ ಹಿಂದುಗಳು ಅನುಭವಿಸಿದ ಕಷ್ಟಪರಂಪರೆಗಳನ್ನು ಕಣ್ಣಾರೆ ನೋಡಬೇಕೆಂದು ಅಂಗ್ಲಭಾಷೆಯಲ್ಲಿ ಬರೆದ ಪತ್ರದಲ್ಲಿ ನನಗೆ ಕೇಳಿಕೊಳ್ಳಲಾಗಿದೆ. ಕಾಶ್ಮೀರಿಗೆ ಹೋಗಬೇಕೆಂದು ನಾನು ಬಯಸಬೇಕೆ? ದಿಲ್ಲಿಗೆ ಬಂದಾಗಿನಿಂದ ಪಂಜಾಬಿಗೆ ಭೆಟ್ಟಿಕೊಡಬೇಕೆಂದು ನಾನು ಬಯಸಿದೆ ಎಂಬದೇ ನನ್ನ ಉತ್ತರ. ಲಾಹೋರ ಅಮೃತಸರ ಮತ್ತು ರಾವಳಪಿಂಡಿಯನ್ನು ಸಂದರ್ಶಿಸಬೇಕೆಂದು ನನ್ನ ಬಯಕೆ. ಆದರೆ ನಾನು ಪರಮಾತ್ಮನ ಕೈಯೊಳಗಿನ ಗೊಂಬೆಯೆಂದು ನನ್ನ ನಂಬುಗೆ. ಪರಮಾತ್ಮನು ಇಡೀ ಪ್ರಪಂಚದ ಪ್ರಭುವು. ಮಾನವರ ಯೋಜನೆಗಳನ್ನೆಲ್ಲ ಅವನು ನಿರರ್ಥಕಗೊಳಿಸಬಲ್ಲನು. ಲಾಹೋರ ಮತ್ತು ಅಮೃತಸರದಲ್ಲಿ ಒಂದೊಂದು ದಿನ ರಾವಳಪಿಂಡಿಯಲ್ಲಿ ಎರಡು ದಿನ ಮತ್ತು ಕನಿಷ್ಠ ೧೦ ದಿನಗಳನ್ನಾದರೂ ಕಾಶ್ಮೀರಿನಲ್ಲಿ ಕಳೆಯಬೇಕೆಂದು ಮೊದಲು ಯೋಜಿಸಲಾಗಿತ್ತು. ಆದರೀಗ ಕಾಶ್ಮೀರಿಗಾಗಿ ಕೇವಲ ಎರಡೋ ಮೂರೊ ದಿನಗಳು ಮಾತ್ರ ಮೀಸಲಿವೆ. ಮತ್ತು ಅದಾದರೂ ಕೇವಲ ವಚನಪರಿಪಾಲನೆಗಾಗಿಯೆ.

ಪಂಜಾಬಿನಲ್ಲಿರುವದು ನನಗೆ ಶಕ್ಯವಾಗಿರದಿದ್ದರೂ ಪಂಜಾಬಿಗಳನ್ನೇನು ನಾನು ಮರೆತಿಲ್ಲ. ೧೫ ನೇ ತಾರೀಕಿನೊಳಗಾಗಿ ನಾನು ನವಖಾಲಿಯನ್ನು ಮುಟ್ಟಬೇಕು. ಅದಾದರೂ ವಚನಪರಿಪಾಲನೆಗಾಗಿಯೆ. ನಾನು ರಾಮಭಕ್ತನು. ಎಂಥ ಕಷ್ಟದ ಪ್ರಸಂಗ ಬಂದರೂ ವಚನವನ್ನು ಪರಿಪಾಲಿಸಲಿಕ್ಕೆಬೇಕೆಂದು ರಾಮನು ಹೇಳಿರುವನು. ಅಮೃತಸರ ರೇಲ್ವೆ ಸ್ಟೇಶನದಲ್ಲಿ ಹಿಂದೂ ತರುಣರು ಕರೀ ನಿಶಾನೆಗಳನ್ನು ತೋರಿಸಿದ್ದನ್ನು ನಾನು ಉಲ್ಲೇಖಿಸಬಯಸುವೆ. ಗಾಡಿಯು ನಿಂತ ಸಮಯದಲ್ಲೆಲ್ಲ ಅವರು 'ಗಾಂಧಿ ತಿರುಗಿ ಹೊರಟು ಹೋಗು' ಎಂದು ಅಂಗ್ಲ ಭಾಷೆಯಲ್ಲಿ ಕೂಗಿದರು. ಆ ಸಪ್ಪಳವನ್ನು ಸಹಿಸುವದಾಗದ್ದಕ್ಕಾಗಿ ನಾನು ಕಿವಿಯನ್ನು ಮುಚ್ಚಿಕೊಳ್ಳಬೇಕಾಯಿತು. ನನ್ನ ಕಣ್ಣುಗಳನು ಮುಚ್ಚಿಕೊಂಡು ಪರಮಾತ್ಮನ ನಾಮೋಚ್ಚಾರ ಮಾಡುತ್ತ ಸ್ವಸ್ಥ ಕುಳಿತು ಬಿಟ್ಟೆ. ಅವರು ಬಹಳ ಗದ್ದಲಮಾಡುತ್ತಿದ್ದರೂ ಅತ್ಯಂತ ಪ್ರಕ್ಷೋಭೆಗೊಂಡಿದ್ದರು. ಇಲ್ಲದಿದ್ದರೆ ಕಳಗಿಳಿದು ಇಷ್ಟೊಂದು ಗದ್ದಲ ಹಾಕಲಿಕ್ಕೆ ನಾನೇನು ಅಂಥ ಅಪಾಯ ಮಾಡಿರುವೆನೆಂದು ಕೇಳಬೇಕೆಂದು ಮಾಡಿದ್ದೆ. ಆದರೆ ಸ್ತುತಿ ನಿಂದೆಗಳನ್ನು ಸಮಾನವಾಗಿ ಕಾಣಬೇಕೆಂಬುದು ನನಗೆ ಗೊತ್ತಿದೆ. ಉಳಿದ ಸ್ಟೇಶನಗಳಲ್ಲಿ ಜನರು ಬಹಳ ಒಳ್ಳೆ ರೀತಿಯಿಂದ ವರ್ತಿಸಿದರು. ಮತ್ತು ಸ್ವಾಗತಿಸಿದರು. ರಾತ್ರಿಯಲ್ಲಿ ನನಗೇನು ತೊಂದರೆ ಕೊಡಲಿಲ್ಲ. ಅದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನರ್ಪಿಸುವೆ.

ಪ್ರಾಯೋಗಿಕ ಕುರಾಣಪಠಣವನ್ನು ಆಕ್ಷೇಪಿಸಿ ಎರಡನೇ ಪತ್ರದಲ್ಲಿ ಬರೆಯಲಾಗಿದೆ. ಜನರು ಶಾಂತರೀತಿಯಿಂದ ಇರುತಿದ್ದರೆ ಕುರಾಣದಲ್ಲಿಯ ಶ್ಲೋಕಗಳನ್ನು ಅವರು ಕೇಳಬಹುದಾಗಿತ್ತು. ಅದೊಳ್ಳೆ ಸುಂದರ ಪ್ರಾರ್ಥನೆಯಾಗಿದೆ. ಅದು ಕುರಾಣದೊಳಗೆ ಮತ್ತು ಅರಬ್ಬಿಯಲ್ಲಿದ್ದ ಮಾತ್ರಕ್ಕೆ ಅದನ್ನು ಬಿಟ್ಟುಕೊಡಬೇಕೆಂದು ಹೇಳುವದು ಯುಕ್ತವಾಗಲಾರದು. ಅದರಲ್ಲಿ ವ್ಯಕ್ತಪಡಿಸಿದ ಭಾವನೆಗಳನ್ನು ಮಾತ್ರ ಯಾರೂ ಆಕ್ಷೇಪಿಸಲಾರರು. ಶೂರ ಸ್ತ್ರೀಪುರುಷರಾಗಿ ಶಾಂತರೀತಿಯಲ್ಲಿ ನೀವು ಇರಬಯಸುವದಾದರೆ ಸಹಿಷ್ಣುತಾಭಾವವನ್ನು ಕಲಿಯಲಿಕ್ಕೇಬೇಕು. ತಪ್ಪು ದಾರಿ ಹಿಡಿದ ಮುಸಲ್ಮಾನರೊಡನೆ ಹೋರಾಡುವ ಯೋಗ್ಯ ಮತ್ತು ಒಂದೇ ಒಂದು ಮಾರ್ಗವೆಂದರೆ ಪ್ರೇಮಮಾರ್ಗ. ಆ ಮಾರ್ಗವು ನಿಮ್ಮ ಮನಸಿಗೆ ಬರದಿದ್ದರೆ ಪ್ರತೀಕಾರದಂಥ ಅನಾಗರಿಕ ಮಾರ್ಗವಿದ್ದೇ ಇದೆ. ಆದರೆ ಅನುಯಾಯಿಗಳ ದುಷ್ಕೃತ್ಯಗಳಿಗಾಗಿ ಯಾವದೊಂದು ಧರ್ಮಗ್ರಂಥಕ್ಕೆ ಅವಮಾನ ಮಾಡುವದೆಂದರೆ ನನಗೆ ತಿಳಿಯಲಾರದ ಮಾತಾಗಿದೆ.

ರಾವಳಪಿಂಡಿ —ಸುಶಿಲಾ ನಯ್ಯರ

೬—೮—೪೭

ಪ್ರತಿಜ್ಞೆಯ ಕರಡು

(ಮೊ. ಕ. ಗಾಂಧಿ)

ಶ್ರೀ ಬ್ರಿಜಲಾಲನೆಹರು ಇವರು ಕೆಳಗಿನ ಪ್ರತಿಜ್ಞೆಯ ಕರಡನ್ನು ಪ್ರಸಿದ್ಧಿಗಾಗಿ ಕಳಿಸಿದ್ದಾರೆ.

" ಹಿಂದುಸ್ತಾನದಲ್ಲಿ ಎಲ್ಲ ಸಾರ್ವಜನಿಕ ಸಿವಿಲ್ ಮಿಲಿಟರಿ ನವಕರರು, ಕೇಂದ್ರ ಪ್ರಾಂತಿಕ ಮತ್ತು ಸ್ಥಳೀಯ ಸರಕಾರಗಳ ನವಕರಿಗಾಗಿ ಅರ್ಜಿ ಮಾಡಬಯಸುವವರು ಮತ್ತು ಈ ಸರಕಾರಗಳ ಅಧೀನದಲ್ಲಿ ಉಳಿದ ಯಾವದೇ ಲಾಭದಾಯಕ ನವಕರಿಗಾಗಿ ಅರ್ಜಿ ಹಾಕಬಯಸುವವರು ಶಾಸನಸಭಾ ಸದಸ್ಯರು ಮತ್ತು ಘಟನಾಸಮಿತಿಯ ಸದಸ್ಯರು ಕೂಡ ಸ್ವೀಕರಿಸಿ ಸಹಿ ಮಾಡತಕ್ಕ ಪ್ರತಿಜ್ಞೆಯ ಕರಡು ಈ ರೀತಿಯಿದೆ.

ನಾನು ಅತ್ಯಂತ ನಿಷ್ಠೆಯಿಂದ ಈ ರೀತಿ ಪ್ರತಿಜ್ಞೆ ತೆಗೆದುಕೊಳ್ಳುತ್ತೇನೆ. ೧) ನಾನು ಹಿಂದೀ ಒಕ್ಕೂಟದ ಪ್ರಜೆಯಾಗಿದ್ದು ಎಂಥ ಪರಿಸ್ಥಿತಿಯಲ್ಲಿಯೂ ಆ ಒಕ್ಕೂಟ ಸರಕಾರಕ್ಕೆ ನಿಷ್ಠನಾಗಿ ಉಳಿಯುವೆ.

೨) ಹಿಂದು ಮುಸಲ್ಮಾನರು ಎರಡು ಪ್ರತ್ಯೇಕ ಜನಾಂಗವೆಂಬ ತತ್ವವನ್ನು ನಾನು ಅಲ್ಲಗಳೆಯುತ್ತೇನೆ. ಹಿಂದುಸ್ತಾನದಲ್ಲಿರುವ ಎಲ್ಲ ಜನರು ಅವರು ಯಾವದೇ ಜಾತಿ ಧರ್ಮಗಳಿಗೆ ಸೇರಿರಲಿ ಅವರೆಲ್ಲ ಒಂದೇ ರಾಷ್ಟ್ರದ ಜನಾಂಗದವರೆಂದು ನಾನು ಭಾವಿಸುತ್ತೇನೆ.

೩) ಈ ಪ್ರಾಚೀನ ಮತ್ತು ಪವಿತ್ರ ಭೂಮಿಯಲ್ಲಿ ವಾಸಿಸುವ ಎಲ್ಲ ಜನರೂ ಒಂದೇ ಜನಾಂಗದವರೆಂಬ ವಿಚಾರವನ್ನು ಬಲಪಡಿಸುವಂತೆ ಭಾಷಣ ಕೃತಿಗಳಿಂದ ನಾನು ವರ್ತಿಸುತ್ತೇನೆ.

೪) ಈ ಪ್ರತಿಜ್ಞೆಗೆ ಭಂಗಬರುವಂತೆ ನಾನು ಯಾವದೇ ಅಪರಾಧವನ್ನು ಮಾಡಿದ್ದು ಕಂಡು ಬಂದರೆ, ಆ ಕಾಲಕ್ಕೆ ನಾನು ಯಾವದೇ ನವಕರಿಯಲ್ಲಿ ಇಲ್ಲವೆ ಲಾಭಕರವಾದ ಸ್ಥಳದಲ್ಲಿದ್ದರೂ ಆ ಸ್ಥಳಕ್ಕೆ ಎರವಾಗಲು ನಾನು ಪಾತ್ರನಾಗಿರುವೆನು. "

ಭಾಷಾಶೈಲಿಯಲ್ಲಿ ಸ್ವಲ್ಪ ಬದಲಾವಣೆಯಾಗಬೇಕಾಗಬಹುದು. ಆದರೆ ಅದರ ಹಿನ್ನೆಲೆಯು ನಿಶ್ಚಯವಾಗಿ ಪ್ರಶಂಸನೀಯವಾಗಿದೆ. ರಾಜಕೀಯ ರಂಗದಲ್ಲಿ ಇಂದು ತಲೆಯೆತ್ತಿದ ಅನಾರೋಗ್ಯಕರ ಪರಿಸ್ಥಿತಿಯೊಳಗಿಂದ ಪಾರಾಗಬೇಕಾದರೆ ಇಂಥ ಪ್ರತಿಜ್ಞೆಯ ಸ್ವೀಕಾರ ಅವಶ್ಯವಾಗಿದೆ.

ಪಾಟಣಾದ ಗಾಡಿಯಲ್ಲಿ

ತಾ. ೬—೮—೪೭

ವಿದ್ಯಾರ್ಥಿಗಳ ತೊಂದರೆಗಳು

"ಈಗಿರುವ ವಿದ್ಯಾರ್ಥಿ ಸಂಘಗಳನ್ನೆಲ್ಲ ರಾಷ್ಟ್ರೀಯ ಮಹಾಸಭೆಯೊಂದರೊಳಗೆ ಕರಬೇಕೆಂಬ ಪ್ರಯತ್ನವು ಈಗ ನಡೆದಿದೆ; ವಿದ್ಯಾರ್ಥಿ ಚಳವಳದ ಮೂಲ ತತ್ವಗಳನ್ನು ಪುನರ್ವಿಮರ್ಶಿಸುವ ಹಾಗೂ ವಿದ್ಯಾರ್ಥಿಗಳ ಸಂಯುಕ್ತ ಸಂಸ್ಥೆಯೊಂದನ್ನು ಹೊರಗೆಡಹುವ ಬಯಕೆಯಿಂದ ಕೆಲಸ ಸಾಗಿದೆ. ಈ ಹೊಸ ಸಂಸ್ಥೆಯ ವ್ಯಾಪ್ತಿಯು ನಿಮ್ಮ ದೃಷ್ಟಿಯಲ್ಲಿ ಎಷ್ಟಿರಬೇಕು? ದೇಶದ ಹೊಸ ಪರಿಸ್ಥಿತಿಯಲ್ಲಿ ಈ ವಿದ್ಯಾರ್ಥಿ ಸಂಸ್ಥೆಯು ಯಾವ ಚಟುವಟಿಕೆಗಳನ್ನು ಕೈಕೊಳ್ಳಬೇಕು?

ಹಿಂದುಗಳು, ಮುಸ್ಲಿಮರು ಮತ್ತು ಇತರರನ್ನೊಳಗೊಂಡ ಅಂತಹ ಒಂದು ರಾಷ್ಟ್ರೀಯ ಸಂಸ್ಥೆಯಿರತಕ್ಕದ್ದೆಂಬುದರಲ್ಲಿ ಸಂದೇಹವಿಲ್ಲ. ವಿದ್ಯಾರ್ಥಿಗಳೇ ಭವಿಷ್ಯ ನಿರ್ಮಾಪಕರು. ಅವರನ್ನು ವಿಭಜಿಸಲಾಗದು ಒಳ್ಳೆಯ ನಾಗರಿಕರಾಗುವಂತೆ ವಿದ್ಯಾರ್ಥಿಗಳು ಸ್ವತಃ ತಮ್ಮಲ್ಲಿ ವಿಚಾರ ಮಾಡಲಿಲ್ಲ ಮತ್ತು ಮುಖಂಡರು ಕೂಡ ಅವರನ್ನು ಓದು ಬರಹದಲ್ಲಿ ಮಗ್ನರಾಗಿರಲು ಬಿಡಲಿಲ್ಲ. ಪರ ಸರಕಾರದಿಂದಲೇ ಕೊಳೆ ಪ್ರಾರಂಭಿಸಿತು. ಅದರ ಫಲದ ಹಕ್ಕುದಾರರಾದ ನಾವು ಅದರ ಹಳೆಯ ದೋಷಗಳನ್ನು ತಿದ್ದಲು ತೊಂದರೆ ತೆಗೆದುಕೊಳ್ಳಲಿಲ್ಲ. ಅದರ ಮೇಲೆ ಬೇರೆ ಬೇರೆ ರಾಜಕೀಯ ಪಕ್ಷಗಳು ಮೀನಿನ ರಾಶಿಯಂತೆ ಅವರನ್ನು ಹಿಡಿಯ ಹೋಗಿವೆ. ಮತ್ತು ದಡ್ಡತನದಿಂದ ವಿದ್ಯಾರ್ಥಿಗಳು ಅವರಿಗಾಗಿ ಎಸೆದ ಬಲೆಯೊಳಗೆ ಓಡಿ ಸಿಕ್ಕಿಕೊಂಡಿದ್ದಾರೆ.

ಆದುದರಿಂದ ಯಾವುದಾದರೊಂದು ವಿದ್ಯಾರ್ಥಿ ಸಂಸ್ಥೆಗೆ ಅದೊಂದು ಭಗೀರಥ ಪ್ರಯತ್ನವೆನಿಸುವುದೇ ಸರಿ. ಆದರೆ ಹಿಡಿದ ಕಜ್ಜದಿಂದ ಹಿಂದಿರುಗದವರಲ್ಲಿ ಒಂದು ವಿಧದ ಧೀರ ಭಾವವಿರಬೇಕು. ಅವರೆಲ್ಲರನ್ನೂ ಒಂದುಗೂಡಿಸುವುದೇ ಸಂಸ್ಥೆಯ ಕಾರ್ಯವ್ಯಾಪ್ತಿ. ಇಂದಿನ ರಾಜಕೀಯರಂಗದಿಂದ ನೇರವಾಗಿ ಹೊರಗೆ ನಿಲ್ಲಲು ಕಲಿತ ಹೊರತು ಅವರು ಇದನ್ನು ಮಾಡಲಾರರು. ಉತ್ತರಿಸಬೇಕಾಗಿರುವ ವಿವಿಧ ಸಮಸ್ಯೆಗಳನ್ನು ಅಭ್ಯಸಿಸುವುದೇ ವಿದ್ಯಾರ್ಥಿಯ ಕರ್ತವ್ಯ. ಓದು ಮುಗಿದ ಮೇಲೆ ಅವನು ಕಾರ್ಯ ಮಾಡುವ ಕಾಲ ಬರುತ್ತದೆ.

"ಇಂದು ವಿದ್ಯಾರ್ಥಿ ಸಂಸ್ಥೆಗಳು ರಾಜಕೀಯ ವಿಷಯಗಳ ಮೇಲೆ ಠರಾವು ಪಾಸು ಮಾಡುವುದರಲ್ಲೇ ಹೆಚ್ಚು ಮಗ್ನವಾಗಿರುವುವಲ್ಲದೆ ರಾಷ್ಟ್ರೀಯ ಪುನರ್ರಚನೆಯ ಕಾರ್ಯಕ್ಕಾಗಿ ತಮ್ಮ ಶಕ್ತಿಯನ್ನು ವ್ಯಯಿಸುವುದರಲ್ಲಲ್ಲ. ಅರೆವಾಸಿ ಇದು ರಾಜಕೀಯ ಪಕ್ಷಗಳು ತಮ್ಮ ಪಕ್ಷೀಯ ಉದ್ದೇಶ ಸಾಧನೆಗಾಗಿ ವಿದ್ಯಾರ್ಥಿ ಸಂಘಗಳನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿರುವುದರಿಂದ ಹೀಗಾಗಿದೆ. ನಮ್ಮ ಈಗಿನ ಅನೈಕ್ಯಕ್ಕೂ ಆ ಪಕ್ಷತಂತ್ರಗಳೇ ಕಾರಣ. ಆದುದರಿಂದ ಸೂಚಿತವಾದ ವಿದ್ಯಾರ್ಥಿಗಳ ರಾಷ್ಟ್ರೀಯ ಒಕ್ಕೂಟದಲ್ಲಿ ಈ ಎಲ್ಲ ಪಕ್ಷತಂತ್ರ ಮತ್ತು ಅನೈಕ್ಯಗಳು ಪುನಃ ಉದಯಿಸದಂತೆ ಮಾಡಲು ನಾವು ಒಂದು ಕ್ರಮವನ್ನು ಹೊರಗೆಡಹಬೇಕೆನ್ನುತ್ತೇವೆ. ರಾಜತಂತ್ರವನ್ನು ಸಂಪೂರ್ಣವಾಗಿ ಬಿಟ್ಟುಬಿಡಲು ವಿದ್ಯಾರ್ಥಿ ಸಂಘಗಳಿಗೆ ಸಾಧ್ಯವೆಂದು ನೀವು ತಿಳಿಯುವಿರಾ? ಸಾಧ್ಯವಿಲ್ಲವಾದರೆ ವಿದ್ಯಾರ್ಥಿ ಸಂಘಗಳು ಎಷ್ಟರವರೆಗೆ ರಾಜತಂತ್ರದಲ್ಲಿ ಆಸಕ್ತಿವಹಿಸಬೇಕು?"

ಈ ಪ್ರಶ್ನೆಯನ್ನು ಪರೋಕ್ಷವಾಗಿ ಮೇಲೆ ಉತ್ತರಿಸಲಾಗಿದೆ. ವಿದ್ಯಾರ್ಥಿ ಪ್ರಪಂಚವನ್ನು ಎಲ್ಲಪಕ್ಷಗಳೂ ತಮ್ಮ ಉದ್ದೇಶ ಸಾಧನೆಗಾಗಿ ಬಳಸಿಕೊಂಡಿರುವುದು ಒಮ್ಮುಗ್ಗಲ ಬೆಳವಣಿಗೆಯ ಗುರುತು. ದಾಸ್ಯಕ್ಕೆ ಜೋತು ಬೀಳುವ ದಾಸ್ಯ ಕುಲವೊಂದನ್ನು ಸೃಷ್ಟಿಸುವುದೇ ವಿದ್ಯಾಭ್ಯಾಸದ ಉದ್ದೇಶವಾದಾಗ ಇದು ಅಪರಿಹಾರ್ಯವಾಗಿತ್ತೆನ್ನಬಹುದು. ಆ ಕೆಲಸ ಮುಗಿದಿದೆಯೆಂದು ಆಶಿಸುತ್ತೇನೆ. ವಿದ್ಯಾರ್ಥಿಗಳ ಮೊದಲ ಕರ್ತವ್ಯವೆಂದರೆ ಸ್ವತಂತ್ರ ರಾಷ್ಟ್ರದ ಮಕ್ಕಳು ಪಡೆಯಬೇಕಾದ ವಿದ್ಯಾಭ್ಯಾಸವಾವುದೆಂಬುದನ್ನು ವಿಚಾರ ಮಾಡುವುದು. ಇಂದಿನ ವಿದ್ಯಾಭ್ಯಾಸವು ಅಂಥದಲ್ಲವೆಂಬುದು ಸ್ಪಷ್ಟ. ಅದು ಎಂಥದಿರಬೇಕೆಂಬ ಪ್ರಶ್ನೆಯಲ್ಲಿ ನಾನು ತಲೆಹಾಕಬಾರದು. ಅವರು ಅದು ವಿಶ್ವವಿದ್ಯಾಲಯದ ಸಿನೇಟಿನಲ್ಲಿರುವ ತಮ್ಮ ಹಿರಿಯರು ಮಾತ್ರ ಮಾಡಬೇಕಾದ ಕರ್ತವ್ಯವೆಂದು ತಿಳಿದು ಮೋಸ ಹೋಗಬಾರದು. ವಿಚಾರ ಶಕ್ತಿಯನ್ನು ಅವರು ಪ್ರಚೋದಿಸಿಕೊಳ್ಳಬೇಕು. ಮುಸ್ಕರ ಮುಂತಾದುವುಗಳಿಂದ ವಿದ್ಯಾರ್ಥಿಗಳು ಅಂತಹ ಸನ್ನಿವೇಶವನ್ನು ಬಲಾತ್ಕಾರದಿಂದ ಬರಮಾಡಬೇಕೆಂದು ನಾನು ಸೂಚ್ಯವಾಗಿ ಕೂಡ ಹೇಳುವುದಿಲ್ಲ. ರಚನಾತ್ಮಕ ಹಾಗೂ ಪ್ರಬುದ್ಧ ವಿಮರ್ಶೆಗಳಿಂದ ಅವರು ಸಾರ್ವಜನಿಕ ಮತವನ್ನು ಹುಟ್ಟಿಸಬೇಕು. ಹಳೆಯ ಪ್ರಸ್ಥಾನದಲ್ಲಿ ಬೆಳೆದು ಬಂದ ಸಿನೇಟಿನ ಸದಸ್ಯರು ಬೇಗ ಹೊಸ ಬದಲಾವಣೆಯತ್ತ ಗಮನ ಕೊಡಲಾರರು. ತಿಳಿಸಿ ಹೇಳುವುದರಿಂದ ಅವರನ್ನು ಆತ್ತ ಕಡೆ ಒಯ್ಯಬಹುದು.

"ಇಂದು ರಾಷ್ಟ್ರಸೇವೆಯಲ್ಲಿ ಬಹುಸಂಖ್ಯಾಕ ವಿದ್ಯಾರ್ಥಿಗಳು ಆಸಕ್ತಿ ವಹಿಸುತ್ತಿಲ್ಲ. ಅವರಲ್ಲಿ ಬಹಳ ಜನರು ತಾವು ವೈಲಾಸಿಕವೆಂದು ತಿಳಿದುಕೊಂಡ ಪಾಶ್ಚಾತ್ಯ ಅಭ್ಯಾಸಗಳನ್ನು ಕಲಿಯುತ್ತಿದ್ದಾರೆ. ಮತ್ತು ಹೆಚ್ಚು ಹೆಚ್ಚು ವಿದ್ಯಾರ್ಥಿಗಳು ಮದ್ಯಪಾನ ಮುಂತಾದ ದುರಭ್ಯಾಸಗಳಿಗೆ ಶರಣು ಹೊಗುತ್ತಿದ್ದಾರೆ. ಸ್ವತಂತ್ರ ವಿಚಾರಕ್ಕೆ ಅವರಲ್ಲಿ ಏನೂ ಇಚ್ಛೆ ಹಾಗು ದಕ್ಷತೆಯಿಲ್ಲ. ನಾವು ಈ ಎಲ್ಲ ಸಮಸ್ಯೆಗಳನ್ನೂ ಎದುರಿಸಬಯಸುತ್ತೇವೆ; ಮತ್ತು ಚಾರಿತ್ರಶುದ್ಧಿ, ಸಿಸ್ತು ಮತ್ತು ದಕ್ಷತೆಗಳನ್ನು ತರುಣರಲ್ಲಿ ಬೆಳೆಸಲಪೇಕ್ಷಿಸುತ್ತೇವೆ. ನಾವು ಅದನ್ನು ಹೇಗೆ ಮಾಡಬಲ್ಲೆವೆಂದು ನೀವು ತಿಳಿಯುವಿರಿ?"

ಇದು ಇಂದಿನ ಪ್ರಕ್ಷುಬ್ಧ ಮನೋಭಾವಕ್ಕೆ ಸಂಬಂಧಿಸಿದೆ. ಒಂದು ಶಾಂತವಾತಾವರಣ ಉತ್ಪನ್ನವಾದಾಗ, ವಿದ್ಯಾರ್ಥಿಗಳು ಮುಷ್ಕರಕಾರರಾಗುವುದನ್ನು ನಿಲ್ಲಿಸಿ ಗಂಭೀರವಾಗಿ ಓದಿಗೆ ಗಮನ ಕೊಡತೊಡಗಿದಾಗ ಇದು ಮಾಯವಾಗುತ್ತದೆ. ಒಬ್ಬ ವಿದ್ಯಾರ್ಥಿಯ ಜೀವನವು ನ್ಯಾಯವಾಗಿಯೇ ಸನ್ಯಾಸಿಯ ಜೀವನಕ್ಕೆ ಹೊಂದಿಸಲಾಗಿದೆ. ಅವನು ಸರಳ ಜೀವನ ಮತ್ತು ಉದಾತ್ತ ಮನನಗಳ ಮೂರ್ತಿಮತ್ ಸ್ವರೂಪವಾಗಿರಬೇಕು. ಅವನು ಶಿಸ್ತಿನ ಅವತಾರವೇ ಆಗಿರಬೇಕು. ಅವನ ಓದಿನಲ್ಲಿಯೇ ಅವನ ಸಂತೋಷವಿದೆ. ತಾನು ಕೊಡಬೇಕಾದ ಒಂದು ದಂಡವೆಂಬ ತಿಳುವಳಿಕೆ ಹೋದಾಗ ವಿದ್ಯಾರ್ಥಿಗೆ ಓದು ನಿಜವಾದ ಸಂತೋಷವನ್ನು ಕೊಡುತ್ತದೆ. ಜ್ಞಾನದಿಂದ ಹೆಚ್ಚು ಜ್ಞಾನಕ್ಕೆ ವ್ಯವಸ್ಥಿತವಾಗಿ ಸಾಗುವ ವಿದ್ಯಾರ್ಥಿಯ ಸಂತೋಷಕ್ಕಿಂತ ಹೆಚ್ಚಿನ ಸಂತೋಷವಾವುದಿದೆ?

—ಗಾಂಧೀಜಿಯಿಂದ

ಅವರು ಜೀವಂತ ಹುಗಿಯಲ್ಪಟ್ಟಿರುವರೋ?

[ಮೋ. ಕ. ಗಾಂಧಿ]

ಹೈದ್ರಾಬಾದ (ದಕ್ಷಿಣ) ದಿಂದ ಪತ್ರಿಕಾ ಲೇಖಕರೊಬ್ಬರು ಬರೆಯುತ್ತಾರೆ.

'ಗಾಂಧೀಜಿಯವರ ಧ್ಯೇಯ ಮತ್ತು ಅದಕ್ಕನುಸಾರವಾದ ಕೃತಿಗಳ ಬಲದಿಂದಲೆ ಭಾರತ ಸದ್ಯದ ಮೆಟ್ಟಿಲನ್ನು ಮುಟ್ಟಿದೆ. ಇಷ್ಟು ಎತ್ತರ ಹೋಗಲು ಯಾವದು ನಮಗೆ ಸಹಾಯಕವಾಗಿದ್ದಿತೋ ಆ ನಿಚ್ಚಣಿಕೆಯನ್ನೇ ನಾವು ಒದು ಕೆಡಹುವೆವೆಂಬುದು ಸ್ಪಷ್ಟವಾಗಿ ಕಾಣುವದಿಲ್ಲವೆ? ಹಿಂದು ಮುಸಲ್ಮಾನ ಐಕ್ಯ, ಹಿಂದುಸ್ತಾನೀ, ಖಾದಿ, ಗ್ರಾಮೋದ್ಯೋಗಗಳೆಲ್ಲಿರುವುವು? ಆ ಬಗ್ಗೆ ಮಾತಾಡುವದೆಂದರೆ ಒಂದು ಬಗೆಯ ಆತ್ಮವಂಚನೆಯಲ್ಲವೆ?'

ಇಷ್ಟೊಂದು ಕಟುಟೀಕೆಗೆ ಅರ್ಥವಿದೆ. ಆದರೆ ನಾನಿನ್ನೂ ಜೀವಂತ ಹುಗಿಯಲ್ಪಟ್ಟಿಲ್ಲೆಂಬ ಆಸೆಯನ್ನು ತಾಳುತ್ತೇನೆ. ಇವೆಲ್ಲವುಗಳಲ್ಲಿ ಸಾಮಾನ್ಯ ಜನರ ಆಸೆ ಇನ್ನೂ ಮಾಯವಾಗಿಲ್ಲೆಂಬ ವಿಶ್ವಾಸದಿಂದ ನಾನೀ ಆಸೆಯನ್ನು ಕಟ್ಟಿಕೊಂಡಿದ್ದೇನೆ. ಅವರು ಆ ನಂಬಿಕೆಯನ್ನು ಬಿಟ್ಟುಗೊಟ್ಟರೆಂದು ಸಿದ್ಧವಾದ ಕೂಡಲೆ ಅದೆಲ್ಲ ಮಾಯವಾಯಿತೆಂದು ಹೇಳಬೇಕಾಗುವದು ಆದರೆ ಎಲ್ಲಿಯ ವರೆಗೆ ನನ್ನ ಆ ನಂಬುಗೆ ಅಚಲವಾಗಿರುವದೋ—ನಾನೊಬ್ಬನೇ ಉಳಿದರೂ ಅದು ಅಚಲವಾಗಿ ಉಳಿಯುವದೆಂದು ನಾನು ಆಶಿಸುವೆ—ಅಲ್ಲಿಯ ವರೆಗೆ ನಾನು ಗೋರಿಯಲ್ಲಿಯೆ ಜೀವಂತ ಉಳಿಯುವೆ ಮತ್ತು ಅದಕ್ಕೂ ಹೆಚ್ಚೆಂದರೆ ಅಲ್ಲಿಂದಲೆ ಮಾತಾಡುವೆ. ಈ ಪತ್ರಿಕಾ ಲೇಖಕ ಅಸ್ಪೃಶ್ಯತೆ ಮತ್ತು ಮದ್ಯಪ್ರತಿಬಂಧಕಾರ್ಯಕ್ರಮವನ್ನು ಮರೆತಿದ್ದಾನೆ. ಮೊದಲನೆಯದು ತೀವ್ರ ಗತಿಯಿಂದ ಮಾಯವಾಗ ಹತ್ತಿದೆ. ಮದ್ಯ ಪ್ರತಿಬಂಧವೂ ಜಾರಿಯಲ್ಲಿ ಬರುತಿರುವಂತೆ ಕಾಣುತಿದೆ. ೧೯೨೦ ರಲ್ಲಿ ಸ್ವೀಕರಿಸಿದ ಧ್ಯೇಯಗಳನ್ನು ಕಾಂಗ್ರೆಸ್ಸು ಬಿಟ್ಟುಕೊಟ್ಟರೆ ಆತ್ಮಹತ್ಯ ಮಾಡಿಕೊಂಡಂತಾಗುವದು.

ಪಾಟಿಣಾಕ್ಕೆ ಹೋಗುವ ಗಾಡಿಯಲ್ಲಿ

೭—೮—೪೭

(ಹಿಂದುಸ್ತಾನಿಯಿಂದ)

ಕರ್ನಾಟಕ ಮಹಾಧಿವೇಶನದ ಗೊತ್ತುವಳಿಗಳು

ಗದುಗಿನಲ್ಲಿ ಕಳೆದ ೧೨ನೇ ತಾರೀಕು ಕೂಡಿದ ಕರ್ನಾಟಕ ಮಹಾಧಿವೇಶನದಲ್ಲಿ ಸ್ವೀಕೃತವಾದ ಗೊತ್ತುವಳಿಗಳನ್ನು ಕೆಳಗೆ ಕೊಡಲಾಗಿದೆ—

೧ ಕೊಲ್ಹಾಪುರ ಮಂತ್ರಿಗಳಾಗಿ ನೇಮಕರಾದ ಕರ್ನಾಟಕದ ಡಾ. ಪಾನಿಯವರ ರಾಜೀನಾಮೆಯಿಂದ ಘಟನಾಸಮಿತಿಯಲ್ಲಿ ತೆರವಾದ ಸ್ಥಳವನ್ನು ಕರ್ನಾಟಕದ ಬಹುಮತ ಅಭಿಪ್ರಾಯವನ್ನು ಲೆಕ್ಕಿಸದೆ ಹಾಕಿಯುಂಟುಮಾಡಿದ್ದಕ್ಕೆ ಈ ಸಭೆಯು ವಿಷಾದ ವ್ಯಕ್ತಮಾಡಿ ಇನ್ನುಮುಂದೆ ಕನ್ನಡಿಗರ ಹಕ್ಕುಬಾಧ್ಯತೆಗಳಿಗೆ ಯಾವದೇ ಕಾರಣದಿಂದ ಕೊರತೆ ಬಾರದಂತೆ ನೋಡಿಕೊಳ್ಳಬೇಕೆಂದು ಒಕ್ಕೊರಲಿನಿಂದ ಸೂಚಿಸುತ್ತದೆ.

೨ ಕೆಲವು ದಕ್ಷಿಣ ಸಂಸ್ಥಾನಾಧೀಶರು ಪ್ರಜಾಜನರ ಸಮ್ಮತಿ ಪಡೆಯದೆ ಸಂಘರಾಜ್ಯ ರಚಿಸುವ ಯೋಜನೆಯಲ್ಲಿ ನಿರತರಾಗಿದ್ದು ಯೋಜನೆಯಲ್ಲಿ ಪ್ರಜೆಗಳ ಹಿತ ಕಾಪಾಡಲ್ಪಡದೆ ಹೋದರೆ ಅದನ್ನು ವಿರೋಧಿಸುವದು ಪ್ರಜೆಗಳ ಕರ್ತವ್ಯವಿದೆ. ಕೆಲವು ಸಂಸ್ಥಾನಿಕರು ಈ ಯೋಜನೆಯನ್ನು ಒತ್ತಾಯದಿಂದ ಹೇರಬೇಕೆಂದು ನಿರ್ಣಯಿಸಿರುವದನ್ನು ಈ ಸಭೆಯು ತೀವ್ರ ಖಂಡಿಸಿ ಯಾವದೇ ಯೋಜನೆಯಾಗಲಿ ಪ್ರಜಾಭಿಪ್ರಾಯಕ್ಕೆ ಒಳಪಟ್ಟಿರಬೇಕೆಂದು ರಾಜರಿಗೆ ಒತ್ತಿ ಹೇಳುತ್ತದೆ, ಮತ್ತು ಪ್ರಜಾಹಿತ ಘಾತಕವಾದ ಯೋಜನೆಯನ್ನು ಪ್ರಜೆಗಳು ವಿರೋಧಿಸುವ ಪ್ರಸಂಗ ಬಂದಲ್ಲಿ ಆ ಹೋರಾಟಕ್ಕೆ ಈ ಸಭೆಯು ಹೃತ್ಪೂರ್ವಕ ಬೆಂಬಲ ಕೊಡುತ್ತದೆ.

೩. ಕರ್ನಾಟಕ ಪ್ರಾಂತವು ಪರಿಪೂರ್ಣವಾಗಲು ಮೈಸೂರು ದೇಶವು ಕರ್ನಾಟಕದ ಅಂಗವಾಗಬೇಕಾದುದು ಅವಶ್ಯವಾಗಿರುವದರಿಂದ ಮೈಸೂರಿನಲ್ಲಿ ಕೂಡಲೆ ಹೊಣೆಗಾರ ಸರಕಾರ ಸ್ಥಾಪಿಸಿ ಕರ್ನಾಟಕ ಏಕೀಕರಣಕ್ಕೆ ಸಹಾಯಕರಾಗಬೇಕೆಂದು ಮಹಾರಾಜರಲ್ಲಿ ವಿಚಾರ ವಿನಿಮಯ ಮಾಡಲು ಕರ್ನಾಟಕದ ಪರವಾಗಿ ಒಂದು ಶಿಷ್ಟಮಂಡಳ ಕಳಿಸಲು ಮೈಸೂರಲ್ಲಿ ಕೂಡಿದ ಕ. ಪ್ರಾಂ. ಕಾಂ. ಕಮೀಟಿ ಸಭೆಯಲ್ಲಿ ಸ್ವೀಕೃತವಾದ ಗೊತ್ತುವಳಿಯನ್ನು ಈ ಸಭೆಯು ತುಂಬಾ ಅನುಮೋದಿಸುತ್ತದೆ.

೪ ದಾವಣಗೆರೆ ಮಹಾಧಿವೇಶನದಲ್ಲಿ ಸ್ವೀಕೃತವಾದ ಗೊತ್ತುವಳಿಯನ್ನು ಈ ಸಭೆಯು ಪುನರುಚ್ಚರಿಸಿ, ಭಾಷಾನುಗುಣ ಪ್ರಾಂತರಚನೆ ತತ್ತ್ವಕ್ಕನುಸರಿಸಿ ಸಂಸ್ಥಾನಗಳನ್ನೊಳಗೊಂಡು ಅಖಿಲ ಕರ್ನಾಟಕಕ್ಕೆ ಪ್ರತ್ಯೇಕಪ್ರಾಂತ ರಚಿಸಿಕೊಳ್ಳಲು ಕರ್ನಾಟಕಸ್ಥರಿಗೆ ಪೂರ್ಣ ಅಧಿಕಾರವಿದೆಂದು ಪುನಃ ಘೋಷಿಸುತ್ತದೆ. ಮತ್ತು ಇತ್ತೀಚೆಗೆ ಭಾರತ ಘಟನಾ ಸಮಿತಿಗೆ ಉಪಸಮಿತಿಯವರು ಭಾಷಾನುಗುಣ ಪ್ರಾಂತ ರಚನೆಯ ಸಾಧ್ಯಾಸಾಧ್ಯತೆ ಪರಿಶೀಲಿಸಲು ಕಮೀಟಿ ನೇಮಿಸಬೇಕೆಂದು ಸೂಚಿಸಿ ಈ ಪ್ರಶ್ನೆ ಮುಂದೆ ದೂಡುವಂಥ ಪರಿಣಾಮವುಂಟು ಮಾಡಿದ್ದನ್ನು ಈ ಸಭೆಯು ತೀವ್ರ ಪ್ರತಿಭಟಿಸುತ್ತಿದೆ.

೫ ಕರ್ನಾಟಕವು ಅನೇಕ ಆಡಳಿತಗಳಲ್ಲಿ ಹರಿದು ಹಂಚಿ ಹೋದದ್ದರಿಂದ ಅದು ತೀವ್ರ ಒಂದಾಗದಿದ್ದಲ್ಲಿ ನಮ್ಮ ಪ್ರಾಂತವು ಪ್ರಗತಿ ಹೊಂದಲಾರದು. ಇದಲ್ಲದೆ ಕರ್ನಾಟಕವು ಸ್ವಾಯತ್ತ ಪ್ರಾಂತವಾಗಲು ಯೋಗ್ಯವಾದದ್ದೆಂದು ಈ ಮೊದಲೆ ನೆಹರೂ ಕಮೀಟಿ ಹಾಗು ಸರದಾರಪಟೇಲ ಎಂಥವರೂ ಒಪ್ಪಿರುವರು. ಅದ್ದರಿಂದ ಘಟನಾ ಸಮಿತಿಯು ಈ ಪರಿಶೀಲಕ ಸಮಿತಿಯು ಕರ್ನಾಟಕ ಮಟ್ಟಿಗೆ ತೀರ ಅನವಶ್ಯವಾಗಿರುವದು. ಕಾರಣ ಅಗಸ್ಟ ೧೫ ರ ನಂತರ ಬರುವ ಭಾರತ ಸರಕಾರವು ಪ್ರಾಂತೀಕರಣ ಬಗ್ಗೆ ಕೂಡಲೆ ಗಡಿನಿರ್ಣಯ ಸಮಿತಿ ನೇಮಿಸುವಂತೆ ಘಟನೆಯಲ್ಲಿ ವ್ಯವಸ್ಥೆ ಮಾಡಬೇಕೆಂದು ಈ ಸಭೆಯು ಆಗ್ರಹಪೂರ್ವಕ ಕೇಳುತ್ತದೆ.

೬. ಈ ಯಾವತ್ತೂ ಪರಿಸ್ಥಿತಿ ಅನುಲಕ್ಷಿಸಿ ಪ್ರಾಂತ ನಿರ್ಮಾಣಕ್ಕೆ ಅವಶ್ಯವಿದ್ದ ಯಾವತ್ತೂ ಉಪಾಯ ಹಾಗು ಕಾರ್ಯಕೈಕೊಳ್ಳಲು ದಾವಣಗೆರೆ ಅಧಿವೇಶನದಲ್ಲಿ ನೇಮಕವಾದ ಕೆಳಗೆ ಕಂಡ ಸಮಿತಿಯು ಮಹನೀಯರೇ ಇನ್ನು ಮುಂದೆ ಕ್ರಿಯಾ ಸಮಿತಿಯಾಗಿ ಮಾರ್ಪಡಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ. ಹಾಗು ಅವಶ್ಯಬಿದ್ದರೆ ಹೆಚ್ಚಿನ ಜನರನ್ನು ಸೇರಿಸಿಕೊಳ್ಳಲು ಅವರಿಗೆ ಅಧಿಕಾರ ಕೊಡುತ್ತದೆ. ೧ ಶ್ರೀಗಳಾದ ಎಂ ಪಿ ಪಾಟೀಲ ೨. ಎಸ್ ನಿಜಲಿಂಗಪ್ಪ ೩ ಜಿನರಾಜ ಹೆಗಡೆ.

೭ ಭಾರತ ರಾಜ್ಯಾಂಗ ರಚನೆ ಸಭೆಯಲ್ಲಿ ಈಗಾಗಲೆ ನಿರ್ಣಯವಾದಂತೆ ಭಾಷಾನುಗುಣ ಪ್ರಾಂತರಚನೆಯ ಕಾಲಕ್ಕೇನೆ ಕರ್ನಾಟಕದ ಬಹುಭಾಗವಾದ ಕನ್ನಡ ಸಂಸ್ಥಾನಿ ಪ್ರದೇಶವು ಭಾವೀ ಕರ್ನಾಟಕ ಪ್ರಾಂತದಲ್ಲಿ ವಿಲೀನವಾಗಿ ಅಖಂಡ ಸ್ವಾಯತ್ತ ಕರ್ನಾಟಕ ನಿರ್ಮಾಣವಾಗುವಂತೆ ನೋಡಿಕೊಳ್ಳಲು ಕನ್ನಡ ಸಂಸ್ಥಾನಗಳ ಸ್ಥಿತಿಗತಿ ನಿರೀಕ್ಷಿಸಿ ಪೂರ್ವಸಿದ್ಧತೆ ಕೈಕೊಳ್ಳುವದಕ್ಕಾಗಿ ಈ ಸಭೆಯು ಕೆಳಗಿನ ಮಹನೀಯರ ಅಖಿಲ ಕರ್ನಾಟಕ ಸಂಸ್ಥಾನ ಸಮಿತಿ ನೇಮಿಸುತ್ತದೆ. ೧ ಶ್ರೀಗಳಾದ ಎಸ್ ನಿಜಲಿಂಗಪ್ಪ ೨ ಅಂದಾನೆಪ್ಪ ದೊಡ್ಡಮೇಟಿ ೩ ಬಿ. ಎಸ್. ಮುನವಳ್ಳಿ ೪ ಸ್ವಾಮಿ ರಮಾನಂದ ತೀರ್ಥ ೫ ಕೆ. ಚಂಗಲರಾಯ ರೆಡ್ಡಿ.

೮ ಕ್ರಿಯಾ ಸಮಿತಿಯವರು ಪ್ರಾಂತೀಕರಣಕ್ಕಾಗಿ ಕೈಕೊಳ್ಳುವ ಯಾವತ್ತೂ ಕಾರ್ಯಕ್ಕಾಗಿ ಹಣ ಕೂಡಿಸಲು ಶ್ರೀ ಯಳಮಲಿ ಶಾಂತಪ್ಪನವರಿಗೆ ಈ ಸಭೆಯು ಸಂಪೂರ್ಣ ಅಧಿಕಾರ ಕೊಡುತ್ತದೆ. ಅವರು ಈ ಬಗ್ಗೆ ಉಚಿತ ಕಂಡವರ ಒಂದು ಸಮಿತಿಯನ್ನು ನೇಮಿಸಿಕೊಳ್ಳಬಹುದು.

ಸಭೆಯಲ್ಲಿ ಪ್ರಾರಂಭದಲ್ಲಿ ಶ್ರೀಗಳಾದ ಮಂಜಪ್ಪ ಹರ್ಡೀಕರ, ಗೋಪಾಳರಾವ ಕಿಣಿ, ಅನಂತರಾವ ಸಾಬಡೆ, ದ. ಬ. ಅಧ್ಯಾಪಕ, ಆರ್. ವಿ. ಭದ್ರಣ್ಣವರ, ಜನಾಬ ಮಹಮ್ಮದ ಗೌಸ. ಮರಿಕಮ್ಮಪ್ಪ ಗಡಗಿ ಅವರ ನಿಧನ ಕುರಿತು ದುಃಖ ಪ್ರದರ್ಶಿಸಲಾಯಿತು.

ದೇವರು ಒಳ್ಳೆಯವನು

ಅಮುಕ ವ್ಯಕ್ತಿ ಒಳ್ಳೆಯವನೆಂಬ ಅರ್ಥದಲ್ಲಲ್ಲ. ಅಮುಕ ವ್ಯಕ್ತಿ ಉಳಿದವರೊಡನೆ ಹೋಲಿಸಿದರೆ ಒಳ್ಳೆಯವನು. ಅವನು ಕೆಟ್ಟವನಾಗಿರುವುದಕ್ಕಿಂತ ಹೆಚ್ಚು ಒಳ್ಳೆಯವನು. ಆದರೆ ದೇವರು ಸಂಪೂರ್ಣ ಒಳ್ಳೆಯವನು. ಅವನಲ್ಲಿ ಕೇಡೆಂಬುದಿಲ್ಲ. ದೇವರು ತನ್ನ ಮಾದರಿಯಲ್ಲಿಯೆ ಜನರನ್ನು ಹುಟ್ಟಿಸಿದನು. ನಮ್ಮ ದುರದೃಷ್ಟದಿಂದ ದೇವರನ್ನು ಮನುಷ್ಯನು ತನ್ನಂತೆಯೇ ರೂಪಿಸಿಕೊಂಡಿದ್ದಾನೆ. ಈ ಆರೋಪವು ಮನುಷ್ಯ ಕುಲವನ್ನು ತೊಂದರೆಗಡಲಲ್ಲಿ ನೂಕಿಬಿಟ್ಟಿದೆ. ದೇವರು ಸರ್ವೋತ್ತಮನಾದ ರಸಾಯನ ವಿಜ್ಞಾನಿ. ಅವನೆದುರಿನಲ್ಲಿ ಎಲ್ಲ ಕಬ್ಬಿಣ ಹಾಗೂ ತುಕ್ಕು ಶುದ್ಧ ಸುವರ್ಣವಾಗುತ್ತವೆ. ಹಾಗೇ ಎಲ್ಲ ಕೇಡೂ ಒಳಿತಾಗುವುದು.

ಮತ್ತೆ, ದೇವರು ಬದುಕುತ್ತಾನೆ. ಆದರೆ ನಮ್ಮಂತಲ್ಲ. ಅವನ ಸೃಷ್ಟಿ ಸಾಯಲು ಮಾತ್ರ ಬದುಕುತ್ತವೆ. ಆದರೆ ದೇವರೇ ಜೀವನ. ಅದುದರಿಂದ, ಒಳ್ಳೆಯತನ ಮತ್ತು ಅದರಿಂದ ಸೂಚ್ಯವಾದ ಎಲ್ಲವೂ ವಿಶೇಷಣವಲ್ಲ. ಒಳ್ಳೆಯತನವೇ ದೇವರು.

ಅವನಿಂದ ಬೇರೆ ಮಾಡಿ ಒಳ್ಳೆಯತನವನ್ನು ಎಣಿಸಿದರೆ ಅದೊಂದು ನಿರ್ಜೀವ ವಸ್ತು ಮತ್ತು ಲಾಭಕಾರವಾದ ಧೋರಣವಾದಾಗ ಮಾತ್ರ ಅದು ಅಸ್ತಿತ್ವದಲ್ಲಿರುತ್ತದೆ. ಹಾಗೇ ಎಲ್ಲ ಸಾವಿಗೆ ತುತ್ತಾಗುವ ಜಂತುಗಳೂ. ಅದು ನಮ್ಮಲ್ಲಿ ಬದುಕಬೇಕಾದರೆ ಅದನ್ನು, ಅದು ದೇವರಿಗೆ ಹೇಗೆ ಸಂಬಂಧಪಟ್ಟಿದೆಯೆಂಬುದರ ಮೇಲೆ ಪರ್ಯಾಲೋಚಿಸಿ, ಮೈಗೂಡಿಸಿಕೊಳ್ಳಬೇಕು. ನಾವು ಒಳ್ಳೆಯವರಾಗಲು ಪ್ರಯತ್ನಿಸುತ್ತೇವೆ; ಏಕೆಂದರೆ, ನಾವು ದೇವರನ್ನು ಸಮೀಪಿಸಿ ಸಾಕ್ಷಾತ್ಕರಿಸಿಕೊಳ್ಳಬೇಕೆಂದು ಬಯಸುವೆವು. ಜಗತ್ತಿನ ಎಲ್ಲ ಒಣ ನೀತಿಯೂ ಧೂಳಾಗಿ ಹೋಗುತ್ತದೆ. ಏಕೆಂದರೆ, ದೇವರಿಂದ ಬೇರಾಗಿ ತಿಂತರೆ ಅದೆಲ್ಲ ನಿರ್ಜೀವವವೇ. ದೇವರಿಂದ ಬರುವಾಗ ಅದು ಸಜೀವವಾಗಿ ಬರುತ್ತದೆ. ಅದು ನಮ್ಮ ಒಂದು ಭಾಗವಾಗಿ ನಮ್ಮನ್ನು ಉದಾತ್ತಗೊಳಿಸುತ್ತದೆ.

ಅದನ್ನೇ ತಿರುಗಿಸಿ ಹೇಳಿದರೆ, ಒಳ್ಳೆಯತನದಿಂದ ಬೇರ್ಪಡಿಸಿ ದೇವರನ್ನು ಕಲ್ಪಿಸಿದರೆ ಅವನೂ ನಿರ್ಜೀವನವೇ. ನಮ್ಮ ನಿರರ್ಥಕವಾದ ಕಲ್ಪನೆಗಳಿಂದ ನಾವು ಅವನಿಗೆ ಜೀವ ಕೊಡುತ್ತೇವೆ.

—ಗಾಂಧೀಜಿಯಿಂದ

ಸರಹದ್ದ ಮಂತ್ರಿಮಂಡಳ ಕಿತ್ತುಹಾಕಿದರು!

ಅಬ್ದುಲ್ ಕ್ವಯಾಮಖಾನರಿಗೆ ಆಮಂತ್ರಣ

ಸರಹದ್ದ ಪ್ರಾಂತ್ಯದ ಡಾ. ಖಾನಸಾಹೇಬ ಮಂತ್ರಿಮಂಡಳವನ್ನು ಗವರ್ನರ ಸಾಹೇಬರು ಕಿತ್ತು ಹಾಕಿ ಮುಸ್ಲಿಂಲೀಗಿನ ಧುರೀಣರೂ ವಿರುದ್ಧ ಪಕ್ಷದ ಧುರೀಣರೂ ಆಗಿರುವ ಅಬ್ದುಲ್ ಕ್ವಯಾಂಖಾನರನ್ನು ಹೊಸ ಮಂತ್ರಿಮಂಡಳ ರಚಿಸಲು ಆಮಂತ್ರಣ ಕಳಿಸಿರುವರು.

ಆಹಾರದ ಕಷ್ಟ ಮತ್ತು ಮಣ್ಣಿನ ಫಲವತ್ತೆ

(ತಾ. ೧೧ ಅಗಸ್ಟ ೪೭ ರ ಸಂಚಿಕೆಯಿಂದ ಮುಂದುವರಿದುದು)

ಸೆಗಣಿಯನ್ನು ಸುಡುವದು ಮಹಾಪರಾಧ

ಮೇಲೆ ಹೇಳಿದಂತೆ ಸೆಗಣಿ ಅಥವಾ ಕೊಟ್ಟಿಗೆಯ ಗೊಬ್ಬರವು ಮಣ್ಣಿನ ಗುಣಾಭಿವೃದ್ಧಿಗೂ ಫಸಲಿನ ಪ್ರಮಾಣವನ್ನು ಒಂದೇ ಸಮನಾಗಿ ಇಟ್ಟಿರುವದಕ್ಕೂ ಅತ್ಯುತ್ತಮವಾದುದು. ಸರಿಯಾಗಿ ಬಳಸಿದರೆ ವಿಶೇಷ ಖರ್ಚಿಲ್ಲದೆ ಬಡ ಹಿಂದೀ ಒಕ್ಕಲಿಗರಿಗೆ ಸಮಪ್ರಮಾಣದ ಬೆಳೆಯನ್ನು ಅದು ಒದಗಿಸಿ ಕೊಡಬಲ್ಲದು. ಸೆಗಣಿಯ ಗೊಬ್ಬರವು ಅತ್ಯಂತ ಬೆಲೆ ಬಾಳುವ ಗೊಬ್ಬರವಾಗಿದ್ದು ತನ್ನ ಹಣವನ್ನೇ ತಾನು ಸುಡುತ್ತಿರುವೆನೆಂಬ ಅರಿವಿಲ್ಲದೆ ಹಿಂದೀ ರೈತನು ಅದನ್ನು ಸುಡಲು ಉಪಯೋಗಿಸುವುದನ್ನು ಕಂಡರೆ ಕನಿಕರವೆನಿಸುತ್ತದೆ. ಆದರೆ ಅವನು ಉರುವಲಿಗೆ ಏನನ್ನು ಉಪಯೋಗಿಸಬೇಕೆಂಬ ಪ್ರಶ್ನೆಯೇಳುತ್ತದೆ. ದುರದೃಷ್ಟದಿಂದ ಸೆಗಣಿಯೊಂದೇ ಅವನಿಗೆ ಅಗ್ಗವಾಗಿ ಸಿಗುವ ಉರುವಲು. ಹಿಂದೆ ಸರಕಾರವು ಈ ಮುಖ್ಯ ಸಮಸ್ಯೆಯನ್ನೇ ಸಂಪೂರ್ಣವಾಗಿ ಅಲಕ್ಷ್ಯಮಾಡಿತ್ತು. ಮತ್ತು ಈಗಲೂ ಆ ಬಗ್ಗೆ ಅದರ ಹತ್ತಿರ ಯಾವ ಯೋಜನೆಯೂ ಇದ್ದಂತಿಲ್ಲ. ಒಕ್ಕಲುತನದ ಸುಧಾರಣೆಗಾಗಿ ಸಾವಿರಾರು ಯೋಜನೆಗಳನ್ನು ಕೈಕೊಳ್ಳುವೆನೆಂಬ ರಾಷ್ಟ್ರೀಯ ಸರಕಾರದ ಆಳಿಕೆಯಲ್ಲಿ ಸೆಗಣೆಯನ್ನು ಗೊಬ್ಬರಕ್ಕಾಗಿ ಉಳಿಯುವಂತೆ ಮಾಡಿ ರೈತನ ಬಳಕೆಗೆ ಬೇರೆ ಯಾವುದಾದರೂ ಉರುವಲು ಸಿಗುವಂತೆ ಸಗಿ ಹಿಂದೀ ರೈತನ ಸ್ಥಿತಿಗತಿಯನ್ನು ಉತ್ತಮಗೊಳಿಸಲು ಬೇಕಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಮರಗಳನ್ನು ನೆಡುವುದನ್ನು ಪ್ರೋತ್ಸಾಹಿಸಬೇಕು, ಇಲ್ಲವೆ ಸಾಧ್ಯವಾದಲ್ಲಿ ಕಲ್ಲಿದ್ದಲು ಸಿಗುವಂತೆ ಮಾಡಬೇಕು.

'ಹೇಸಿಗೆ'ಯನ್ನು ಗದ್ದೆಗಳಲ್ಲಿ ಬಳಸಬಹುದೆಂದು ಸಲಹೆ ಮಾಡಲಾಗಿದೆ; ಅದರಿಂದ ಕೆಲಮಟ್ಟಿಗೆ ಪ್ರಯೋಜನ ಸಿಗಬಹುದು. ಆದರೆ ಜಗತ್ತಿನ ಎಲ್ಲ ವಿಭಾಗದ ರೈತನಿಗೂ ಅದನ್ನು ತಯಾರಿಸುವುದು ಸುಲಭದ ಕೆಲಸವಾಗದು; ಆದುದರಿಂದ ಅದರ ತಯಾರಿಕೆಯಲ್ಲಿ ರೈತರು ಅಷ್ಟು ಉತ್ಸುಕರಾಗಿಲ್ಲ. ಹಸಿ—ಒಣ ಎಲೆಗಳು, ಕಾಗದ, ಹುಲ್ಲು ಮುಂತಾದುವನ್ನು ಗದ್ದೆಗಳಲ್ಲಿ ಹರಡಿ ಸಾರಜನಕವನ್ನು ನೆಲೆನಿಲ್ಲಿಸುವ ನಮ್ಮ ಪ್ರಯೋಗಗಳಿಂದ ನಮಗೆ ಇಂತಹ ಸಸ್ಯಾವಶೇಷಗಳನ್ನು 'ಹೇಸಿಗೆ' ಹಾಕುವುದರ ಮೊದಲು ಬಳಸುವುದು ಯೋಗ್ಯವೆಂದು ಕಂಡುಬಂದಿದೆ. ಮಳೆಗಾಲದ ಮುನ್ನ ಈ ಸಸ್ಯಾವಶೇಷಗಳನ್ನು ಸೇರಿಸಿ ಉತ್ತರೆ ಮೂರು ತಿಂಗಳಲ್ಲಿ ತಕ್ಕ ಮಟ್ಟಿಗೆ ಅವು ಕೊಳೆತು ಅವುಗಳ ಕಾರ್ಬನ್ನು ಮಣ್ಣಿನ ಮೇಲೆ ಅಮ್ಲೀಕೃತವಾಗಿ ಸಾರಜನಕವನ್ನು ತಡೆಹಿಡಿಯಲಗತ್ಯವಾದ ಸತ್ವವವನ್ನು ಹೊರಗೆ ತೆಗೆಯುತ್ತದೆ. ಮಣ್ಣಿಗೆ ಸೇರಿಸಿದಾಗ ಈ ಸಸ್ಯಪದಾರ್ಥಗಳು ನೇರವಾಗಿ ತಮ್ಮಲ್ಲಿದ್ದ ಪೊಟಾಶ್ ಹಾಗೂ ಸಾರಜನಕವನ್ನು ಪುರವಣೆಮಾಡುವುದಲ್ಲದೆ ಮಣ್ಣಿನ ಮೇಲೆ ಕೆಲ ಪ್ರಮಾಣದಲ್ಲಿ ಸಾರಜನಕವನ್ನು ನಿಲ್ಲಿಸಿ ಅದನ್ನು ಹೆಚ್ಚು ಫಲವತ್ತಾಗಿ ಮಾಡಬಲ್ಲವು. ಆ ಪದಾರ್ಥಗಳು ಬಹಳ ಹೆಚ್ಚಾಗಿಲ್ಲದಿದ್ದರೆ ಹಾಕಿದ ಮೂರುತಿಂಗಳುಗಳಲ್ಲಿ ಅವು ತಕ್ಕ ಮಟ್ಟಿಗೆ ಕೊಳೆತು ಮಣ್ಣಿನ ಕಾರ್ಬನ್-ಸಾರಜನಕ ಪ್ರಮಾಣವು ಯೋಗ್ಯ ಪ್ರಮಾಣಕ್ಕೆ ಬರುತ್ತದೆ. ಸಸ್ಯಜಪಿಷ್ಟ, ಹೊಲಸು ಮತ್ತು ಸಾರಜನಕಗಳ ಅಂಶ ಹೆಚ್ಚಾಗುತ್ತದೆ. ಉತ್ತು ಮೇಲೆ ಬಂದ ಮಣ್ಣು, ತೇವವನ್ನು ಉಳಿಸಿಕೊಳ್ಳುವ ಶಕ್ತಿ ಮತ್ತು ಸಾರಜನಕ ಸಂಗ್ರಹಣ ಬಲ-ಇವು ಸುಧಾರಿಸುತ್ತವೆ. ಕೊಳೆಸುವುದರಲ್ಲಿ ಪದಾರ್ಥಗಳಲ್ಲಿಯ ಸಾರಜನಕವನ್ನು ಉಳಿಸುವುದು ಮತ್ತು ಆ ಕೊಳೆತ 'ಹೇಸಿಗೆ'ಯ ಕಾರ್ಬನಿನ ಜೊತೆಗೆ ಅದನ್ನು ಮಣ್ಣಿಗೆ ಸೇರಿಸುವದು—ಇದೇ ಮುಖ್ಯಗುರಿ. ನಮ್ಮ ಗೊಬ್ಬರ ಹಾಕುವ ಪದ್ಧತಿಯಲ್ಲಿ ಸಸ್ಯಪದಾರ್ಥಗಳು ಮಣ್ಣಿಗೆ ನೇರವಾಗಿ ಬಿದ್ದು ಮೂಲಪದಾರ್ಥಗಳಲ್ಲಿಯ ಸಾರಜನಕವು ಮಣ್ಣಿಗೆ ಸೇರುವಂತೆ ಮಾಡುವುದಲ್ಲದೆ ವಾತಾವರಣದ ಸಾರಜನಕದ ನಿಲುಗಡೆಯಿಂದ ಕೆಲ ಪ್ರಮಾಣದಲ್ಲಿ ಮಣ್ಣಿನಲ್ಲಿ ಸಾರಜನಕವೃದ್ಧಿಯುಂಟಾಗುತ್ತದೆ. ಆದುದರಿಂದ ಕೊಳೆಸದೆ ಹಾಗೇ ಸಸ್ಯಾವಶೇಷಗಳನ್ನು ಗದ್ದೆಗೆ ಹಾಕುವುದು ಉತ್ತಮವೆಂದಾಯಿತು; ಏಕೆಂದರೆ ಉಷ್ಣವಲಯದಲ್ಲಿ ಹೆಚ್ಚಿನ ಉಷ್ಣ ಮತ್ತು ಬಿಸಿಲು ಬೇಕಾದಷ್ಟು ದೊರಕು ಮತ್ತಷ್ಟು ಸಹಕಾರಿಯಾಗುವದು.

ಮಣ್ಣಿನ ಗುಣಗಳನ್ನು ಸುಧಾರಿಸಲು ಸಸ್ಯಜ ಹಾಗೂ ಪ್ರಾಣಿಜ ಪದಾರ್ಥಗಳನ್ನು ಬಿಟ್ಟರೆ ಬೇರೆಯ ಖನಿಜ ಪದಾರ್ಥಗಳು ಅಷ್ಟೇನೂ ಪ್ರಯೋಜನಕಾರಿಗಳೆನಿಸವು; ಅವಶ್ಯ ಬಿದ್ದಾಗ ಕೇವಲ ಹೆಚ್ಚು ಬೆಳೆಯನ್ನು ತೆಗೆಯಲು ಅವು ಸಹಕಾರಿಗಳಾಗಬಹುದೆಂದು ಹೇಳಬಹುದು. ಗಾಳಿಯಲ್ಲಿಯ ಸಾರಜನಕದಿಂದ ಸಾರಜನಕದ್ರಾವಕ ಮತ್ತು ಮಿಶ್ರ ಅಮೋನಿಯಗಳನ್ನು ಉತ್ಪಾದಿಸಲೆಂದು ನಿಲ್ಲಿಸಲಾದ ವಾತಾವರಣಜ ಸಾರಜನಕದ ಪ್ರಮಾಣದ ಮೇಲೆ ಒಂದು ದೇಶದ ನಾಗರಿಕತೆಯ ಮಟ್ಟವನ್ನು ನಿರ್ಣಯಿಸಬಹುದೆಂದರೆ ಅತಿಶಯೋಕ್ತಿಯಾಗಲಾರದು. ಗೊಬ್ಬರದ ತಯಾರಿಕೆಗೆ ಭಾರತವು ಕೆಲವು ಯಂತ್ರಗಳನ್ನು ತರಿಸಲಿದೆಯೆಂಬುದೊಂದು ಸಂತೋಷದ ಸಂಗತಿ. ಆದರೆ ನಮ್ಮ ನೆರೆಹೊರೆಯ ಚೀನ ಜಪಾನಗಳಂತಹ ದೇಶಗಳೊಡನೆ ಈ ಉದ್ಯಮದಲ್ಲಿ ಸ್ಪರ್ಧೆ ನಡೆಸಲು ಶಕ್ತರಾದಲ್ಲದೆ ಹಾಗೆ ಗೊಬ್ಬರದ ತಯಾರಿಕೆಗೆ ಹೊರಟರೆ ಕೆಲಕಾಲದ ಹಿಂದೆ ಬೆಲ್ಲದ ಸಕ್ಕರೆಯನ್ನು ತಯಾರಿಸಹೋಗಿ ನಷ್ಟ ಹೊಂದಿದಂತೆ ನಷ್ಟಹೊಂದಬೇಕಾದೀತೆಂಬುದನ್ನು ಸರಕಾರವು ಮರೆಯಲಾಗದು. ಬಿಹಾರದಲ್ಲಿ ಕಾರಖಾನೆಯನ್ನು ಸ್ಥಾಪಿಸಿ ೮೦೦ ಮೈಲು ದೂರದ ರಜಪುಟಾಣದಿಂದ ಕಚ್ಚಾ ಮಾಲುಗಳನ್ನು ತರಿಸುವುದು ಆರ್ಥಿಕ ದೃಷ್ಟಿಯಿಂದ ಲಾಭಕರವೆನಿಸದು.

ಹಿಂದುಸ್ತಾನದಲ್ಲಿ ತಯಾರಿಸಬಹುದಾದ ಗೊಬ್ಬರಗಳೆಂದರೆ ಮೂತ್ರಜ ಗೊಬ್ಬರ, ಅಮೋನಿಯಂ ನೈಟ್ರೇಟ್, ಅಮೋನಿಯಂ ಸಲ್ಫೇಟ್ ಮೊದಲಾದವು.

ಗದ್ದೆಗಳ ಕಾಯಕಲ್ಪಕ್ರಮ

ಬಂಜೆಭೂಮಿಯ ಮುಖ್ಯ ದೋಷಗಳು—

ಊಷರತೆ. ನಾವು ಕೆಟ್ಟ ಊಷರ ಪ್ರದೇಶಗಳ ಅನೇಕ ಉದಾಹರಣೆಗಳನ್ನು ನೋಡಿದ್ದೇವೆ. ಅವುಗಳಲ್ಲಿ ಊಷರತೆ (ಲವಣ ಮಿಶ್ರಣ) ಬಹಳ ಹೆಚ್ಚಿರುತ್ತದೆ. ಈ ನೆಲವನ್ನು ಉತ್ತಾಗ ಜಡತೆ ಇಲ್ಲವೆ ನೈಟ್ರೇಟ್ ನಿರ್ಮಾಪಕಗಳ ಅಂಶ ಕಂಡುಬಂದಿಲ್ಲ.

೨ ಸಾಮಾನ್ಯವರ್ಗದ ಮಣ್ಣಿಗಿಂತ ಬಂಜೆಭೂಮಿಯ ಮಣ್ಣಿನಲ್ಲಿ ಚೂರ್ಣಜಾಂಶ (ಸುಣ್ಣದ ಸತ್ವವುಳ್ಳ ಪದಾರ್ಥಗಳು) ಕಡಿಮೆಯಿರುತ್ತದೆ.

೩ ಸಾರಜನಕದ ಪ್ರಮಾಣ ಸ್ವಲ್ಪ. ಪರೀಕ್ಷೆ ಮಾಡಿದ ಮಣ್ಣಿನ ಮಾದರಿಗಳಲ್ಲಿ ನೂರಕ್ಕೆ ೦.೦೦೮ ರಿಂದ ೦.೦೨ ರಷ್ಟು ಸಾರಜನಕಾಂಶವಿತ್ತು. ಉಷ್ಣಮಯವಾದ ಸಾಮಾನ್ಯ ಮಣ್ಣಿನಲ್ಲಿ ಹೆಚ್ಚುಕಡಿಮೆ ೦.೦೫೩ ರಷ್ಟಿರುತ್ತದೆ.

೪ ಮಣ್ಣು (ನೀರಂಧ್ರವಾಗಿದ್ದು) ನೀರನ್ನು ಬೇಗ ಹೀರಿಕೊಳ್ಳಲಾರದು.

೫ ನೀರಿನಲ್ಲಿ ಸೇರಿಸಿ ಕದಡಿದಾಗ ಮಣ್ಣಿನ ಕಣಗಳು ಬೇಗ ತಳದಲ್ಲಿ ಹೋಗಿ ನಿಲ್ಲುವುದಿಲ್ಲ.

೬ ಅದರಲ್ಲಿ ಜೀವಾಣುಕ್ರಿಯೆ ನಡೆವುದಿಲ್ಲ.

ಕೇವಲ ಸಂಯುಕ್ತಪ್ರಾಂತ ಒಂದರಲ್ಲೇ ೪೦ ಲಕ್ಷ ಎಕರೆಗಳಷ್ಟು ಬಂಜೆಭೂಮಿಯಿದೆಯೆಂದು ಲೆಕ್ಕಮಾಡಲಾಗಿದೆ. ಪಂಜಾಬ (ಲಿಯಾಲಪುರ ಮಾಂಟಗೊಮರಿ ಮತ್ತು ಇತರ ಸ್ಥಳಗಳಲ್ಲಿ) ಬಿಹಾರ, ಮೈಸೂರು, ಸಿಂಧ, ಮುಂಬಯಿಗಳಲ್ಲಿ ಅಂತಹ ಅನುತ್ಪಾದಕ ಭೂಮಿಯನ್ನು ಪುನಃ ಸತ್ವಪೂರ್ಣವಾಗಿ ಮಾಡುವುದು (ಕಾಯಕಲ್ಪ) ಹಿಂದುಸ್ತಾನಕ್ಕೆ ಬಹುಮುಖ್ಯವಾದ ಸಮಸ್ಯೆಯಾಗಿದೆ. ಬೆಳೆಗೆ ಬಾಧಕವಾದ ಭೂಗತ ಲವಣಗಳೆಂದರೆ ಕಾರ್ಬೋನೇಟ್, ಬೈಕಾರ್ಬೋನೇಟ್ ಸಲ್ಫೇಟ್ ಮತ್ತು ತಿನ್ನುವ ಉಪ್ಪು ಇವೇ; ಬಂಜೆ ಭೂಮಿಯ ಅನುತ್ಪಾದಕತೆಗೆ ಮುಖ್ಯವಾಗಿ ಸೋಡಾಪುಡಿ (ಮಣ್ಣಿನಲ್ಲಿ ಅಂತರ್ಗತವಾಗಿರುವದೇ) ಕಾರಣ. ಅಂತಹ ಭೂಮಿ ಬಹಳ ಗಟ್ಟಿಯಾದ (ಭಾರವಾದ) ಮಣ್ಣಿನದು; ಅದಕ್ಕೆ ಹಾಳು ನೆಲವೆನ್ನುತ್ತಾರೆ. ಸಿಂಧ ಮತ್ತು ದೇಶದ ಇತರ ಭಾಗಗಳಲ್ಲಿ ಸಾಮಾನ್ಯ ಸ್ಥಿತಿಯಲ್ಲಿರುವ ಮಣ್ಣು ಕಾಲುವೆಯ ನೀರಿಂದ ಉಪ್ಪು ಮಣ್ಣಾಗಿ ಪರಿಣಮಿಸುತ್ತದೆ. ಅದಲ್ಲದೆ ಬಂಗಾಲ, ಓಡಿಸ್ಸ, ಗುಜರಾತ ಮುಂಬಯಿ ಮತ್ತು ಮದ್ರಾಸ ಪ್ರಾಂತಗಳಲ್ಲಿ ಸಮುದ್ರದ ನೀರಿನಿಂದ ಹಾಳಾದ ಭೂಪ್ರದೇಶ ಬಹಳವಾಗಿದೆ. ಮೇಲೆ ಹೇಳಿದ ವಿವಿಧ ಕಾರಣಗಳಿಂದ ಊಷರ ಭೂಮಿಯು ಹಿಂದುಸ್ತಾನದಲ್ಲಿ ಹೆಚ್ಚುತ್ತಿದೆ.

ಬೀಳ್ನೆಲದ ಸುಧಾರಣೆಯ ವಿಷಯದಲ್ಲಿ ಸಂಯುಕ್ತಪ್ರಾಂತದ ವಿವಿಧ ಭಾಗಗಳಲ್ಲಿ ಪ್ರಯೋಗ ನಡೆಸಿದ ದಿವಂಗತರಾದ ಡಾ. ಜೆ. ಡಬ್ಲ್ಯು. ಲೆದರರ ಸಿದ್ಧಾಂತಗಳು ಇಂತಿವೆ—

೧. ಊಷರ ಭೂಮಿಯಲ್ಲಿ ಸತ್ವಾರೋಪ ಮಾಡುವುದರಲ್ಲಿ ಜಯಪ್ರದವೆನಿಸಿದ ಒಂದೇ ಒಂದು ಪ್ರಯೋಗವೆಂದರೆ ಜಿಪ್ಸಂ ಪ್ರಯೋಗ—ಅದರ ಖರ್ಚು ಎಕರೆಗೆ ೭೦೦ ರಿಂದ ೮೦೦ ರೂಪಾಯಿಗಳಷ್ಟಾಯಿತು; ಆದುದರಿಂದ ಅದು ಕೈಬಿಟ್ಟಿರಿದ್ದೇ ಸರಿ. ಅದರ ಬೆಲೆಯನ್ನು ಅರ್ಧಕ್ಕೆ ಇಳಿಸಿದರೂ ಅಷ್ಟು ಪರಿಮಾಣದ ನೆಲಕ್ಕೆ ಜಿಪ್ಸಂ ಹಾಕುವುದು ಅತಿ ವೆಚ್ಚದ್ದಾಗಿಯೇ ಉಳಿಯುತ್ತದೆ.

೨. ಆಳವಾಗಿ ಉಳುವುದು ಮತ್ತು ಹೆಚ್ಚಾಗಿ ಗೊಬ್ಬರ ಹಾಕುವುದು ಇವುಗಳಿಂದ ನಮ್ಮ ಕಣ್ಣಿಗೆ ಏನೂ ಬದಲಾವಣೆಯಾದಂತೆ ತೋರಲಿಲ್ಲ. ಮೇಲ್ಮೈಯ ೧ ಅಡಿ ನೆಲ ನೋಡುವುದಕ್ಕೆ ಹದಕ್ಕೆ ಬಂತೆಂದು ತೋರಿದರೂ ಅದರ ಕೆಳಗಿನ ಮಣ್ಣು ಮೊದಲಿನಷ್ಟೇ ಕೆಟ್ಟದ್ದಾಗಿ ಉಳಿಯಿತು.

೩. ಉಪ್ಪನ್ನು ಕೆದರಿ ತೆಗೆಯುವುದು ಅಪ್ರಯೋಜಕವೇ ಸರಿ. ಇತ್ತೀಚಿಗೆ ಡಾ. ದಿಲೀಪ ಸಿಂಗ್ ಮತ್ತು ಶ್ರೀ ಎಸ್. ಡಿ. ನಿರ್ಧುವಾನರು ಲಿಯಾಲಪುರ, ಲಾಲಕಾತು, ಮಾಂಟಗೊಮರಿ ಮತ್ತು ಜೋರ ಪ್ರದೇಶಗಳಲ್ಲಿ ಜಿಪ್ಸಂ ಮತ್ತು ಉಪ್ಪನ್ನು ಸೇರಿಸಿ ಹಾಕಿ ಊಷರ ಕ್ಷೇತ್ರದ ಊಷರತೆಯನ್ನು ಕಡಿಮೆ ಮಾಡುವುದರಲ್ಲಿ ಕೆಲ ಮಟ್ಟಿಗೆ ಯಶಸ್ವಿಗಳಾಗಿದ್ದಾರೆ. ೪ ವರ್ಷಗಳಲ್ಲಿ ಈ ಚಿಕಿತ್ಸೆಯಿಂದ ಮಣ್ಣಿನ ಜಲಗ್ರಹಣಶಕ್ತಿ ವೃದ್ಧಿಯಾಗುತ್ತದೆಂದು ಅವರ ಹೇಳಿಕೆ. ಜಿಪ್ಸಂ ಇಲ್ಲವೆ ಗಂಧಕಡಪುಡಿ ಹಾಕಿದರೂ ಅಷ್ಟೇ ಕಾಲ ಬೇಕಾಗುತ್ತದೆ.

ಈ ಕಾರ್ಯಕ್ಕೆ ಸೆಗಣಿಯ ಗೊಬ್ಬರವನ್ನು ಉಪಯೋಗಿಸಬಹುದು. ಎಕರೆಗೆ ೧ ರಿಂದ ೧೦ ಟನ್ನುಗಳಂತೆ ಸೆಗಣಿಯ ಗೊಬ್ಬರ ಹಾಕಿ ಅಲಹಾಬಾದ ಮತ್ತು ಮೈಸೂರುಗಳಲ್ಲಿ ಬಂಜೆ ಭೂಮಿಯನ್ನು ಹದಕ್ಕೆ ತರಲಾಗಿದೆ. ಸಸ್ಯ ವಸ್ತುಗಳೇ ಬೆಳೆಯದ ಆ ಕ್ಷೇತ್ರಗಳಲ್ಲಿ ಒಳ್ಳೆಯ ಭತ್ತದ ಫಸಲನ್ನು ತೆಗೆಯಲಾಗಿದೆ. ಅಲಹಾಬಾದಿನ ಹತ್ತಿರ ಸೊರೆಯಾಗಿನಲ್ಲಿ ನಾವು ಎಕರೆಗೆ ೨ ರಿಂದ ೫ ಟನ್ನುಗಳ ವರೆಗೆ ಸೆಗಣಿಗೊಬ್ಬರ ಹಾಕಿ ನೋಡಿದ್ದೇವೆ. ಆ ಬಂಜೆ ಗದ್ದೆಯಲ್ಲಿ ಚೆನ್ನಾಗಿ ಅಕ್ಕಿ ಬೆಳೆಯಾಗಿದೆ. ಹಿಂದೆ ಬೆಳೆ ಬರದ ಗದ್ದೆಗಳಲ್ಲಿ ಮೈಸೂರು ಸರಕಾರವು ಎಕರೆಗೆ ೧ ಟನ್ನಿನಂತೆ ಸೆಗಣಿಗೊಬ್ಬರ ಹಾಕಿ ೧೨೦೦ ರಿಂದ ೧೮೦೦ ರತ್ತಲು ಅಕ್ಕಿಯ ಬೆಳೆಯನ್ನು ತೆಗೆದಿದೆ.

ಅಲಹಾಬಾದ, ಬೆಂಗಳೂರು, ಜಾವಾ, ಹವೈ ಮೊದಲಾದ ಸಕ್ಕರೆ ಉತ್ಪಾದನೆಯ ಕೇಂದ್ರಗಳಲ್ಲಿ ನಡೆದ ಸಂಶೋಧನದಿಂದ ಕಾರ್ಬಾನಿಕ್ ದ್ರಾವಕ ಮತ್ತು ಅಸೆಟಿಕ್, ಪ್ರೊಪಿಯೊನಿಕ್, ಬ್ಯುಟಿರಿಕ್, ಲ್ಯಾಕ್ಟಿಕ್, ಮುಂತಾದ ಅವಯವಿಜ ದ್ರಾವಕ (ಅಮ್ಲ)ಗಳ ಜೊತೆಗೆ ಸೆಗಣಿ ಗೊಬ್ಬರ ಹಾಕಿದರೆ ಅದು ವರ್ಷ ವರ್ಷಕ್ಕೆ ಕೊಳೆತು ಅದರಲ್ಲಿದ್ದ ಶರ್ಕರ ಪಿಷ್ಟ ಪದಾರ್ಥಗಳ ಅಮ್ಲೀಕರಣವನ್ನು ಮಾಡುತ್ತದೆಂದು ಕಂಡು ಬಂದಿದೆ. ಅದರ ಪರಿಣಾಮವಾಗಿ ಸೆಗಣಿಯಲ್ಲಿರುವ ದ್ರಾವಕ ಪದಾರ್ಥ ಮತ್ತು ಕೊಳೆತುದರಿಂದ ಹಾಗೂ ಪಾಕ್ಷಿಕ ಅಮ್ಲೀಕರಣದಿಂದ ಹುಟ್ಟಿದ ದ್ರಾವಕ ಪದಾರ್ಥ—ಎರಡೂ ಸೇರಿ ಬಂಜೆ ಭೂಮಿಯಲ್ಲಿಯ ಲವಣಾಂಶವನ್ನು ಹೊಡೆದು ಹಾಕಬಲ್ಲವು. ಅಷ್ಟಲ್ಲದೆ, ಶರ್ಕರ ಪಿಷ್ಟಪದಾರ್ಥಗಳು ಕೊಳೆಯುವುದರಿಂದ ಹಾಗೂ ಅಮ್ಲೀಕರಣ ವಾಗುವುದರಿಂದ ಉಂಟಾದ ಕಾರ್ಬಾನಿಕ್ ದ್ರಾವಕವು ಸೋಡಾ ಸತ್ವವನ್ನು ಸೋಡಿಯಂ ಬೈಕಾರ್ಬೋನೇಟಾಗಿ ಪರಿವರ್ತಿಸುತ್ತದೆ. ಮತ್ತು ಸೆಗಣಿ ಗೊಬ್ಬರಹಾಕಿದ ಮಣ್ಣಿಂದ ಕಾರ್ಬಾನಿಕ್ ದ್ರಾವಕವು ಹಾರಿಹೋಗುವಾಗ ಮಣ್ಣು ಸರಂಧ್ರವೂ ಉತ್ಕೃಷ್ಟವೂ ಆಗುತ್ತದೆ. ಅಲಹಾಬಾದಿನಲ್ಲಿಯ ಸಂಶೋಧನದಿಂದ ಸೆಗಣಿ ಗೊಬ್ಬರ ಹಾಕದ ಮಣ್ಣಿನಲ್ಲಿರುವ ತೇವಕ್ಕಿಂತ ಹಾಕಿದ ಮಣ್ಣಿನಲ್ಲಿ ಹೆಚ್ಚು ತೇವವಿರುವದೆಂದೇ ತಿಳಿದು ಬಂದಿದೆ. ಸೆಗಣಿಯ ಜೊತೆಗೆ ಹಾಕಿದ ಸುಣ್ಣವು ಅದರಿಂದ ಉತ್ಪನ್ನವಾದ ಅವಯವಿಜ ದ್ರಾವಕಗಳಿಂದ ಜೀರ್ಣವಾಗಿ ಪರಿಣಮಿಸಿ ಸೋಡಿಯಂ ಮಣ್ಣನ್ನು ಕ್ಯಾಲ್ಸಿಯಂ ಮಣ್ಣನ್ನಾಗಿ ಪರಿವರ್ತಿಸಲು ಸಹಾಯಕವಾಗುತ್ತದೆ. ಅಷ್ಟಲ್ಲದೆ, ಸೆಗಣಿಯಲ್ಲಿಯ ಅಲ್ಪ ಪ್ರಮಾಣದ ಗಂಧಕ ದ್ರಾವಕವು ಕ್ಯಾಲ್ಸಿಯಂ ಕಾರ್ಬೋನೇಟ್ ಇದ್ದ ಮಣ್ಣನ್ನು ಕ್ಯಾಲ್ಸಿಯಂ ಸಲ್ಫೇಟ ಆಗಿ ಪರಿವರ್ತಿಸುತ್ತದೆ; ಅದು ಲವಣಮಿಶ್ರ ಮಣ್ಣಿನ ಮೇಲೆ ಪ್ರತಿಕ್ರಿಯೆ ಮಾಡಿ ಅದನ್ನು ಸತ್ವಪೂರ್ಣವನ್ನಾಗಿ ಮಾಡಿ ಹದಕ್ಕೆ ತರುತ್ತದೆ. ಸಕ್ಕರೆ ಕಾರಖಾನೆಗಳಲ್ಲಿಯ ಶರ್ಕರ ಪಿಷ್ಟ ಪದಾರ್ಥ ಹಾಗೂ ಕ್ಯಾಲ್ಸಿಯಂ ಕಾಂಪೌಂಡ್ಸ [ಚೂರ್ಣಜಗಳು] ಇವುಗಳನ್ನೊಳಗೊಂಡ ಕಸುರು—ಮಣ್ಣು ಸಹ ಊಷರ ಭೂಮಿಯನ್ನು ಹದಕ್ಕೆ ತರುವುದರಲ್ಲಿ ಬಹಳ ಪ್ರಯೋಜನಕಾರಿಯಾಗುತ್ತದೆ. ಎಕರೆಯೊಂದಕ್ಕೆ ೧।೨ ಟನ್ ಹಿಂಡಿಯನ್ನು ಹಾಕುವುದರಿಂದ ಊಷರ ಕ್ಷೇತ್ರಗಳಲ್ಲಿ ಅಕ್ಕಿಯ ಬೆಳೆಗನುಕೂಲವಾಗುವಂತಹ ಹದಕ್ಕೆ ಮಣ್ಣನ್ನು ತರಲಾಗಿದೆ.

—ಡಾ. ಎನ್. ಆರ್. ಧಾರ್

[ಈ ಪ್ರಬಂಧದಲ್ಲಿ ಕೊಡಲಾಗಿರುವ ಸಲಹೆಗಳು ಗಮನಾರ್ಹವಾಗಿವೆ ಮತ್ತು ಆಚರಣಾರ್ಹವಾಗಿವೆ. ಸರಿಯಾಗಿ ಹದಮಾಡಿ ನಮ್ಮ ನೆಲದ ಮಣ್ಣನ್ನು ಬಳಸಿಕೊಂಡರೆ ಆಹಾರದ ಕೊರತೆಯ ಹೆದರಿಕೆಯನ್ನೆಲ್ಲ ದೂರಮಾಡಬಹುದೆಂಬುದರಲ್ಲಿ ನನಗೆ ಸಂದೇಹ ವಿಲ್ಲ.
—ಮೋ. ಕ. ಗಾಂಧಿ]

ಪ್ರಾಪಂಚಿಕ

ನಿನ್ನೆ ಸ್ಕಾಟಿಷ್ ಚರ್ಚ್ ಕಾಲೇಜಿನ ಮುಖ್ಯೋಪಾಧ್ಯಾಯರಾದ ರೆವರೆಂಡ್ ಕೆಲ್ಲಾಸರು ಗಾಂಧೀಜಿಯನ್ನು ನೋಡಲು ತಮ್ಮ ಕೆಲ ಸಹೋದ್ಯೋಗಿಗಳೊಡನೆ ಬಂದರು. ಚರ್ಚೆಗೆ ತೆಗೆದುಕೊಳ್ಳಲಾದ ಮುಖ್ಯ ಪ್ರಶ್ನೆಯೆಂದರೆ ವಿದ್ಯಾಭ್ಯಾಸ, ಧರ್ಮ ಮತ್ತು ಸರಕಾರ ಇವುಗಳ ಸಂಬಂಧ. ಸರಕಾರವು ನಿಃಸಂದೇಹವಾಗಿ ಪ್ರಾಪಂಚಿಕವಿರಬೇಕೆಂದು ಗಾಂಧೀಜಿಯ ಅಭಿಪ್ರಾಯ. ನಾಗರಿಕನು ರಾಜ್ಯದ ಕಾಯದೆಯನ್ನು ವಿಧೇಯನಾಗಿ ಪಾಲಿಸುವ ವರೆಗೆ ಅವನಿಗೆ ಯಾವ ಅಡ್ಡಿ ಆತಂಕಗಳಿಲ್ಲದೆ ತನ್ನ ಧರ್ಮವನ್ನು ಅನುಸರಿಸುವ ಹಕ್ಕಿರಬೇಕು. ಅಲ್ಲಿ ಧರ್ಮ ಪ್ರಸರಣದ 'ಮಿಶನರಿ' ಪ್ರಯತ್ನಗಳು ತಲೆ ಹಾಕಬಾರದು. ಆದರೆ ಪರರಾಡಳಿತದಲ್ಲಿ ಪಡೆದಂತೆ ಯಾವ ಧರ್ಮ ಪ್ರಸಾರಕ ಸಂಘವೂ ಈಗ ಸರಕಾರದ ಪ್ರೋತ್ಸಾಹವನ್ನು ಪಡೆಯಲಾರದು.

ಮುಖ್ಯೋಪಾಧ್ಯಾಯ ಕೆಲ್ಲಾಸರೊಡನೆ ಈ ವಿಷಯಗಳನ್ನು ಚರ್ಚಿಸುತ್ತಿದ್ದಾಗ, ನಾವು ಬ್ರಿಟಿಶರ ರಾಜಕೀಯ ವರಿಷ್ಠತೆಯನ್ನು ಕಿತ್ತೊಗೆದರೂ ಸಾಂಸ್ಕೃತಿಕ ಶ್ರೇಷ್ಠತೆಯನ್ನು ಇನ್ನೂ ಕಿತ್ತೆಸೆಯಲು ಶಕ್ತರಾಗಿಲ್ಲವೆಂದು ಗಾಂಧೀಜಿ ಹೇಳಿದರು. ಅವರು ತಮ್ಮ ಸಹಜ ರೀತಿಯಿಂದ,

"ನಾವು ಪರಪ್ರಭುತ್ವವನ್ನು ಕಡೆಗಂಡೆವು, ಆದರೆ ಅದೃಶ್ಯವಾದ ಪರಪ್ರಭಾವವನ್ನು ಕಡೆಗಾಣಿಸಿಲ್ಲ," ಎಂದರು. ತಮ್ಮ ಕನಸಿನ ನವಭಾರತವು ತನ್ನ ಸ್ವಾಭಾವಿಕ ಸನ್ನಿವೇಶಕ್ಕೊಪ್ಪುವಂತೆ ಹೊಸದೊಂದು ಬಾಳಿನ ಅಸ್ತಿವಾರವನ್ನು ಹಾಕಬೇಕೆಂದು ಅವರ ಅಪೇಕ್ಷೆ. ಜಗತ್ತಿನ ಎಲ್ಲ ರಾಜ್ಯಗಳಲ್ಲೂ ಇಂದು ಹಿಂಸೆಯು—ಹೇಳಿಕೊಳ್ಳಲಾದ ಆತ್ಮರಕ್ಷಣೆಗೆಂದೇ ಆಗಲಿ—ಜೀವನದ ಉತ್ತಮ ವಸ್ತುಗಳಿಗೆ ವಿರುದ್ಧವಾದ ಸ್ಥಾನವನ್ನು ಪಡೆದಿದೆ. "ಸಮಾಜದಲ್ಲಿರುವ ಅತ್ಯುತ್ತಮರ ಸಂಘಟನೆ"ಗಾಗಿ ನವಭಾರತವು ತನ್ನನ್ನು ಮುಡಿಪಿಡಬೇಕು; ಮತ್ತು ಇಂದು ಪುಂಡಾಟಿಕೆಗೆ ಕೊಡಲಾದ ಸ್ಥಾನವನ್ನು ಭ್ರಷ್ಟಗೊಳಿಸಿದರೆ ಮಾತ್ರ ಇದು ಸಾಧ್ಯವಾಗುತ್ತದೆ.

ಯುದ್ಧವನ್ನು ಬೆಳೆಸುವುದರಲ್ಲಿ ಮತ್ತು ಅಣುಬಾಂಬಿನಲ್ಲಿ ಸಂಶೋಧನಾಸಕ್ತರಾಗಿರೆಂದು ಸ್ವತಂತ್ರ ಹಿಂದುಸ್ತಾನ ಸರಕಾರವು ಹೇಳಿದರೆ ವಿಜ್ಞಾನಿಗಳೇನು ಮಾಡಬೇಕೆಂದು ಕೆಲ್ಲಾಸರ ಸಹಶಿಕ್ಷಕನು ಕೇಳಿದನು. ಗಾಂಧೀಜಿ ಆಗಿಂದಾಗ ಉತ್ತರವಿತ್ತರು,— 'ವಿಜ್ಞಾನಿಗಳು ಹೆಸರಿಗೆ ತಕ್ಕಂತಿದ್ದರೆ ಸಾಯುವ ವರೆಗೆ ಅದನ್ನು ಪ್ರತಿಭಟಿಸಬೇಕು."

—ಎನ್. ಕೆ. ಬೋಸ್.

(೭ನೇ ಪುಟದಿಂದ)

ಪಂಜಾಬಿಗೆ ನಾನು ಹೋಗದಿರುವುದಕ್ಕೆ ನಾನು ಅದನ್ನು ಅಲಕ್ಷಿಸಿರುವೆನೆಂದು ಹೇಳಲಾಗದೆಂದಿಷ್ಟೇ ನಾನು ಈ ಸಂಬಂಧದಲ್ಲಿ ಹೇಳಬಲ್ಲೆ. ಆದರೂ ಈ ಪ್ರಶ್ನೆ ಸಮಯೋಚಿತವಾಗಿದ್ದು ಒಮ್ಮೆಲ್ಲ ಹಲವು ಸಲ ಕೇಳಲ್ಪಟ್ಟಿದೆ. ಈ ಬಗ್ಗೆ ಅಂತರಾತ್ಮನ ಆದೇಶಬರಲಿಲ್ಲ ಮತ್ತು ನನ್ನ ಸಲಹೆಗಾರರೂ ನನಗೆ ಪ್ರೋತ್ಸಾಹನೆ ಕೊಡಲಿಲ್ಲ ಎಂಬದೇ ನನ್ನ ಉತ್ತರವಾಗಿದೆ.

ಪಾಟಣಾಗಾಡಿಯಲ್ಲಿ ಮೋ. ಕ. ಗಾಂಧಿ
೭—೮—೪೭

ದಿ. ಮಹಿಷಿ ಅಶ್ವತ್ಥರಾಯರ ಸ್ಮಾರಕ

ಕೊಡುಗೈಯಿಂದ ಸಹಾಯ ಮಾಡಿರಿ

ಲೇ— ಶ್ರೀ ಗೋ. ದಾ. ದೇಸಾಯಿ



ದಿ. ಮಹಿಷಿಯವರು

"ರಸವೆ ಜನನ ವಿರಸ ಮರಣ" ಎಂದು ಹಾಡಿ ಕನ್ನಡ ಕಾವ್ಯಸಾಮ್ರಾಜ್ಯದಲ್ಲಿ ಕೀರ್ತಿ ಪಡೆದ ಶ್ರೀಮಾನ್ ಬೇಂದ್ರೆ ದತ್ತಾತ್ರೇಯ ರಾಯರ ಊರಾದ ಶಿರಹಟ್ಟಿಯೇ ಶ್ರೀಮಾನ್ ಅಶ್ವತ್ಥರಾಯರನ್ನು ಹೆತ್ತು ಕರ್ನಾಟಕದಲ್ಲಿ ಕೀರ್ತಿಯನ್ನು ಗಳಿಸಿಕೊಂಡಿತು. ಅವರು ಪದವೀಧರರಾಗದಿದ್ದರೂ ತಮ್ಮ ವಕೀಲಿ ವೃತ್ತಿಯಲ್ಲಿ ಪಳಗಿದ ಕೈ ಎನಿಸಿಕೊಂಡು ಕೊನೆಗೆ ಸಾಂಗ್ಲಿ ಸಂಸ್ಥಾನದ ಪ್ರಥಮ ಲೋಕನಿಯುಕ್ತ ಮಂತ್ರಿಗಳಾಗಿ ನಮ್ಮನ್ನಗಲಿದರು. ಅವರು ತಮ್ಮ ತಾರುಣ್ಯದಲ್ಲಿಯೇ ಪತ್ನೀವಿಯೋಗಕ್ಕೆ ಗುರಿಯಾದರೂ ಪುನಃ ಅಕೆಮರೆವಿನ ಅರವತ್ತನ್ನು ಕಳೆದು ಎಪ್ಪತ್ತಾರನೆಯ ವರುಷದಲ್ಲಿ ಕಾಲಿಟ್ಟರೂ ವಿವಾಹಿತರಾಗಲಿಲ್ಲ. ಕಳೆದ ವರ್ಷ ಎಪ್ರಿಲ ಹನ್ನೊಂದನೆಯ ತಾರೀಖಿನ ದಿನ ಪ್ರಜಾಪರಿಷತ್ತಿಗಾಗಿ ಸಾಂಗ್ಲಿಗೆ ತೆರಳುತ್ತಿವಾಗ ಮೋಟಾರ ಅಫಘಾತಕ್ಕೆ ಈಡಾಗಿ ಅದರ ಕೆಳಭಾಗದಲ್ಲಿ ಬಿದ್ದರು. ಇಂತಹ ಸಮಯದಲ್ಲಿ ಇವರನ್ನು ಹೊರಕ್ಕೆಳೆದು ನೀರನ್ನು ಸಿಂಪಡಿಸುತ್ತಿರುವಾಗ "ಇನ್ನು ನನ್ನ ದೇಹಿದೆ, ನನಗೇನಾಗಬೇಕಾಗಿದೆ. ಮೊದಲು ಆ ಮೋಟಾರಿನ ಕೆಳಭಾಗದಲ್ಲಿ ಸಿಕ್ಕಿ ಬಿದ್ದ ಹೆಣ್ಣುಮಗಳನ್ನೂ, ಮತ್ತು ಹುಡುಗನನ್ನೂ ಎಳೆಯಿರಿ" ಎಂದು ಉಸಿರಿದರಂತೆ. ಅಂತಹ ಮರಣ ಸಮಯದಲ್ಲಿ ಕೂಡ ಇಂತಹ ಕರುಣದ ಮಾತುಗಳನ್ನಾಡಿದರು.

೧೯೩೫ ರಲ್ಲಿ ಶಿರಹಟ್ಟಿ ತಾಲೂಕಿನಲ್ಲಿ ಬಿದ್ದ ಬರಗಾಲದಲ್ಲಿ ತಾಲೂಕಿನ ಪ್ರತಿಯೊಬ್ಬ ಹಳ್ಳಿಗನ ಮನೆಗೂ ಪಾದಚಾರಿಯಾಗಿ ಹೋಗಿ ಅವರ ಕಷ್ಟನಷ್ಟಗಳನ್ನು ಕೇಳಿಕೊಂಡು ಅದರ ಅರಿವನ್ನು ಅವರ ಪ್ರಭುಗಳಾದ ಸಾಂಗ್ಲಿ ರಾಜಾಸಾಹೇಬರಿಗೆ ತಂದು ಕೊಟ್ಟುದಲ್ಲದೆ ಕರ್ನಾಟಕದ ತುಂಬಾ ಸಂಚರಿಸಿ ಧನ ಸಂಚಯವನ್ನು ಮಾಡಿ ಬರಗಾಲದಿಂದ ಸೋತವರಿಗೆ ಹಂಚಿದರು. ಇವರು ಲೋಕಮಾನ್ಯ ಟಿಳಕರ ಶಿಷ್ಯರು. ಅವರ ಕಡೆಯಲ್ಲಿ ಒಂದೆರಡು ವರ್ಷ ಅಧ್ಯಯನವನ್ನು ಮಾಡಿದ್ದರು. ಅಂತಲೇ ಅವರ ಜೀವನದಲ್ಲಿ ಉದಾತ್ತ ಧ್ಯೇಯವನ್ನಿಟ್ಟುಕೊಂಡು ಕಾರ್ಯರಂಗದಲ್ಲಿ ಧುಮುಕಿದರು. ಭಾವೀರಾಷ್ಟ್ರ ನಿರ್ಮಾಣ ಬುದ್ಧಿಯಿಂದ ಶಿಕ್ಷಕ ವೃತ್ತಿಯನ್ನು ಕೂಡ ಅವರು ಕೈಕೊಂಡರು. ಒಮ್ಮೆ ಸಾಂಗ್ಲಿಯ ರಾಜಾಸಾಹೇಬರು ೧೯೩೬ ರಲ್ಲಿ ಇಂಗ್ಲಂಡಿಗೆ ದುಂಡು ಮೇಜಿನ ಪರಿಷತ್ತಿಗಾಗಿ ತೆರಳಬೇಕಾದ ಸಮಯದಲ್ಲಿ ಸಂಸ್ಥಾನದ ಪ್ರಮುಖರನ್ನೆಲ್ಲ ಕಲೆ ಹಾಕಿದ್ದರಂತೆ. ಅದರಲ್ಲಿ ಅಶ್ವತ್ಥರಾಯರೂ ಒಬ್ಬರಿದ್ದರಂತೆ. ಅವರಿಗೆ ಅದರ ಬಗ್ಗೆ ವಿಚಾರ ಮಾಡಿದರೆ "ನೀವು ಇಂಗ್ಲಂಡಕ್ಕೆ ತೆರಳಿ ಬ್ರಿಟಿಶರಲ್ಲಿರುವ ಒಡತಿನ ಭಾವನೆಯನ್ನು ಕಲಿತು ಬರಬೇಡಿರಿ" ಎಂದು ಧೈರ್ಯವಾಗಿ ಹೇಳಿದರಂತೆ. ದಕ್ಷಿಣ ಸಂಸ್ಥಾನಗಳ ಬಗ್ಗೆ ಪಂಪೋತ್ಸವದ ಸಮಯದಲ್ಲಿ ಲಕ್ಷ್ಮೇಶ್ವರದಲ್ಲಿ ಕೂಡಿದ ಸಂಸ್ಥಾನಗಳ ಸಭೆಯಲ್ಲಿ ತಮ್ಮ ಸ್ವಾಗತಾಧ್ಯಕ್ಷ ಭಾಷಣದಿಂದ ಜನರನ್ನೆಲ್ಲ ಮುಗ್ಧಗೊಳಿಸಿದರು. ಇಂತಹ ಅನೇಕ ಸಭೆಗಳ ಅಧ್ಯಕ್ಷ ಪದವಿಯನ್ನು ಸ್ವೀಕರಿಸಿ ತಮ್ಮ ಸೇವೆಯನ್ನು ಅವರು ಜನರಿಗೆ ಸಲ್ಲಿಸುತ್ತಿದ್ದರು. ತಾವೂ ಜನರಿಗೆ ತಮ್ಮ ಉದಾತ್ತ ಸೇವೆಯನ್ನು ಸಲ್ಲಿಸುತ್ತಿದ್ದರಲ್ಲದೆ ಬೇರೆ ಜನರನ್ನು ಕೂಡ ಸಲ್ಲಿಸಲು ಹಚ್ಚುತ್ತಿದ್ದರು. ಇವರು ಮಂತ್ರಿಪದರ್ಯರಿರುವಾಗ ಅಲ್ಲಿಯ ರಾಜಾಸಾಹೇಬರ ಕಡೆಯಿಂದ ಕರ್ನಾಟಕ ಪರಿಷನ್ಮಂದಿರಕ್ಕೆ ೧೦೦೦ ರೂ. ದೇಣಗೆಯನ್ನು ಕೊಡಿಸಿದರು.

ಇವರು ಸರಳ ಜೀವಿಗಳು. ಪ್ರತಿ ಮಾನವನಿಗೂ ತಮ್ಮ ಆದರ್ಶಜೀವನದ ಬೆಳಕನ್ನು ತೋರಲು ಪ್ರಯತ್ನಿಸಿದರು. ಒಂದು ಸಲ ಮೈಸೂರು ಸಂಸ್ಥಾನದ "ಅಸೆಂಬ್ಲಿಗೆ" ಹೋಗಿದ್ದರಂತೆ. ಮಾಸ್ತಿ ವೆಂಕಟೇಶ ಅಯ್ಯಂಗಾರರು ಅದರ ಅಧ್ಯಕ್ಷ ಮಿರ್ಜಾ ಇಸ್ಮಾಯಿಲ್‌ರವರಿಗೆ ಇವರು ಸಾಂಗ್ಲಿಯ ಮಂತ್ರಿಗಳು ಎಂದು ಹೇಳಿದರಂತೆ. ಇದನ್ನು ಕೇಳಿ ಮಿರ್ಜಾರವರು ಇವರನ್ನು ಸ್ವಾಗತಿಸಿ ಊರನ್ನು ನೋಡಲು ಎಲ್ಲ ಅನುಕೂಲತೆಗಳನ್ನು ಮಾಡಿಕೊಟ್ಟರಂತೆ. ಇವರು ಊರನ್ನು ನೋಡುತ್ತ ಕೋಲಾರ ಪೇಟೆಗೆ ಬಂದಿದ್ದರಂತೆ. ಅಲ್ಲಿಯ ಮುಖ್ಯಾಧಿಕಾರಿಗಳಿಗೆ ಮಿರ್ಜಾರವರು ಚನ್ನಾಗಿ ವ್ಯವಸ್ಥೆ ಮಾಡಬೇಕೆಂದು ಫೋನಿನ ಮೂಲಕ ಮೊದಲೇ ತಿಳಿಸಿದ್ದರಂತೆ. ಆದರೆ ಆ ಅಧಿಕಾರಿಗಳು ಅಲ್ಲಿಯ ಪ್ಲಾಟ್‌ಫಾರ್ಮದಲ್ಲಿ ಎರಡು ಮೂರು ಸಲ ಇವರ ಮುಂದೆ ಹಾದು ಹೋದರೂ ಇವರನ್ನು ಗುರುತಿಸಲಿಲ್ಲವಂತೆ ಕೊನೆಗೆ ಅವರ ಜೊತೆಯಲ್ಲಿ ಇದ್ದ ಇಂದಿನ ಸಾಂಗ್ಲಿಯ ಲೋಕನಿಯುಕ್ತ ಮಂತ್ರಿಗಳಾದ ದೇಶಪಾಂಡೆ ಧೋಂಡಪ್ಪನವರು "This is the Minister of Sangli" ಎಂದು ಹೇಳಿದರಂತೆ "Is that so? ಎಂದು ಅವರು ಇವರ ಸರಳತೆಯನ್ನು ಕಂಡು ಆಶ್ಚರ್ಯಪಟ್ಟರಂತೆ. ಇದೇಕೆ, ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಶಿವಮೊಗ್ಗೆಗೆ ಹೋಗಿ ಮರಳಿ ಬರುತ್ತಿರುವಾಗ ಹರಿಹರ ನಿಲ್ದಾಣದಲ್ಲಿ ಒಂದು ಡಬ್ಬಿಯಿಂದ ಮತ್ತೊಂದು ಡಬ್ಬಿಗೆ ತಮ್ಮ ಹಾಸಿಗೆಚೀಲ ಮತ್ತು ಉಳಿದ ಸಾಮಾನುಗಳನ್ನು ತಾವೇ ಹೊತ್ತುಕೊಂಡು ಹೋಗಿ ಹಾಕಿದರಂತೆ.

ಇವರು ಅನೇಕ ದೇವಾಲಯಗಳನ್ನು ಕಟ್ಟಿಸಿದ್ದಾರೆ. ಅನೇಕ ದೇವಾಲಯಗಳ ಜೀರ್ಣೋದ್ಧಾರ ಮಾಡಿದರು. ಶಿರಹಟ್ಟಿಯಲ್ಲಿ ಇರುವ "ಲೋಕಮಾನ್ಯ ಧರ್ಮಾರ್ಥ ವಾಚನಾಲಯವು ಇವರ ತಪಸ್ಸಿನ ಫಲದಿಂದಲೇ ಇಷ್ಟೊಂದು ಊರ್ಜಿತ ಸ್ಥಿತಿಯನ್ನು ಹೊಂದಿತು. ಸಿರಿಯಾಳ ದಾಸನಂತೆ ಇವರೂ ಅನೇಕ ಬಡಜನರ ವಿವಾಹ ಉಪನಯನಗಳನ್ನು ಮಾಡಿಸಿದ್ದಾರೆ.

ಕಳೆದ ಮೇ ನಾಲ್ಕನೆಯ ತಾರೀಖಿನಲ್ಲಿ ಶಿರಹಟ್ಟಿಯ ಪ್ರಮುಖರೆಲ್ಲ ಒಡಗೂಡಿ ಇಂದಿನ ಸಾಂಗ್ಲಿಯ ಮುಖ್ಯಮಂತ್ರಿ ಕೋರಿಯವರ ಹಸ್ತದಿಂದ ಅವರ ಭಾವಚಿತ್ರದ ಅನಾವರಣ ಸಮಾರಂಭವನ್ನು ನೆರವೇರಿಸಿದರು. "ಗೆಳೆಯರ ಗುಂಪಿನ"ಲ್ಲಿಯೇ ಒಂದು ದಿನ ಅವರ ಜೀವನ ಸ್ಮೃತಿಗಳಬಗ್ಗೆ ಭಾಷಣಗಳು ಜರುಗಿದವು. ಅವರ ಜಾಜ್ವಲ್ಯಮಾನವಾದ ಜೀವನವನ್ನು ಪ್ರತಿಯೊಬ್ಬನೂ ಆದರ್ಶವಾಗಿಟ್ಟುಕೊಂಡು ಹೋಗಬೇಕು. ಅವರ ದುಃಖ ಸೂಚಕ ಸಭೆಯು ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ಕೂಡಿದಾಗ ಶ್ರೀಮಾನ್ ಮುದವೀಡು ಕೃಷ್ಣರಾಯರು ಅಶ್ವತ್ಥರಾಯರಿಗೆ ಮೂರುನೂರು ಪುಟಗಳಷ್ಟು ಗ್ರಂಥವನ್ನು ಬರೆದರೂ ಸಾಲದು ಎಂದು ಉದ್ಗಾರ ತೆಗೆದರಂತೆ. ಇವರ ಸ್ಮಾರಕಾರ್ಥವಾಗಿ ಶಿರಹಟ್ಟಿಯಲ್ಲಿ ಒಂದು ಕಟ್ಟಡವನ್ನು ಕಟ್ಟಬೇಕೆಂದು ಮಾಡಿದ್ದಾರೆ. ಇದಕ್ಕೋಸುಗ ಕರ್ನಾಟಕದ ಕನ್ನಡ ಅಭಿಮಾನಿಗಳು ತಮ್ಮ ಕೊಡಗೈಯಿಂದ ಸಹಾಯವನ್ನೀಯಬೇಕೆಂದು ಬಿನ್ನಹ. ಕರ್ನಾಟಕದಲ್ಲಿ ಪ್ರಸಿದ್ಧ ನಾಟಕ ಕಂಪನಿಯ ಮಾಲೀಕರಾದ ಶ್ರೀಮಾನ್ ವೆಂಕೋಬರಾಯರ ಹೆಸರನ್ನು ಕೇಳದ ಜನರೇ ಇಲ್ಲ; ಆದರೆ ಅವರೂರಾದ ಶಿರಹಟ್ಟಿಯಲ್ಲಿ ಅವರ ಕುರುಹು ಕೂಡ ಇಲ್ಲ. ಅದಕ್ಕೆ ಇನ್ನೊಂದು ಕೆಲವರುಷದಲ್ಲಿ ದಿವಂಗತ ಅಶ್ವತ್ಥರಾಯರದೂ ಹಾಗಾಗಬಾರದೆಂದು ಅದರ ಬಗ್ಗೆ ಕಟ್ಟಡವನ್ನು ಕಟ್ಟಲಿದ್ದಾರೆ. ಅವರು ತೆರಳಿದರೂ ಅವರ ಕೃತಿಗಳು ಎಂದಿಗೂ ತೆರಳಲಾರವು. ಅವರ ವಿಷಯಕ್ಕೆ ಎಷ್ಟು ಹೇಳಿದರೂ ಸ್ವಲ್ಪವೇ. ಅದರಲ್ಲೂ ನನ್ನಂತಹ ಅಜ್ಞಾನಿ ಹೇಳುವದೆಂದರೆ ಮಿಕ್ಕಿದ ಕೆಲಸ.

ಹಿಂದುಸ್ತಾನದಲ್ಲಿ ನವಮನ್ವಂತರದ ಪ್ರಾರಂಭ

(೪ ನೇ ಪುಟದಿಂದ)

ಜಿನ್ನಾರ ಆಶ್ವಾಸನ

ತಾ. ೧೫ ರ ಬೆಳಗ್ಗೆ ಆಕಾಶವಾಣಿಯಲ್ಲಿ ಭಾಷಣ ಮಾಡುತ್ತ ಪಾಕಿಸ್ತಾನದ ಗವರ್ನರ ಜನರಲ್ಲರಾದ ಕಾಯದೆ ಆಜಂ ಜಿನ್ನಾರು, "ಇಂದಿಗೆ ಮುಸ್ಲಿಮರ ಭವಿತವ್ಯವು ಪೂರ್ತಿಗೊಂಡಂತಾಯಿತು; ಅವರ ತ್ಯಾಗ ಬಲಿದಾನಗಳು ಸಫಲವಾದವು. ಪಾಕಿಸ್ತಾನವೆಂಬ ಹೊಸ ರಾಜ್ಯದ ಸ್ಥಾಪನೆಯಿಂದ ಬೇರೆ ಬೇರೆ ಜಾತಿ, ಮತಗಳಿಗೆ ಸೇರಿದ ಜನರು ಒಂದೆಡೆ ಸೇರಿ ಹೇಗೆ ಶಾಂತಿಯುತವಾಗಿ ಜೀವಿಸಬಹುದೆಂಬುದನ್ನು ಜಗತ್ತಿಗೆ ತೋರಿಸಿ ಕೊಟ್ಟಂತಾಗಿದೆ; ಎಲ್ಲರ ಉನ್ನತಿಗೆ ಎಲ್ಲರ ಒಮ್ಮತದಿಂದ ಹೇಗೆ ದುಡಿಯಬಹುದೆಂಬುದನ್ನು ನಿದರ್ಶನಕ್ಕೆ ತರಲು ಅನುವುದೊರೆತಂತಾಗಿದೆ. ಒಳಗೂ ಶಾಂತಿ, ಹೊರಗೂ ಶಾಂತಿ—ಎಂಬುದೇ ನಮ್ಮ ಗುರಿಯಾಗಿರಬೇಕು. ನಮ್ಮ ನೆರೆಯವರೊಡನೆಯೂ ಜಗತ್ತಿನೊಡನೆಯೂ ಸ್ನೇಹದಿಂದ ಇರುತ್ತೇವೆ. ಯಾರಮೇಲೂ ಏರಿಹೋಗುವ ಇಚ್ಛೆಯಿಲ್ಲ. ನಾವು ರಾಷ್ಟ್ರಸಂಘದ ತತ್ವಗಳನ್ನು ಅನುಸರಿಸಿ ಜಗತ್ತಿನ ಸುಖ ಶಾಂತಿಗಳಿಗಾಗಿ ದುಡಿಯುತ್ತೇವೆ. ಅಲ್ಪಸಂಖ್ಯಾಕರು ಎಲ್ಲಿಯವರೆಗೆ ರಾಷ್ಟ್ರನಿಷ್ಠೆಯಿಂದಿರುವರೋ ಅಲ್ಲಿಯ ವರೆಗೆ ಅವರಿಗೆ ಯಾವ ಭಯವೂ ಇಲ್ಲ. ನಾವು ಗೌರವಯುತವಾಗಿ ಬಾಳಬೇಕು; ಇತರರಿಗೂ ಹಾಗೆ ಬಾಳಗೊಡಬೇಕು—ಇದೇ ನಮ್ಮ ಧ್ಯೇಯ." ಎಂಬುದಾಗಿ ಹೇಳಿದರು.

ಲಿಯಾಖತರ ವಿವರಣ

ಅನಂತರ ಪಾಕಿಸ್ತಾನದ ಮುಖ್ಯಮಂತ್ರಿಗಳಾದ ಲಿಯಾಖತ ಅಲಿಖಾನರು ಪಾಕಿಸ್ತಾನ ಸರಕಾರದ ಧೋರಣವನ್ನು ಈ ಕೆಳಗಿನಂತೆ ಬಿತ್ತರಿಸಿದರು:—

ದೇವರ ದಯದಿಂದ ನಾನೂ ನನ್ನ ಸಹೋದ್ಯೋಗಿಗಳೂ ಇಂದು ಪಾಕಿಸ್ತಾನದ ಅಧಿಕಾರ ಸೂತ್ರವನ್ನು ವಹಿಸುತ್ತಿದ್ದೇವೆ. ನಮ್ಮ ದೇಶಕ್ಕಿಂದು ಸಾರ್ವಭೌಮ ಸ್ವಾತಂತ್ರ್ಯ ದೊರತಿದೆ. ಅಂತರಿಕ ಕ್ಷೇಮ, ದಕ್ಷ ಆಡಳಿತ, ಪ್ರತಿಯೊಬ್ಬ ಪ್ರಜೆಯ ರಾಷ್ಟ್ರನಿಷ್ಠೆ ಹಾಗೂ ಸಹಕಾರ ಇವುಗಳೇ ನಮ್ಮ ಧೋರಣದ ಅಸ್ತಿವಾರಗಳು. ಪಕ್ಷ ಧರ್ಮಗಳ ಭೇದವನ್ನು ಮರೆತು ಪ್ರತಿಯೊಬ್ಬನೂ ನಮಗೆ ನೆರವಾಗಬೇಕೆಂದು ಕೇಳಿಕೊಳ್ಳುತ್ತೇನೆ. ಪ್ರಗತಿಯ ನಿಕಷವೆಂದರೆ ಶಾಂತಿ ಮತ್ತು ಸುರಕ್ಷಿತತೆ. ವಿತ್ತಜೀವಿತಗಳ ಸುರಕ್ಷಿತತೆ, ಉದ್ಯೋಗ ಸ್ವಾತಂತ್ರ್ಯ. ಅರಾಜಕತೆಯ ನಿವಾರಣೆ ಇವೇ ನಮ್ಮ ಸರಕಾರದ ಗುರಿಗಳು. ಸಾಧ್ಯವಾದಷ್ಟು ಪಾಕಿಸ್ತಾನದ ಎಲ್ಲ ಪ್ರಾಂತಗಳನ್ನು ಸಮಾನ ರೀತಿಯಿಂದ ನಡೆಸಿಕೊಳ್ಳಲಾಗುತ್ತದೆ. ನಮಗರಿಮುಂತಾದವುಗಳಲ್ಲಿ ಸಿಂಧಿ, ಪಂಜಾಬ, ಬಲೂಚಿ, ಪಠಾನ್, ಬಂಗಾಲಿ ಯೆಂಬ ಭೇದವನ್ನು ಲೆಕ್ಕಿಸುವುದಿಲ್ಲ. ಎಲ್ಲರಿಗೂ ಸಮಾನಾವಕಾಶವನ್ನು ಕಲ್ಪಿಸಿಕೊಡಲಾಗುವುದು. ನಾನು ಹಿಂದುಸ್ತಾನದಲ್ಲಿರುವ ಮುಸ್ಲಿಮರನ್ನು ಮರೆತಿಲ್ಲ ಸ್ವಲ್ಪ ಕಾಲದಲ್ಲೇ ಪರಿಸ್ಥಿತಿ ಹಿಡಿತದಲ್ಲಿ ಬಂದು ಅದರ ದುಃಖನಿವಾರಣವಾಗುವುದೆಂದು ಆಶಿಸುತ್ತೇನೆ ಧನಿಕರು ಹೆಚ್ಚು ಧನಿಕರಾಗುವಂತೆಯೂ ದರಿದ್ರರು ಹೆಚ್ಚು ದರಿದ್ರ್ಯಕ್ಕೆ ಗೀಳಾಗುವಂತೆಯೂ ಆಗುವುದನ್ನು ತಪ್ಪಿಸಲು ಹೊಸದೊಂದು ಆರ್ಥಿಕ ಸಾಮ್ಯದ ಧೋರಣವನ್ನು ನಮ್ಮ ಸರಕಾರ ಅನುಸರಿಸಲಿದೆ. ನಮ್ಮ ಮುಂದಿರುವ ಕಾರ್ಯ ಕಠಿಣವಾದುದಾದರೂ ದೇವರ ದಯೆಯಿಂದ ಮತ್ತು ದೃಢಪ್ರತಿಜ್ಞೆಯಿಂದ ಜಯಶಾಲಿಗಳಾಗಬಲ್ಲೆವೆಂದು ನಂಬಿದ್ದೇನೆ."

ಹೈದರಾಬಾದಿನ ಹೇಳಿಕೆ

ಹಿಂದುಸ್ತಾನ ಘಟನಾ ಸಮಿತಿಯು ತಾ ೨೦ ರ ಬೆಳಗ್ಗೆ ಸೇರಿದಾಗ ಚರ್ಚೆಯ ಪ್ರಾರಂಭದಲ್ಲಿ ಶ್ರೀ ಆರ್. ಕೆ. ಸಿಧ್ವಾರು ಎದ್ದು ಹೈದರಾಬಾದಿನಲ್ಲಿ ರಾಷ್ಟ್ರಧ್ವಜಕ್ಕೆ ಅಪಮಾನವಾಗಿರುವುದರಿಂದ ಅದರ ವಿಚಾರಣೆಯಾಗಬೇಕೆಂದು ಸೂಚಿಸಿದರು. ಅದಕ್ಕೆ ಉತ್ತರವಾಗಿ ಪಂ. ಜವಾಹರರು— ಹೈದರಾಬಾದ ಸಂಸ್ಥಾನದಲ್ಲಿ ಹಿಂದೀ ರಾಷ್ಟ್ರಧ್ವಜಕ್ಕೆ ಅಪಮಾನವಾಗಿದೆಯೆಂದು, ಕೆಲವರ ಆರೋಪವಿದೆಯೆಂದೂ ತಾವು ಅದನ್ನು ವಿಚಾರಿಸಿದ್ದು ಹಾಗೆ ಅಪಮಾನ ಮಾಡಿಲ್ಲೆಂದೂ ರಾಷ್ಟ್ರಧ್ವಜವನ್ನು ಎಲ್ಲೆಡೆಯಲ್ಲಿಯೂ ಹಾರಿಸಲು ಅಪ್ಪಣೆ ಕೊಡಲಾಗಿದೆಯೆಂದೂ ಹೈದರಾಬಾದ ಸರಕಾರ ಸ್ಪಷ್ಟವಾಗಿ ತಿಳಿಸಿದೆ— ಎಂದರು.

ಗಡಿನಾಡ ಪಠಾಣರ ಸ್ವಾತಂತ್ರ್ಯ

ಯುಕ್ತರಾಷ್ಟ್ರ ಸಂಘದ ಅಫಗಾನಿಸ್ತಾನ ಸ್ಥಿರ ಶಿಷ್ಟಮಂಡಲದ ಸದಸ್ಯರಾದ ಸರದಾರ ಅಬ್ದುಲ್ ಹಮೀದ್‌ಖಾನ್ ಅಜೀಜರು ಅ. ಪ್ರ ಪ್ರತಿನಿಧಿಗಿತ್ತ ಸಂದರ್ಶನದಲ್ಲಿ— ಫಕ್ತೂನ ಜನಾಂಗದವರಾದ ಗಡಿನಾಡ ಪಠಾಣರು ಭಾಷೆ ಸಂಸ್ಕೃತಿಗಳಲ್ಲಿ ತಮ್ಮ ಬಾಂಧವರು; ಅವರಿಗೆ ಸ್ವಯಂನಿರ್ಣಯಾಧಿಕಾರವನ್ನಿಯ ಸ್ವಾತಂತ್ರ್ಯ ಸಾರಲು ಅವಕಾಶವಿರಬೇಕು— ಎಂದರು. ಮತ್ತೆ ಮುಂಬರಿದು— ಪಠಾಣರ ಹಿತ ಸಂಬಂಧವನ್ನು ನೋಡುವುದು ತಮ್ಮ ನೈತಿಕ ಕರ್ತವ್ಯವೆಂದೂ ಈ ಪ್ರಶ್ನೆಯನ್ನು ಪಾಕಿಸ್ತಾನ ಸರಕಾರವು ತಿಕ್ಕಾಟವಿಲ್ಲದೆ ಬಿಡಿಸಬಹುದೆಂದು ಆಶಿಸುವುದಾಗಿಯೂ— ಹೇಳಿದರು.

ಮುಂಬಯಿ

ಅಸ್ಟ್ರೇಲಿಯಕ್ಕೆ ತೆರಳಲಿರುವ ಭಾರತ ಕ್ರಿಕೆಟ ಸಂಘದ ಹನ್ನೆರಡು ಜನರು ತಾ. ೧೮ರಲ್ಲಿ ಪುಣೆಯಲ್ಲಿ ಸೇರಿದ್ದರು. ಇಲ್ಲಿಂದ ತೆರಳುವ ಮುನ್ನ ೩ ವಾರಗಳ ವರೆಗೆ ಗಣೇಶಖಿಂಡಿ ಸರಕಾರೀ ಭವನದ ಆಟದ ಬಯಲಿನಲ್ಲಿ ದಿನವೂ ಪಂದ್ಯಗಳನ್ನಾಡಿ ತಮ್ಮ ಕೈಪಳಗಿಸಿಕೊಳ್ಳಲಿದ್ದಾರೆ.

ಮುಂಬಯಿಯಲ್ಲಿ ಸ್ವಾತಂತ್ರ್ಯೋತ್ಸವ ನಿಮಿತ್ತ ಮೇಯರರು ಮಂತ್ರಿಗಳ ಗೌರವಾರ್ಥ ಸಂತೋಷಕೂಟವನ್ನು ಏರ್ಪಡಿಸಿದ್ದರು. ಸ್ವಾತಂತ್ರ್ಯೋತ್ಸವದಲ್ಲಿ ಭಾಗ ವಹಿಸಿದ ಒಂದು ವಿಮಾನ ಜುಹು ಸಮುದ್ರದಲ್ಲಿ ಮುರಿದು ಬಿದ್ದದ್ದರಿಂದ ವೈಮಾನಿಕ ಬೆಲಿಂಜರ ಹಾಗೂ ಮಿಸ್ ಥೆರೆಜಾ ಎಂಬವರು ಮೃತಪಟ್ಟರು.

ಸ್ವಾತಂತ್ರ್ಯೋತ್ಸವದ ನಿಮಿತ್ತ ಮುಂಬಯಿ ಸರಕಾರವು ಬಂಧಮುಕ್ತ ಮಾಡಿದ ಕೈದಿಗಳ ಸಂಖ್ಯೆ ಅತಿ ಕಡಿಮೆಯಾಗಿತ್ತೆಂದು ನಿರಾಶೆಯಾಗಿ ತಾ. ೧೫ ರಲ್ಲಿ ಯರವಡಾ ಜೈಲಿನಲ್ಲಿ ೧೦೦೦ ಕ್ಕೆ ಮೇಲ್ಪಟ್ಟು ಕೈದಿಗಳು ಊಟ ಮಾಡಲಿಲ್ಲ. ಮುಂಬಯಿ ಸರಕಾರವು ದಯೆದೋರಿ ಇನ್ನಷ್ಟು ಕೈದಿಗಳನ್ನು ಬಿಟ್ಟಿದ್ದರೆ ಒಳಿತಾಗುತ್ತಿತ್ತೆಂದು ಅವರ ಹೇಳಿಕೆಯಿದ್ದು ಅದರಂತೆ ಸರಕಾರಕ್ಕೆ ಮನವಿ ಕಳುಹಿರುವರೆಂದು ತೋರುತ್ತದೆ.

ತಾ. ೧೮ ರ ಮುಂಜಾವದಲ್ಲಿ ಸತಿ ಮೌಂಟ್ ಬ್ಯಾಟನ್ನರು ಮಳೆಕೋಳೆಗಳನ್ನು ಲೆಕ್ಕಿಸದೆ ೪ ತಾಸುಗಳ ವರೆಗೆ ಮುಂಬಯಿಯ ಬಡಬಗ್ಗರ ವಸತಿ ಪ್ರದೇಶಗಳಲ್ಲಿ ಸಂಚರಿಸಿದರು. ಜನರು "ಜಯ್ ಹಿಂದ್" ಎಂದು ಅವರನ್ನು ಸ್ವಾಗತಿಸಿದರು.

ಹಿಂದುಸ್ತಾನದಿಂದ ತಾ. ೧೭ ರಂದು ಬ್ರಿ. ಸೈನಿಕರ ಮೊದಲನೆಯ ತಂಡವು 'ಎಸ್. ಎಸ್. ಜಾರ್ಜಿಕ್' ಹಡಗಿನಿಂದ ನಿರ್ಗಮಿಸ ಹೊರಟಾಗ ಅವರನ್ನು ಬೀಳ್ಕೊಡಲು ಗವರ್ನರ್ ಜನರಲ್ ಮೌಂಟ್ ಬ್ಯಾಟನ್ನರೂ ಸುಪ್ರೀಂ ಕಮಾಂಡರ್ ಅಚಿನ್‌ಲೆಕ್ಕರೂ ಮುಂಬಯಿ ಗವರ್ನರರೂ ಅನೇಕ ಸೈನ್ಯಾಧಿಕಾರಿಗಳೂ ಮುಂಬಯಿಗೆ ಆಗಮಿಸಿದ್ದರು.

ಪಾಕಿಸ್ತಾನ

ಸಿಂಧ

ಕಾಯಿದೆ ಅಜಂ ಜಿನ್ನಾರ ಇನ್ನೊಬ್ಬ ಭಗಿನಿಯಾದ ಶ್ರೀಮತಿ ಮರಿಯಾಂ ಪೀರಭಾಯ್ ಇವರು ಕರಾಚಿಯ ಸ್ವಾತಂತ್ರ್ಯೋತ್ಸವದಲ್ಲಿ ಭಾಗವಹಿಸಲು ಮುಂಬಯಿಯಿಂದ ವಿಮಾನದಲ್ಲಿ ಬಂದಾಗ ಅವರನ್ನು ಸ್ವಾಗತಿಸಲು ಅವರ ಮಗನ ಹೊರತು ಮತ್ತಾರೂ ಬಾರದ್ದನ್ನೂ ಅವರನ್ನು ಕರೆದುಕೊಂಡು ಹೋಗಲು ಮೋಟಾರು ಕೂಡ ಇಲ್ಲದ್ದನ್ನೂ ನೋಡಿ ಅನೇಕರಿಗೆ ಆಶ್ಚರ್ಯವಾಯಿತು. ಅವರು ತಾತಾ ಬಸ್ಸಿನಲ್ಲಿ ಕಾರಲಟನ್ ಹೊಟೇಲಿಗೆ ಹೋದರು.

ಪಾಕಿಸ್ತಾನದ ಸ್ಥಾಪನೆಯಾದೊಡನೆ ಇಸ್ಲಾಮ ರಾಷ್ಟ್ರಗಳಲ್ಲಿ ಈ ಸಂಭ್ರಮದ ದಿನವು ವೈಶಿಷ್ಟ್ಯಪೂರ್ಣವಾಗಿದೆಯೆಂದು ಪಾಕಿಸ್ತಾನದ ಗವರ್ನರ ಜನರಲ್ಲರಾದ ಡಾ. ಜಿನ್ನಾರವರು ತಮ್ಮ ಈದುಲ್ ಫಿತರ ಸಂದೇಶದಲ್ಲಿ ಸಾರಿದರು.

ತಾ. ೧೭ ರಲ್ಲಿ ಪಾಕಿಸ್ತಾನದಲ್ಲಿ ಹಿಂದುಸ್ತಾನದ ಹೈಕಮೀಶನರಾಗಿರುವ ಶ್ರೀಪ್ರಕಾಶರು ತಮ್ಮ ಮೋಟಾರಿಗೆ ಹಚ್ಚಿದ್ದ ರಾಷ್ಟ್ರಧ್ವಜದ ಮೇಲೆ ಉಳಿ... ಕೆಲವರು ಕೈಯೆತ್ತಿದ್ದನ್ನು ಪ್ರತಿಭಟಿಸಿ ಯಥಾ ಸಂಗ್ರಹಪ್ರಕಾರ ನಿಯಮಿಸಲ್ಪಟ್ಟ ವಿದೇಶದ ಪ್ರತಿನಿಧಿಯು ತನ್ನ ದೇಶದ ಧ್ವಜವನ್ನು ಉಪಯೋಗಿಸುವನ್ನು ಇದು ರಾಯಭಾರಿತ್ವದ ರೂಢಿಯೆಂದು ಜನರಿಗೆ 'ಹೇಳಿಗೆ' ಹೇಳಬೇಕೆಂದು ಪಾಕಿಸ್ತಾನ ಸರಕಾರಕ್ಕೆ ತಿಳಿಸಿದ್ದಾರೆ.

ಸಿಂಧ ಪ್ರಾಂತಿಕ ಸರಕಾರವು ಪೂರ್ವ ಬಂಗಾಲಕ್ಕೆ ೭ ಸಾವಿರ ಟನ್ ಗೋದಿಯನ್ನು ಕಳುಹಿಸಲಿದೆ. ಅಕ್ಕಿಯನ್ನು ತಕ್ಕಮಟ್ಟಿಗೆ ಕಳುಹಲಾಗುವುದೆಂದು ತಿಳಿಯುತ್ತದೆ.

ಪಾಕಿಸ್ತಾನ ಜನ್ಮೋತ್ಸವದ ನಿಮಿತ್ತ ಒಂದು ವಾರದವರೆಗೆ ನಡೆದ ಹಬ್ಬ ತಾ. ೧೯ಕ್ಕೆ ಮುಕ್ತಾಯವಾಗಿದ್ದು ಅಂದಿನಿಂದ ಎಲ್ಲ ಕಚೇರಿಗಳೂ ಪ್ರಾರಂಭಿಸಲ್ಪಟ್ಟವು.

ಪಾಕಿಸ್ತಾನದ ಮುಖ್ಯ ಮಂತ್ರಿಗಳಾದ ಲಿಯಾಖತ ಅಲಿಖಾನರು ಗವರ್ನರ ಜನರಲ್ ಜಿನ್ನಾರನ್ನು ಕಂಡು ಪಂಜಾಬ ಜಾತೀಯ ದಂಗೆಯ ಪರಿಸ್ಥಿತಿ ಹಾಗೂ ತಾವು ಪಂ. ಜವಾಹರರೊಡನೆ ಚರ್ಚಿಸಿದ ವಿಷಯವನ್ನು ಕುರಿತು ಸಮಯ ಮಾತುಕತೆ ನಡೆಸಿದರು.



ಮದ್ರಾಸ

ಪಾನನಿರೋಧ ಸಂಬಂಧದಲ್ಲಿ ಸೆರೆಯಲ್ಲಿಡಲಾದ ಸುಮಾರು ೩೪೦ ಗಂಡಸರೂ ೧೫೦ ಹೆಂಗಸರೂ ವೆಲ್ಲೂರ ಸೆಂಟ್ರಲ್ ಜೈಲಿನಿಂದ ಬಿಡಲ್ಪಟ್ಟರು.

ತಾ. ೧೫ರ ಸಂಜೆ ಮದ್ರಾಸಿನ ಕಾಸ್ಮೊಪಾಲಿಟನ್ ಕ್ಲಬ್ಬಿನಲ್ಲಿ ಪಂ. ಜವಾಹರರ ಭಾವಚಿತ್ರದ ಅನಾವರಣೋತ್ಸವವನ್ನು ನೆರವೇರಿಸುತ್ತ ಆಂಧ್ರ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಸಿ. ರಾಮಲಿಂಗ ರೆಡ್ಡಿಯವರು ಪಂಡಿತರ ಬುದ್ಧಿಮತ್ತೆ, ವ್ಯಕ್ತಿತ್ವ, ಜನಸೇವೆ ಇವುಗಳನ್ನು ಬಹಳ ಕೊಂಡಾಡಿದರು.

ಮದ್ರಾಸಿನ ಬಾಡಿಗಾರ್ಡ ರೋಡಿನಲ್ಲಿ ಬಸ್ಸಿಗೆ ಸಿಕ್ಕಿ ಒಬ್ಬನೂ ಪೊನಾಮಲಿ ಹೈಸ್ಕೂಲು ರೋಡಿನಲ್ಲಿ ಮೋಟಾರು ಬೈಸಿಕಲ್ಲುಗಾಡಿಯೊಂದಕ್ಕೆ ಡಿಕ್ಕಿಹೊಡೆದು ಒಬ್ಬನೂ ತಾ ೧೬ ರಂದು ಮೃತರಾದರು.

ಕೊಯಮುತ್ತೂರಿನಲ್ಲಿ ಯೂನಿಯನ್ ಹೈಸ್ಕೂಲಿನಲ್ಲಿ ಸ್ವಾತಂತ್ರ್ಯೋತ್ಸವದ ನಿಮಿತ್ತ ತಾ. ೧೫ರಂದು ಆಟಗಳ ಪಂದ್ಯ ಮುಂತಾದುವು ನಡೆದು ಮುಖ್ಯೋಪಾಧ್ಯಾಯರಾದ ಶ್ರೀ ಎಂ. ಜೆ ಸಾರಗುಣಂರವರ ಅಧ್ಯಕ್ಷತೆಯಲ್ಲಿ ಶ್ರೀಮತಿ ಸಾರಗುಣಂರವರು ಬಹುಮಾನವಿತರಣ ಮಾಡಿದರು.

ಸ್ವಾತಂತ್ರ್ಯಗಳಿಸಿ ಹಿಂದುಸ್ತಾನವಿಂದು ಏಶಿಯದ ಮುಖಂಡತನವಹಿಸಲಿದೆಯೆಂದು ಹೇಳಿ ಉದಯಪುರ ಸಂಸ್ಥಾನದ ನಿಯೋಜಿತ ದಿವಾನರಾದ ಶ್ರೀ ಎಸ್. ವಿ. ರಾಮಮೂರ್ತಿಯವರು ಮದ್ರಾಸ ಮೌಂಟರೋಡಿನಲ್ಲಿರುವ ಶುಭೋದಯ ಭವನದ ಮೇಲೆ ರಾಷ್ಟ್ರಧ್ವಜವನ್ನು ಏರಿಸಿದರು.

ಇನ್ನೂರಕ್ಕಿಂತ ಹೆಚ್ಚು ಮಧುರೆಯ ಗಿರಣಿ ಕೂಲಿಕಾರರ ಪ್ರತಿನಿಧಿಗಳು ಶ್ರೀ ವಿ. ಕೆ. ಷಣ್ಮುಗಂರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ರಾಷ್ಟ್ರೀಯ ಗಿರಣಿ ಕೂಲಿಕಾರರ ಸಂಘವೆಂಬ ಮಧುರೆಯ ಕೂಲಿಕಾರರಿಗೆಲ್ಲರಿಗೂ ಸಾಧಾರಣವಾದ ಒಂದು ಟ್ರೇಡ್ ಯೂನಿಯನ್ ಸ್ಥಾಪಿಸಬೇಕೆಂದು ನಿರ್ಣಯಿಸಿದರು.

ಪಶ್ಚಿಮ ಬಂಗಾಲ

ಸೀಮಾ ನಿರ್ಣಯ ಸಮಿತಿಯ ನಿರ್ಣಯದಿಂದ ತೃಪ್ತರಾಗಿ ಸ್ವಾತಂತ್ರ್ಯದಿನೋತ್ಸವದಿಂದ ಜನ್ಮವೆತ್ತಿದ ಶಾಂತಿ ಮತ್ತು ಸ್ನೇಹಮಯ ವಾತಾವರಣವನ್ನು ಕಾಯಿರೆಂದು ಪೂರ್ವ ಮತ್ತು ಪಶ್ಚಿಮ ಬಂಗಾಲಗಳ ಮುಖ್ಯ ಮಂತ್ರಿಗಳಾದ ನಾಜಿಮುದ್ದೀನ ಮತ್ತು ಡಾ. ಘೋಷರು ಹೊಸಗಡಿಯ ಎರಡೂ ಭಾಗದ ಜನರಿಗೆ ಬಿನ್ನವಿಸಿಕೊಂಡಿದ್ದಾರೆ.

ಬ್ರಿಟಿಶ ಕಾಮನವೆಲ್ತಿನ ಮಂತ್ರಿಗಳಾದ ಲಾರ್ಡ ಅಡಿಸನ್ನರು ಇನ್ನೊಬ್ಬ ಮಂತ್ರಿಗಳಾದ ಮೆಕನೀಲರನ್ನೊಳಗೊಂಡು ಕ್ಯಾನಬೆರಾದಲ್ಲಿ ಇದೇ ೨೬ ಕ್ಕೆ ಸೇರಲಿರುವ ಬ್ರಿಟಿಶ ಸಾಮಂತ ಸರಕಾರಗಳ ಪರಿಷತ್ತಿಗೆ ತಾ. ೧೮ ರಲ್ಲಿ ತೆರಳಿದರು. ಅಂದು ಮಧ್ಯಾಹ್ನ ಕಲಕತ್ತೆಯಲ್ಲಿಳಿದು ಪಶ್ಚಿಮ ಬಂಗಾಲದ ಗವರ್ನರರಾದ ಶ್ರೀ ರಾಜಗೋಪಾಲಾಚಾರ್ಯರಿಗೆ ಭೆಟ್ಟಿಯಿತ್ತು ಮಾತುಕತೆಯಾಡಿದರು.

ಹಿಂದು ಮುಸ್ಲಿಮರು ಒಂದುಗೂಡಿರುವುದನ್ನು ಕಂಡರೆ ಸ್ವಾತಂತ್ರ್ಯದಿನವು ಎಂತಹ ಅದ್ಭುತ ಚಮತ್ಕಾರವನ್ನು ಸಾಧಿಸಿದೆಯೆಂಬುದನ್ನು ನಾವು ಕಾಣಬಹುದೆಂದು ತಾ. ೧೭ ರಲ್ಲಿ ಕಲಕತ್ತೆಯ ಸಾರ್ವಜನಿಕ ಸಭೆಯೊಂದರಲ್ಲಿ ಗವರ್ನರರಾದ ಶ್ರೀ ರಾಜಗೋಪಾಲಾಚಾರ್ಯರು ಹೇಳಿದರು.

ಪೂರ್ವ ಪಂಜಾಬ

ಮಾಸ್ಟರ್ ತಾರಾಸಿಂಗರು ಪತ್ರಿಕಾ ಪ್ರತಿನಿಧಿಗೆ ಅಮೃತಸರದಲ್ಲಿ ಇತ್ತ ಸಂದರ್ಶನದಲ್ಲಿ ಗಡಿ ನಿರ್ಣಯ ಸಮಿತಿಯವರು ಕೊಟ್ಟ ನಿರ್ಣಯವು ಸೀಖರಿಗೆ ಅಸಮಾಧಾನಕರವೂ ಅಪಾಯಕರವೂ ಆಗಿದೆಯೆಂದು ಅಭಿಪ್ರಾಯಪಟ್ಟರು.

ಕ್ರಾಂತಿಕಾರ ಸರದಾರ ಅಜಿತಸಿಂಗರು ಹೃದಯಸ್ತಂಭನದಿಂದ ಮರಣ ಹೊಂದಿದರು.

...ಊಷರ ಭೂಮಿಯಲ್ಲಿ ಸಸ್ಯಾರೋಪವುದರಲ್ಲಿ ಜಯಪ್ರದವೆನಿಸಿದ ಒಂದೇ ಪ್ರಯೋಗವೆಂದರೆ ಜಿಪ್ಸಂ ಪ್ರಯೋಗ– ಖರ್ಚು ಎಕರೆಗೆ ೭೦೦ ರಿಂದ ೮೦೦ ...ಯಿಗಳಷ್ಟಾಯಿತು; ಆದುದರಿಂದ ಅದು ...ರಿದ್ದೀ ಸರಿ. ಅದರ ಬೆಲೆಯನ್ನು ಅರ್ಧಕ್ಕೆ ...ರೂ ಅಷ್ಟು ಪರಿಮಾಣದ ನೆಲಕ್ಕೆ ಜಿಪ್ಸಂ ...ವುದು ಅತಿ ವೆಚ್ಚದ್ದಾಗಿಯೇ ಉಳಿಯು...

...ಆಳವಾಗಿ ಉಳುವುದು ಮತ್ತು ಹೆಚ್ಚಾಗಿ ...ರ ಹಾಕುವುದು ಇವುಗಳಿಂದ ನಮ್ಮ ...ಏನೂ ಬದಲಾವಣೆಯಾದಂತೆ ತೋರ... ಮೇಲ್ಮೈಯ ೧ ಅಡಿ ನೆಲ ನೋಡುವು... ...ಹದಕ್ಕೆ ಬಂತೆಂದು ತೋರಿದರೂ ಅದರ ...ನ ಮಣ್ಣು ಮೊದಲಿನಷ್ಟೇ ಕೆಟ್ಟದ್ದಾಗಿ ಉಳಿ...

...ಉಪ್ಪನ್ನು ಕೆದರಿ ತೆಗೆಯುವುದು ಅಪ್ರ...ಜಕವೇ ಸರಿ. ಇತ್ತೀಚಿಗೆ ಡಾ. ದಿಲೀಪ ...ಮತ್ತು ಶ್ರೀ ಎಸ್. ಡಿ. ನಿರ್ಘುವಾನರು ...ಲಪುರ, ಲಾಲಕಾಕು, ಮಾಂಟಗೊಮರಿ ...ಬೋರ ಪ್ರದೇಶಗಳಲ್ಲಿ ಜಿಪ್ಸಂ ಮತ್ತು ...ನ್ನು ಸೇರಿಸಿ ಹಾಕಿ ಊಷರ ಕ್ಷೇತ್ರದ ...ರತೆಯನ್ನು ಕಡಿಮೆ ಮಾಡುವುದರಲ್ಲಿ ಕೆಲ...ಗೆ ಯಶಸ್ವಿಗಳಾಗಿದ್ದಾರೆ. ೪ ವರ್ಷಗಳಲ್ಲಿ ...ಕಿತ್ಸೆಯಿಂದ ಮಣ್ಣಿನ ಜಲಗ್ರಹಣಶಕ್ತಿ ...ಯಾಗುತ್ತದೆಂದು ಅವರ ಹೇಳಿಕೆ. ಜಿಪ್ಸಂ ...ಗಂಧಕದಪುಡಿ ಹಾಕಿದರೂ ಅಷ್ಟೇ ಕಾಲ...ಗುತ್ತದೆ.

ಕಾರ್ಯಕ್ಕೆ ಸೆಗಣಿಯ ಗೊಬ್ಬರವನ್ನು ...ನೋಗಿಸಬಹುದು. ಎಕರೆಗೆ ೧ ರಿಂದ ...ನ್ನುಗಳಂತೆ ಸೆಗಣಿಯ ಗೊಬ್ಬರ ಹಾಕಿ ...ಬಾದ ಮತ್ತು ಮೈಸೂರುಗಳಲ್ಲಿ ಬಂಜೆ ...ಯನ್ನು ಹದಕ್ಕೆ ತರಲಾಗಿದ. ಸಸ್ಯ...ಗಳೇ ಬೆಳೆಯದ ಆ ಕ್ಷೇತ್ರಗಳಲ್ಲಿ ಒಳ್ಳೆಯ ...ಫಸಲನ್ನು ತೆಗೆಯಲಾಗಿದೆ. ಅಲಹಾ...ನ ಹತ್ತಿರ ಸೊರೆಯಾಗಿನಲ್ಲಿ ನಾವು ಎಕರೆಗೆ ...ದ ೫ ಟನ್ನುಗಳ ವರೆಗೆ ಸೆಗಣಿ ಗೊಬ್ಬರ ...ನೋಡಿದ್ದೇವೆ. ಆ ಬಂಜೆ ಗದ್ದೆಯಲ್ಲಿ ...ಗಿ ಅಕ್ಕಿ ಬೆಳೆಯಾಗಿದೆ. ಹಿಂದೆ ಬೆಳೆ ...ಗದ್ದೆಗಳಲ್ಲಿ ಮೈಸೂರು ಸರಕಾರವು ಎಕ...ಟನ್ನಿನಂತೆ ಸೆಗಣಿಗೊಬ್ಬರ ಹಾಕಿ ೧೨೦೦ ...೧೮೦೦ ರತ್ತಲು ಅಕ್ಕಿಯ ಬೆಳೆಯನ್ನು...

...ಲಹಾಬಾದ, ಬೆಂಗಳೂರು, ಜಾವಾ, ಹವ್ವೈ...ಲಾದ ಸಕ್ಕರೆ ಉತ್ಪಾದನೆಯ ಕೇಂದ್ರ...ನಡೆದ ಸಂಶೋಧನದಿಂದ ಕಾರ್ಬಾನಿಕ್ ...ಕ ಮತ್ತು ಅಸೆಟಿಕ್, ಪ್ರೊಪಿಯೊನಿಕ್, ...ಟಿರಿಕ್, ಲ್ಯಾಕ್ಟಿಕ್, ಮುಂತಾದ ಅವಯ... ದ್ರಾವಕ (ಅಮ್ಲ)ಗಳ ಜೊತೆಗೆ ಸೆಗಣಿ...ಬ್ಬರ ಹಾಕಿದರೆ ಅದು ವರ್ಷ ವರ್ಷಕ್ಕೆ ಒಂದು ಪ್ರತಿಕೂಲ ...ಪದಾರ್ಥಗಳೇಳದಂತೆ ಉಪಾಯಗಳನ್ನು ಯೋಜಿಸಲಾಗುತ್ತದೆಯೆಂದು ಸಾರಿದ್ದಾರೆ. ತಾ ೧೮ರಲ್ಲಿ ಅವರೆಲ್ಲಿಳಿಸಿದರೆ ...ಸಭೆ ಅಂಬಾಲದಲ್ಲಿ ನಡೆಯಿತು.

ಪೂರ್ವ–ಪಶ್ಚಿಮ ಪಂಜಾಬುಗಳ ಮಂತ್ರಿಗಳು ಶಾಂತಿಯನ್ನು ಕಾಪಾಡಲು ನಿಶ್ಚಯಿಸಿದ್ದು ಆ ಕಾರ್ಯದಲ್ಲಿ ಕಾಲಹರಣ ವಾಗದಂತೆ ನೋಡಿಕೊಳ್ಳುವುದಾಗಿ ಒಂದು ಸಂಯುಕ್ತ ಪ್ರಕಟಣೆ ಹೊರಡಿಸಿದ್ದಾರೆ.

ಹಿಂದುಸ್ತಾನದಲ್ಲಿಯ ಡಚ್ ರಾಯಭಾರಿಗಳಾದ ವಿ. ಆರ್ನಾಲ್ಡ್ ಲ್ಯಾಪಿಂಗರು ಆ. ಭಾಷಣ ಆಕಾಶವಾಣಿಯಿಂದ ಮಾತಾಡುತ್ತ ಹಿಂದುಸ್ತಾನ ಮತ್ತು ಡಚ್ಚರ ನಡುವೆ ಸೌಹಾರ್ದ ಸ್ಥಾಪನೆಯ ಸಲುವಾಗಿ ಶಕ್ಯವಿದ್ದಷ್ಟು ತಾವು ಪ್ರಯತ್ನ ಮಾಡುವುದಾಗಿ ಹೇಳಿದರು. ಇದಲ್ಲದೆ ಜಗತ್ತಿನ ಅನೇಕ ಭಾಗಗಳನ್ನು ಒಂದು ಗೂಡಿಸುವ ಪ್ರಯತ್ನದಲ್ಲಿ ಹಿಂದುಸ್ತಾನವು ಮುಖ್ಯಭಾಗವಹಿಸಬೇಕಾಗುವುದೆಂದು ಅಭಿಪ್ರಾಯಪಟ್ಟರು.

ಕೆನಡಾದ ಎಲ್ಲ ವೃತ್ತಪತ್ರಗಳೂ ಹಿಂದುಸ್ತಾನ ಸ್ವಾತಂತ್ರ್ಯದ ಬಗ್ಗೆ ಅಗ್ರಲೇಖಗಳನ್ನು ಬರೆದಿವೆಯೆಂದೂ ಹಿಂದುಸ್ತಾನದ ಸ್ವಾತಂತ್ರ್ಯವನ್ನು ಸ್ವಾಗತಿಸಿದ್ದಲ್ಲದೆ ಸಹಕಾರದ ಆಶ್ವಾಸನೆ ಕೊಟ್ಟಿವೆಯೆಂದೂ ತಿಳಿಯುತ್ತದೆ.

ತಿರುವಾಂಕೂರು ಸಂಸ್ಥಾನದ ದಿವಾನರಾಗಿದ್ದ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರರು ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟಿದ್ದು ಅದನ್ನು ತಿರುವಾಂಕೂರು ಮಹಾರಾಜರು ಸ್ವೀಕರಿಸಿದ್ದಾರೆ.

ತಾ ೧೬ ರಲ್ಲಿ ಅಮೃತಸರ ಜಿಲ್ಲಾ ಣದಲ್ಲಿ ಪ್ರಕ್ಷುಬ್ಧ ಪರಿಸ್ಥಿತಿಯಿದ್ದು ಅಮೃತಸರ ಮತ್ತು ವಾಘಾ ಹಾಗೂ ಲಾಹೋರ ಮತ್ತು ದಿಲ್ಲಿಗಳ ನಡುವೆ ರೈಲಿನ ಓಡಾಟಕ್ಕೆ ತಡೆಯಾಯಿತು.

ಕಸುರು—ಮಣ್ಣುಸಹ ಊಷರ ಭೂಮಿಯನ್ನು ಹದಕ್ಕೆ ತರುವುದರಲ್ಲಿ ಬಹಳ ಪ್ರಯೋಜನಕಾರಿಯಾಗುತ್ತದೆ. ಎಕರೆಯೊಂದಕ್ಕೆ ೧೨ ಟನ್ ಹಿಂಡಿಯನ್ನು ಹಾಕುವುದರಿಂದ ಊಷರ ಕ್ಷೇತ್ರಗಳಲ್ಲಿ ಅಕ್ಕಿಯ ಬೆಳೆಗನುಕೂಲವಾಗುವಂತಹ ಹದಕ್ಕೆ ಮಣ್ಣನ್ನು ತರಲಾಗಿದೆ.

—ಡಾ. ಎನ್. ಆರ್. ಧಾರ್

[ಈ ಪ್ರಬಂಧದಲ್ಲಿ ಕೊಡಲಾಗಿರುವ ಸಲಹೆಗಳು ಗಮನಾರ್ಹವಾಗಿವೆ ಮತ್ತು ಆಚರಣಾರ್ಹವಾಗಿವೆ. ಸರಿಯಾಗಿ ಹದಮಾಡಿ ನಮ್ಮ ನೆಲದ ಮಣ್ಣನ್ನು ಬಳಸಿಕೊಂಡರೆ ಆಹಾರದ ಕೊರತೆಯ ಹೆದರಿಕೆಯನ್ನೆಲ್ಲ ದೂರಮಾಡಬಹುದೆಂಬುದರಲ್ಲಿ ನನಗೆ ಸಂದೇಹ ವಿಲ್ಲ.
—ಮೋ. ಕ. ಗಾಂಧಿ]

ಪ್ರಾಪಂಚಿಕ

ನಿನ್ನೆ ಸ್ಕಾಟಿಷ್ ಚರ್ಚ ಕಾಲೇಜಿನ ಮುಖ್ಯೋಪಾಧ್ಯಾಯರಾದ ರೆವರೆಂಡ್ ಕೆಲ್ಲಾಸರು ಗಾಂಧೀಜಿಯನ್ನು ನೋಡಲು ತಮ್ಮ ಕೆಲ ಸಹೋದ್ಯೋಗಿಗಳೊಡನೆ ಬಂದರು. ಚರ್ಚೆಗೆ ತೆಗೆದುಕೊಳ್ಳಲಾದ ಮುಖ್ಯ ಪ್ರಶ್ನೆಯೆಂದರೆ ವಿದ್ಯಾಭ್ಯಾಸ, ಧರ್ಮ ಮತ್ತು ಸರಕಾರ ಇವುಗಳ ಸಂಬಂಧ. ಸರಕಾರವು ನಿಃಸಂದೇಹವಾಗಿ ಪ್ರಾಪಂಚಿಕವಿರಬೇಕೆಂದು ಗಾಂಧೀಜಿಯ ಅಭಿಪ್ರಾಯ. ನಾಗರಿಕನು ರಾಜ್ಯದ ಕಾಯದೆಯನ್ನು ವಿಧೇಯನಾಗಿ ಪಾಲಿಸುವ ವರೆಗೆ ಅವನಿಗೆ ಯಾವ ಅಡ್ಡಿ ಆತಂಕಗಳಿಲ್ಲದೆ ತನ್ನ ಧರ್ಮವನ್ನು ಅನುಸರಿಸುವ ಹಕ್ಕಿರಬೇಕು. ಅಲ್ಲಿ ಧರ್ಮ ಪ್ರಸರಣದ 'ಮಿಶನರಿ' ಪ್ರಯತ್ನಗಳು ತಲೆ ಹಾಕಬಾರದು. ಆದರೆ ಪರರಾಡಳಿತದಲ್ಲಿ ಪಡೆದಂತೆ ಯಾವ ಧರ್ಮಪ್ರಸಾರಕ ಸಂಘವೂ ಈಗ ಸರಕಾರದ ಪ್ರೋತ್ಸಾಹವನ್ನು ಪಡೆಯಲಾರದು.

ಮುಖ್ಯೋಪಾಧ್ಯಾಯ ಕೆಲ್ಲಾಸರೊಡನೆ ಈ ವಿಷಯಗಳನ್ನು ಚರ್ಚಿಸುತ್ತಿದ್ದಾಗ, ನಾವು ಬ್ರಿಟಿಶರ ರಾಜಕೀಯ ವರಿಷ್ಠತೆಯನ್ನು ಕಿತ್ತೊಗೆದರೂ ಸಾಂಸ್ಕೃತಿಕ ಶ್ರೇಷ್ಠತೆಯನ್ನು ಇನ್ನೂ ಕಿತ್ತೆಸೆಯಲು ಶಕ್ತರಾಗಿಲ್ಲವೆಂದು ಗಾಂಧೀಜಿ ಹೇಳಿದರು. ಅವರು ತಮ್ಮ ಸಹಜ ರೀತಿಯಿಂದ,

"ನಾವು ಪರಪ್ರಭುತ್ವವನ್ನು ಕಡೆಗಂಡೆವು, ಆದರೆ ಅದೃಶ್ಯವಾದ ಪರಪ್ರಭಾವವನ್ನು ಕಡೆಗಾಣಿಸಿಲ್ಲ," ಎಂದರು. ತಮ್ಮ ಕನಸಿನ ನವಭಾರತವು ತನ್ನ ಸ್ವಾಭಾವಿಕ ಸನ್ನಿವೇಶಕ್ಕೊಪ್ಪುವಂತೆ ಹೊಸದೊಂದು ಬಾಳಿನ ಅಸ್ತಿವಾರವನ್ನು ಹಾಕಬೇಕೆಂದು ಅವರ ಅಪೇಕ್ಷೆ. ಜಗತ್ತಿನ ಎಲ್ಲ ರಾಜ್ಯಗಳಲ್ಲೂ ಇಂದು ಹಿಂಸೆಯು—ಹೇಳಿಕೊಳ್ಳಲಾದ ಆತ್ಮರಕ್ಷಣೆಗೆಂದೇ ಆಗಲಿ—ಜೀವನದ ಉತ್ತಮ ವಸ್ತುಗಳಿಗೆ ವಿರುದ್ಧವಾದ ಸ್ಥಾನವನ್ನು ಪಡೆದಿದೆ. "ಸಮಾಜದಲ್ಲಿರುವ ಅತ್ಯುತ್ತಮರ ಸಂಘಟನೆ"ಗಾಗಿ ನವಭಾರತವು ತನ್ನನ್ನು ಮುಡಿಪಿಡಬೇಕು; ಮತ್ತು ಇಂದು ...ಟಕೆಗೆ ಕೊಡಲಾದ ಸ್ಥಾನವನ್ನು, ಭ್ರಷ್ಟ... ಅವರೆಲ್ಲಿಳಿಸಿದರೆ ಮಾತ್ರ ಇದು ಸಾಧ್ಯವಾಗುತ್ತದೆ.

...ಯುದ್ಧವನ್ನು ಬೆಳೆಸುವುದರಲ್ಲಿ ಮತ್ತು ...ಂತ್ರಿಬಾಂಬಿನಲ್ಲಿ ಸಂಶೋಧನಾಸಕ್ತರಾಗಿ... ಸ್ವತಂತ್ರ ಹಿಂದುಸ್ತಾನ ಸರಕಾರವು ...ನೋಡಿದರೆ ವಿಜ್ಞಾನಿಗಳೇನು ಮಾಡಬೇಕೆಂದು ...ಪ್ರಕಟ್ಲಸರ ಸಹಶಿಕ್ಷಕನು ಕೇಳಿದನು. ಗಾಂಧೀಜಿ ...ಂದಾಗ ಉತ್ತರವಿತ್ತರು,— 'ವಿಜ್ಞಾನಿಗಳು ...ಲಾಯಭಾಲರಿಗೆ ತಕ್ಕಂತಿದ್ದರೆ ಸಾಯುವ ವರೆಗೆ ...ಭಾವನ್ನು ಪ್ರತಿಭಟಿಸಬೇಕು."

—ಎನ್. ಕೆ. ಬೋಸ್.

(೭ನೇ ಪುಟದಿಂದ)

...ಜಗತ್ತಿನ ಸಂಚಾರಿಗೆ ನಾನು ಹೋಗದಿರುವುದಕ್ಕೆ ...ಗೂಡಿಸುವ ಅದನ್ನು ಅಲಕ್ಷಿಸಿರುವೆನೆಂದು ಹೇಳಲಾಗ... ಮುಖ್ಯಭಾಗವಹಿಸಿದ್ದೇ ನಾನು ಈ ಸಂಬಂಧದಲ್ಲಿ ಹೇಳಬಲ್ಲೆ. ...ರೂ ಈ ಪ್ರಶ್ನೆ ಸಮಯೋಚಿತವಾಗಿದ್ದು ...ಹಿಂದುಸ್ಥಾನದಲ್ಲಿ ಹಲವು ಸಲ ಕೇಳಲ್ಪಟ್ಟಿದೆ. ಈ ಬಗ್ಗೆ ...ಲೇಖಗಳನ್ನು ...ರಾತ್ಮನ ಆದೇಶ ಬರಲಿಲ್ಲ ಮತ್ತು ನನ್ನ ಸಲಹೆ... ಸ್ವಾತಂತ್ರ್ಯ ...ರರೂ ನನಗೆ ಪ್ರೋತ್ಸಾಹನೆ ಕೊಡಲಿಲ್ಲ ...ಬದೇ ನನ್ನ ಉತ್ತರವಾಗಿದೆ.

...ಟಿಹಾಗಾಡಿಯಲ್ಲಿ — ಮೋ. ಕ. ಗಾಂಧಿ
೭—೮—೪೭



ಚಿಕ್ಕ ಕಥೆ

ಖಾದಿಯ ಸೀರೆ

ಶ್ರೀ ಕೃಷ್ಣ ಪಾಟೀಲ ಅವರಿಂದ

೧.

ಹಿಂದುಸ್ತಾನಕ್ಕೆ ಸ್ವರಾಜ್ಯ ಲಭಿಸಿತಂತೆ. ಅಹುದೇ? ಅನುಪಮೆಯು ಕುರುಳುಗಳನ್ನು ತೀಡುತ್ತ ಗಂಡನನ್ನು ಕೇಳಿದಳು.

—ಅಹುದು— ಉಮಾನಾಥ ಫೌಜುದಾರನು ಉದಾಸೀನತೆಯಿಂದ ಉತ್ತರವನ್ನಿತ್ತನು.

—ಹಾಗಾದರೆ ನನ್ನ ಬಯಕೆಯನ್ನು ಪೂರ್ತಿಗೊಳಿಸಬಹುದೇ ?

—ಏನು? ಕಾಂತಿಹೀನ ಮುಖದಿಂದ ಕೇಳಿದನು.

—ಕಳೆದ ಅತ್ಯುಗ್ರ ಚಳವಳಿಯಲ್ಲಿಯೆ ತೆರವಾದ ನಿಮ್ಮ ಮನೆಯನ್ನು ತುಂಬಲು ಬಂದಿರುವೆನು. ಆಗ ಹಿಂದುಸ್ತಾನದ ದೇಶಭಕ್ತರು ಸತ್ವಪರೀಕ್ಷೆಯ ಬೆಂಕಿಯ ಮೇಲೆ ನಡೆಯುತ್ತಿದ್ದರೆಂದು ಕೇಳಿರುವೆ. ನಮ್ಮ ಮನೆಯ ಮುಂದೆಯೇ ನೂರಾರು ನಗರಸಂಕೀರ್ತನೆಗಳು ಹಾದು ಹೋಗಿವೆ. ರಾಷ್ಟ್ರಧ್ವಜವು ಮಾಳಿಗೆಯಷ್ಟು ಎತ್ತರವಾಗಿ ದಾರಿಗುಂಟ ಸಾಗಿದೆ. ನೀವಾದರೂ ಅಷ್ಟೇ ಜನರನ್ನು ಹಿಡಿದು ಶಿಕ್ಷೆಗೆ ಸಲ್ಲಿಸಿರುವಿರಿ. ಅವರ ಉತ್ಸಾಹದಲ್ಲಿ ನಾನು ಪ್ರತ್ಯಕ್ಷವಾಗಿ ಯಾಗಲು ಶಕ್ಯವಿಲ್ಲದಿದ್ದರೂ ಖಾದಿಯ ಒಂದು ಸೀರೆಯನ್ನಾದರೂ ಉಟ್ಟುಕೊಳ್ಳಬೇಕೆಂದಿಚ್ಛಿಸಿದೆ, ಆದರೆ ನಿಮ್ಮ ನವಕರಿ, ನಿಮ್ಮ ಒಲವು ವಿಘ್ನವಾಗಿದ್ದಿತು. ಆದರೆ ಈಗ ಅದೆಲ್ಲ ಭಯವಿಲ್ಲ ತಾನೆ? ಅದಕ್ಕೆ ಒಂದು ಸೀರೆಯನ್ನು ತಂದು ಕೊಡಿರಿ; ಸ್ವರಾಜ್ಯದ ದಿನ ಉಟ್ಟುಕೊಂಡು ನೀವು ಗೌರವ ಸಲ್ಲಿಸುವ ರಾಷ್ಟ್ರಧ್ವಜದ ಸಮಾರಂಭಕ್ಕೆ ಬರಬೇಕೆಂದಿರುವೆ— ಎಂದು ದೀನತೆಯಿಂದ ನುಡಿದು ಉತ್ತರವನ್ನು ನಿರೀಕ್ಷಿಸಹತ್ತಿದಳು. ಉಮಾನಾಥನ ಹೊಟ್ಟೆಯಲ್ಲಿ ಎರಡು ಬಾಯಿಯ ಅಲಗು ಹಾಕಿ ತಿರುಗಾಡಿಸಿದಂತಾಯಿತು. ಹಣೆಯನ್ನು ಛಟ್ಟೆಂದು ಹೊಡೆದುಕೊಂಡು ಮುಖ ತಗ್ಗಿಸಿದನು.

—ಏಕೆ ? ಏನಾಯಿತು? ಹತ್ತಿರ ಸರಿದಳು.

ಉತ್ತರವಿಲ್ಲ. ಆದರೆ ಕಣ್ಣಿಂದ ಧಾರೆಧಾರೆಯಾಗಿ ನೀರು ಸುರಿಯಹತ್ತಿದವು. ಪಾಪ! ಅವಳಿಗೆ ಕಾರಣವೇನು ಗೊತ್ತು? ಆದರೆ ಒಂದು ಪ್ರಬಲವಾದ ಕಾರಣವಿದ್ದಿತು.

೨.

ಕುಲಗೋಡು ಸಣ್ಣ ಹಳ್ಳಿಯಾದರೂ ಚಳವಳಿಯ ಉಗ್ರ ಕೇಂದ್ರವಾಗಿದ್ದಿತು. ವಿಧ್ವಂಸಕ ಚಟುವಟಿಕೆಗಳ ಸಹಾಯದಿಂದ ಸರಕಾರದ ಸುಪ್ರಸಿದ್ಧ ಕಾರ್ಯಕ್ರಮಗಳಿಗೆ ಅಡ್ಡಿಯನ್ನೊಡ್ಡಲು ಊರ ದಕ್ಷಿಣದಿಕ್ಕಿನಲ್ಲಿಯ ಕೇದಗೆಯ ಬನವು ಚರ್ಚೆ ನಿರ್ಣಯದ ನೆಲೆವೀಡಾಗಿದ್ದಿತು. ಮಹಾಲಿಂಗನು ಇವೆಲ್ಲವನ್ನು ಕಟುಗ್ರಶಿಸ್ತಿನಿಂದ ನಡೆಸುತ್ತಿದ್ದನು. ಸರಕಾರವು ಉರುಳುವಂತೆ ಕಂಡು ಬರಹತ್ತಿತು. ಉಮಾನಾಥರು ತನ್ನ ಮುಖ್ಯ ಸ್ಥಳವನ್ನು ಅಲ್ಲಿಯೇ ಮಾಡಿದ್ದರೂ ಸುಳಿವು ಹತ್ತಲಿಲ್ಲ. ಹಗಲನ್ನು ರಾತ್ರಿಯೆಂದು ತಿಳಿದಿದ್ದರೋ, ರಾತ್ರಿಯನ್ನು ಹಗಲೆಂದು ತಿಳಿದಿದ್ದರೊ ಒಂದೂ ಗೊತ್ತಾಗಲಿಲ್ಲ.

ಮಹಾಲಿಂಗನನ್ನು ಹಿಡಿದುಕೊಟ್ಟವರಿಗೆ ದೊಡ್ಡ ಇನಾಮೆಂದು ಸರಕಾರವು ಡಂಗುರ ಸಾರಿತು. ಜನರು ಈ ಮಾತಿಗೆ ನಕ್ಕರೇ ಹೊರತು ಬೆನ್ನು ಹತ್ತಲಿಲ್ಲ.

ಮಹಾಲಿಂಗನ ಕಾರ್ಯಗಳು ಅಬಾಧಿತವಾಗಿ ಜಯ ಸಂಪಾದಿಸಿದವು. ಸ್ವರಾಜ್ಯ ದೊರಕಿದ ಸ್ವಪ್ನಗಳೂ ಬೀಳಹತ್ತಿದವು ಈ ಉಬ್ಬಿನಲ್ಲಿ ಶಿಸ್ತು ಸಡಿಲಿತು. ತಾನೂ ನಿಷ್ಕಾಳಜಿಯವನಾದನು. ಬೇಕುಬೇಡಾದಾಗ ಊರನ್ನು ಪ್ರವೇಶಿಸಹತ್ತಿದನು.

೩.

ಇಂದು ಮಹಾಲಿಂಗನು ಊರಲ್ಲಿರುವನೆಂಬ ಬಿಟ್ಟ ವಾರ್ತೆ. ನಿಜವಾಗಿದ್ದಿತು. ಫೌಜದಾರನು ಊರನ್ನು ಮುತ್ತಿದನು. ಪೋಲೀಸರು ದೀಪಾವಳಿಯಂತೆ ತುಂಬಿದ ಬಂದೂಕುಗಳನ್ನು ಹಿಡಿದು ಸಜ್ಜಾದರು. ಇಂದು ಮಹಾಲಿಂಗನು ಸಾಯಬೇಕು; ಇಲ್ಲವೆ ಸೆರೆಯಾಳಾಗಬೇಕು— ಎರಡೇ ಮಾರ್ಗ.

ಪೋಲೀಸರು ಮನೆಮನೆ ಹೊಕ್ಕರು. ಗಡಿಗೆ-ಮಡಿಕೆಗಳ ಅಡಕಲ್ಲನ್ನು ಉರುಳಾಡಿಸಿದರು. ದನದ ಕೊಟ್ಟಿಗೆಗಳನ್ನು ಸೇರಿ ಹುಲ್ಲು-ಕಣಿಕೆ-ಹೊಟ್ಟುಗಳನ್ನು ತೂರಾಡಿದರು. ದನಗಳು ಕಣ್ಣಿಯನ್ನು ಹರಿದುಕೊಂಡು ಬೀದಿಗೆ ನುಗ್ಗಿದವು. ಮತ್ತು ಕಾಳಿನ ಕಣಜವನ್ನು ಹುಲ್ಲಿನ ಬಣಬೆಯನ್ನು, ಕುರುಳಿನ ಬಾನವನ್ನು ಕೆಳಗೆ ಮೇಲೆ ಮಾಡಿದರು. ಅಲ್ಲದೆ ದೇವರ ಮನೆಯಲ್ಲಿ ಮಂಟಪದ ಕೆಳಗೂ ಲಾಠಿಯನ್ನು ಆಡಿಸದೆ ಬಿಡಲಿಲ್ಲ. ಏನಾದರೇನು ಮಹಾಲಿಂಗನ ಸುಳಿವಿಲ್ಲ! ರೊಚ್ಚಿಗೆದ್ದರು.

ಒಬ್ಬನು ಮಲ್ಲಪ್ಪನ ಮನೆಯನ್ನು ಸೇರಿ— ಮುದುಕಿ ಮಹಾಲಿಂಗನೆಲ್ಲಿ? ಎಂದು ಬೂಟಗಾಲಿನಿಂದ ಭೂಮಿಯನ್ನು ಅಪ್ಪಳಿಸಿ ಕೇಳಿದನು. ಪಾಪ ಮುದುಕಿ— ಸರಕಾರ ಅಂದರೆ ದರಕಾರ ನನಗಿಲ್ಲ. ಎಂದು ಬೀಸುವ ಕಲ್ಲಿನ ಷಡ್ಜಸ್ವರದಲ್ಲಿ ಎತ್ತಿದ ದನಿಯನ್ನು ನಿಲ್ಲಿಸಿ ಬಿಮುರಿಟ್ಟ ಬಾಯಿ, ಮೂಗುಗಳನ್ನು ಅದುಮಿ ನಡುಗಿದಳು.

—ಮಹಾಲಿಂಗನೆಲ್ಲಿ? ಜೋಳದ ಮೊರವನ್ನು ಒದ್ದನು.

—ಗೊತ್ತಿಲ್ಲ ಮಗನೆ!

—ದಿನವೂ ಅವರ ಗುಂಪಿಗೆ ರೊಟ್ಟಿಯನ್ನು ಎಷ್ಟು ಮಾಡಿಕೊಡುವೆ ಹೇಳು; ಇಲ್ಲದಿದ್ದರೆ ಸತ್ತೆ ಎಂದು ತಿಳಿ.

—ಹೌದ ಮಗನ! ಯಮನು ನನ್ನ ಸಾವಿನ ಚೀಟಿಯನ್ನು ಕಳೆದು ಕೊಂಡಿರುವ. ನೀನಾದರು ಹುಡುಕಿ ಕೊಡು ಎಂದಳು.

ಮುದುಕಿಯ ಮಾತು ಎಷ್ಟರ್ಥವಾಯಿತೋ! ಹೊರಗೆ ಬಂದು ಕಟ್ಟೆಯ ಮೇಲೆ ಕೆಮ್ಮುತ್ತ ಕುಳಿತ ಮುದುಕನನ್ನು— ಮಹಾಲಿಂಗನೆಲ್ಲಿ? ಎಂದನು.

—ಯಾವ ಮಹಾಲಿಂಗ? ಕೇಳಿದನು. ಕೆಮ್ಮು ಆರಂಭವಾಯಿತು.

ನಿಮ್ಮೂರ ಪುಢಾರಿ!

—ಆ ಉಡಾಳ ಕೆಂಚಪ್ಪನ ಮಗನೆ! ಕೆಮ್ಮು ತಾರ ಸ್ವರಕ್ಕೆ ಏರಿತು.

—ಹ... ಸಿಟ್ಟು ಕೇಂದ್ರೀಭೂತವಾಗಿದ್ದಿತು.

—ಸಿಕ್ಕರೆ ಫಾಸಿ ಕೊಡು ನಮ್ಮಪ್ಪಾ? ಅವನ ಉರವಣೆ ಬಹಳವಾಗಿದೆ ಕೆಮ್ಮಿನ ಹದಿನೈದನೆಯ ಪುಟಿಕೆಯಿಂದ ಇಳಿಯುತ್ತ ಮೂರಕ್ಕೆ ಬಂದನು.

ಊರಲ್ಲಿ ಒಂದು ಮನೆ ಉಳಿಯತೆಗೆ ಮಾಳಿಗೆ ಮಾಳಿಗೆಗಳನ್ನು ಏರಿ ಜಿಗಿದು ಜಿಗಿದೂ ಹುಡುಕಿದರು. ಆದರೆ ವ್ಯರ್ಥ.

೪.

ಇಂದಿನ ಪರಿಸ್ಥಿತಿಯು ಹೀಗಾಗಬಹುದೆಂದು ಮಹಾಲಿಂಗನು ತಿಳಿದಿರಲಿಲ್ಲ. ಅನೇಕ ಸಾರೆ ಬಂದಿದ್ದನು. ಅಷ್ಟೇ ಸಾರೆ ಸದ್ದಿಲ್ಲದೆ ನುಸುಳಿ ಹೋಗಿದ್ದನು. ತನ್ನ ಗೆಳೆಯರ ಮನೆಯಲ್ಲಿ ಅದೇ ಒಂದಿಷ್ಟು ವಿಶ್ರಮಿಸಿರಬೇಕು. ಪೋಲೀಸರು ಮುತ್ತಿರುವರೆಂದು ತಿಳಿಯಿತು. ಸಂಗಡಿಗರು ಸಿಡಿದ ಎಕ್ಕೆಯ ಕಾಯಿಯಂತೆ ಹಾರಿಹರು. ಮಹಾಲಿಂಗನಿಗೆ ಸಂಕಟಕ್ಕಿಟ್ಟುಕೊಂಡಿತು. ಅಲ್ಲಿ ಅಡಗುವಂತಿರಲಿಲ್ಲ. ಕೋಣೆಯನ್ನು ಬಿಟ್ಟನು. ಎಲ್ಲಿಗೆ? ಗೋಟವಾರಿ ನೆರೆಮನೆಯವರ ಹಿತ್ತಿಲಿಕ್ಕೆ ಜಿಗಿದನು. ಯಜಮಾನನು ಕಂಡು ಕೈಮುಗಿದು. ಬೇರೆ ಕಡೆಗೆ ಹೋಗು ಪ್ರಾರ್ಥಿಸಿದನು.

—ಒಂದು ತಾಸು ಆಶ್ರಯ ಕೊಡು— ಬಾಯಿಬಿಟ್ಟನು.

—ಅಜ್ಜ ಕಟ್ಟಿದ ಮನೆ. ನೀನು ಇಲ್ಲೆ ಸಿಕ್ಕರೆ ಈ ಮನೆ ಹಾಳಾಯಿತೆಂದು ತಿಳಿ; ಕಾಲು ಹಿಡಿಯುವೆ, ಹೋಗು. ಬಂದ ಸುದ್ದಿಯನ್ನು ಹೇಳಲಾರೆ, ಹೋಗು.

ಹೊರಟನು. ನೆರೆಮನೆಯ ಬಣವೆಯಲ್ಲಿ ಅಡಗಿದನು, ಸಮೀಪದಲ್ಲಿಯೆ ಬಂದೂಕು ಹಾರಿತು. ಪೋಲೀಸರು ಇದನ್ನೂ ಹುಡುಕದೆ ಬಿಡರೆಂದು ಕೊಂಡನು. ಕಳ್ಳನ ಹೆಜ್ಜೆ ಕಳ್ಳನೇ ಬಲ್ಲ —ಮತ್ತೊಂದು ಮನೆಗೆ ಹೋದನು. ಆ ಮನೆಯವರು ಹಿತ್ತಿಲಬಾರಿಯನ್ನು ತೋರಿಸಿ ಬಾಗಿಲನ್ನು ಇಕ್ಕಿದರು.

ಅಲ್ಲೊಂದು ಹೊಟ್ಟಿನ ಗೂಡು. ಅವಸರದಿಂದ ಅಲ್ಲಿಗೆ ಹೋದನು. ಆದರೆ ಅವರ ಮಗುಲಿಗೆ ಕಟ್ಟಿದ ಜೇನು ಅಲುಗಾಟಕ್ಕೆ ಗೂಡು ಬಿಟ್ಟು ಎದ್ದವು. ಒಂದೆರಡು ಕೈಗೂ ಮುಖಕ್ಕೂ ಕಡಿದವು. ಅಲ್ಲೇ ಕುಳಿತರೆ ಅವುಗಳ ಕಡಿತಕ್ಕೆ ಸಾಯಬೇಕು. ಅದನ್ನೂ ಬಿಟ್ಟನು.

ಈ ಸಮಯದಲ್ಲಿ ಊರಲ್ಲಿ ತನಗೆ ಯಾರೂ ಆಶ್ರಯ ಕೊಡರೆಂದು ಅರಿತನು. ಇನ್ನಷ್ಟು ಪರೀಕ್ಷಿಸಲು ಸಮಯವೂ ಇರಲಿಲ್ಲ. ತಾನೇ ಸಂರಕ್ಷಿಸಿಕೊಳ್ಳಬೇಕು. ಹೇಗೆ? ವಿಚಾರಕ್ಕೂ ಎಡೆಯಿರಲಿಲ್ಲ. ವಿಚಾರದ ಮುಂದೇ ಕೃತಿಯು ಓಡದೇಕಿದ್ದಿತು. ಜೇನುಹುಳುಗಳ ಕಡಿತದ ನೋವಿನ ಮೇಲೂ ಕೈಯೊರೆದುಕೊಳ್ಳಲು ಅವಕಾಶವಿರಲಿಲ್ಲ. ಪೋಲೀಸರ ಕೈಯಲ್ಲಿ ಅಗಲೆ ಸಿಕ್ಕುವದಕ್ಕಿಂತ ಈಗ ಸಿಕ್ಕುವದು ಮತ್ತೂ ಕೇಡು. ಈ ದುರ್ಧರ ಪ್ರಸಂಗದಿಂದ ಪಾರಾಗಬೇಕಾದುದೇ ಮುಖ್ಯ ಸಂಗತಿ ಇಷ್ಟು ದಿನ ಉಪಕಾರ ಮಾಡಿದವರನ್ನು ಈ ಬೆಂಕಿಯಾಟದಲ್ಲಿ ನಿಲ್ಲಿಸಿ ನೋಡುವದೂ ಸರಿಯೆನಿಸಲಿಲ್ಲ. ದೇವರ ಮೇಲೆ ಮತ್ತು ದೈವದ ಮೇಲೆ ಭಾರ ಹಾಕುವಂತೆಯೂ ಇರಲಿಲ್ಲ. ಏನುಮಾಡಬೇಕು? ಪೋಲೀಸ ಸಿಟ್ಟಿನ ಶಮನಕ್ಕೆ ತನ್ನಲ್ಲಿಯ ಒಂದು ದೇಹ, ಒಂದು ಜೀವ ಸಾಕೆನಿಸದೆಂದೂ ತಿಳಿದಿದ್ದನು. ಎಲ್ಲಿ ಹೋಗಬೇಕು? ಥಟ್ಟನೆ ಒಂದು ವಿಚಾರ ಹೊಳೆಯಿತು. ಎರಡು ಮನೆಯನ್ನು ದಾಟಿ ಉಮಾನಾಥನ ಮನೆ. ಅಲ್ಲಿಯೇ ಅಡಗಿದರೆ ಸರಿ. ಏನಾಗುವದು ಆಗಲಿ...... ಜಿಗಿದನು. ಉಮಾನಾಥನ ಹೆಂಡತಿ ಮಾಲತಿತಾಯಿಯು ಮನೆಯಲ್ಲಿದ್ದಳು. ಹೋಗಿ ಕಾಲು ಹಿಡಿದನು.

—ರಕ್ಷಿಸಿರಿ! ಎಂದು ಅಂಗಲಾಚಿದನು.

—ಯಾರು! ನಡುಗಿದಳು.

—ಮಹಾಲಿಂಗ! ರಕ್ಷಿಸುವ ಹೊಣೆ ನಿಮ್ಮದು ಇದನ್ನು ಎಂದಿಗೂ ಮರೆಯೆನು.

—ಮಹಾಲಿಂಗ! ಬಾಯಿತುಂಬ ಭಯವಿದ್ದಿತು.

—ಅಹುದು. ನಾನೇ! ವಿಧ್ವಂಸಕ ಪುಂಡ. ರಕ್ಷಿಸಿರಿ;

—ಮಹಾಲಿಂಗ ನನ್ನವರೇ ಹಿಡಿಯಬೇಕೆಂದು ಹೊಂಚು ಹಾಕಿರುವರು.

—ಅಹುದು.

—ನಾನು, ಅವರು ಬೇರೆಯಲ್ಲ,

—ಅಹುದು ನೀವಿಬ್ಬರೂ ಒಂದೇ, ಒಂದೇ ಜೀವಿ. ಆದರೆ ನೀವು ನನ್ನನ್ನು ಹಿಡಿದು ಕೊಡಬಹುದು. ಹಿಡಿಯಲಾರಿರಿ ಅಲ್ಲದೆ ಹಿಡಿದು ಕೊಟ್ಟು ಅಪಕೀರ್ತಿಯನ್ನೂ ಅನ್ಯಾಯವನ್ನೂ ಗಳಿಸಲಾರಿರೆಂದು ತಿಳಿದಿರುವೆ.

—ನಿನ್ನನ್ನು ರಕ್ಷಿಸುವದೂ ಅಪಕೀರ್ತಿಯಲ್ಲವೇ?

—ಅಹುದು. ಅದು ಒಬ್ಬಿಬ್ಬರ ಕಣ್ಣಲ್ಲಿ. ಅದೂ ಇಂದೂ ನಾಳಿನ ಮಟ್ಟಿಗೆ. ನಾಡಿನಿಗೆ ಅದರ ಅರ್ಥ ನಿಶ್ಚಿತವಾಗಿ ಹೀಗಾಗಲಾರದು.

—ನನ್ನನ್ನು ಇಂಥ ಸಂಕಟದಲ್ಲಿ ಹಾಕುವದು ಯೋಗ್ಯವೇ?

—ಅಲ್ಲ.

—ಹಾಗಾದರೆ ಮುಂದೇನು?

—ಈ ಹಲಬಾಗಿಲಿನಿಂದ ಹೊರಬೀಳಲೇ?

—ಮಹಾಲಿಂಗ!

—ಹೋಗಲಿ. ಒಂದು ಕೆಲಸಮಾಡಿರಿ.

—ಏನು?

—ನಾನು ಇಲ್ಲಿ ಬಂದಿಲ್ಲವೆಂದು ತಿಳಿಯಿರಿ. ಒಂದು ಮೂಲೆಯಲ್ಲಿ ಕೆಲ ಹೊತ್ತು ಕುಳಿತು ಹೋಗುವೆನು. ನಾನು ಇಲ್ಲಿ ಬಂದ ಬಗ್ಗೆ ಯಾರೂ ನಿಮ್ಮನ್ನು ಕೇಳರು. ನೀವಾಗಿಯೂ ಯಾರಿಗೂ ಹೇಳಬೇಡಿರಿ: ಇಷ್ಟೇ ನಾನು ನಿಮ್ಮಲ್ಲಿ ಬೇಡುವ ಭಿಕ್ಷೆ.

ಮಾಲತಿಗೆ ಏನು ಹೇಳಬೇಕೆಂಬುದು ತಿಳಿಯಲಿಲ್ಲ.

—ಅಕಸ್ಮಾತ್ತಾಗಿ ಸಿಕ್ಕರೆ ಉಪಾಯವಿಲ್ಲ. ನಿಮ್ಮಲ್ಲಿ ಸಿಕ್ಕರೂ ನೀವು ನಿರಪರಾಧಿಗಳೆಂದು ಸಿದ್ಧಮಾಡಿ ಕೊಡುವೆ.

—ಹೇಗೆ?

—ವಿಧ್ವಂಸಕನೆಂಬ ಅಪರಾಧದ ಜೊತೆಗೆ ಕಳವಿನ ಅಪರಾಧವನ್ನೂ ಹೊರುವೆ ನಿಶ್ಚಿತ.

ಮಾಲತಿಯು ಬೆರಗಾಗಿ ನಿಂತಳು.

—ಈ ಮಾತುಗಳನ್ನು ಸಂಕೋಚದಿಂದ ನುಡಿಯುವೆ ತಾಯಿ. ನಾನು ಹೋಗುವೆ. ಆ ಒಳಗಿನ ಕೋಣೆಯಲ್ಲಿ ಕುಳಿತಿರುವೆ. ಹೇಳುತ್ತ ಹೋಗಿಬಿಟ್ಟನು.

ಮಾಲತಿಯು ಅನುಮೋದನದ ಪೂರ್ವದಲ್ಲಿ ಹೊಣೆ ಹೊರಿಸಿ ಅಡಗಿದನು. ಈಕೆ ಉಭಯ ಸಂಕಟಕ್ಕೆ ಸಿಕ್ಕು ತೊಳಲಾಡಿದಳು. ಆದರೆ ಗಂಡನ ಕ್ರೌರ್ಯದ ಚಿತ್ರಗಳು ಕಣ್ಣ ಮುಂದೆ ಸುಳಿಯಹತ್ತಿದವು. ಬಾಲಕರ ಎಳೆದಾಟ, ಮುದುಕರ ಚೀರಾಟ, ಹೆಂಗಸರ ಗೋಳಾಟ, ಮಾನ, ಶೀಲ, ಗೌರವ ಸಂಕೆಯ ಸಾವಸಾವು ಗಳಾಗಿ ತನ್ನ ಮನೆಯ ಮುಂದೆ ಪ್ರದರ್ಶಿಸಹತ್ತಿದವು. ಈ ಪೂರ್ವಸ್ಮರಣೆಯಿಂದ ಮಾಲತಿಯಲ್ಲಿ ಮರುಳ, ದಯೆ, ಕೋಮಲತೆ ಹುಟ್ಟಿ, ಚಿಗುರಿ, ಬಳ್ಳಿಯಾಗಿ ಹಬ್ಬಿ ಮೈತುಂಬಿಕೊಂಡು ಜೀವಕ್ಕೆ ನೆಮ್ಮದಿಯನ್ನು, ತಾಳ್ಮೆಯನ್ನು, ಧೈರ್ಯವನ್ನು ತಂದು ಕೊಡಹತ್ತಿದವು.

೫

ಪೋಲೀಸರು ನೆಲಮುಗಿಲು ಒಂದು ಮಾಡಿ ಹುಡುಕಿದರು. ಮಹಾಲಿಂಗನು ಸಿಕ್ಕಲಿಲ್ಲ. ಅವರ ಸಿಟ್ಟಿನ ಹೊಳೆಯು ಬೇಸಗೆಯಂತೆ ಹರಿಗಡಿಯಿತು. ಉಮಾನಾಥನು ಮನೆಗೆ ಬಂದು ಉಸ್ಸೆಂದು ಕುಳಿತನು.

ಮಾಲತಿಯು ನಿತ್ಯೋಪಚಾರದಂತೆ ಚಹಾ—ತಿನಿಸು ತಂದಿಟ್ಟಳು. ಆದರೆ ಬಾಯಿ ತೆರೆಯಲಿಲ್ಲ.

ಕೊನೆಗೆ—ಚಹಾ ಆರುವದು. ತೆಗೆದುಕೊಳ್ಳಿ ಎಂದಳು.

ಉತ್ತರವಿಲ್ಲ.

—ಇಂದು ನಿಮಗೆ ವಿಶೇಷ ಆಯಾಸವಾಗಿದೆ ಬೇಕು?

—ಅಹುದು. ಕೈಗೆಬಂದ ತುತ್ತು ಬಾಯಿಗೆ ಬೀಳಲಿಲ್ಲ.

ಉತ್ತರವೆಂದು ಯಾವ ಮಾತನ್ನಾಡಿದರೂ ಅಯೋಗ್ಯವೆಂದು ಸುಮ್ಮನಿದ್ದಳು.

—ಊರವರು ರಕ್ಷಿಸಿದರೋ, ಅವನೇ ಪಾರಾದನೋ ತಿಳಿಯದು.

ಮಾಲತಿಯು ಈಗಲೂ ಉತ್ತರ ಕೊಡಲಿಲ್ಲ.

—ಸಿಕ್ಕಿದ್ದರೆ ಅತನ ಒಂದೆರಡು ಎಲವುಗಳು ಪುಡಿಯಾಗುತ್ತಿದ್ದವು. ಕಣ್ಣಲ್ಲಿಯ ಬೆಂಕಿ ಇನ್ನೂ ಆರಿರಲಿಲ್ಲ.

—ಒಂದು ಪ್ರಸಂಗದಿಂದ ಪಾರಾದ. ಇನ್ನೂ ಇಂಥ ಪ್ರಸಂಗಗಳು ನೂರಾರು ದೊರೆಯಬಹುದು. ಮನಸ್ಸಿಗೇಕೆ ಹಚ್ಚಿಕೊಳ್ಳುವಿರಿ.

—ಅವನು ತಪಮಾಡಿ ದೊರೆತಷ್ಟು ಅವನ ಪ್ರಾಣಕ್ಕೆ ಅಪಾಯ.

—ಅವನ ದೈವವು ಹಾಗಿದ್ದರೆ ತಪ್ಪಿಸುವವರಾರು?

ಚಹವನ್ನು ಬಸಿಯಲ್ಲಿ ಸುರುವಿದಳು. ಉಮಾನಾಥನು ಕೈಗೆಯೆತ್ತಿಕೊಂಡು ತುಟಿಗೆ ಹಚ್ಚಬೇಕು—ಅಗಂತುಕನು ಬಂದ ಸಪ್ಪಳಾಯಿತು.

—ನೀನು ಯಾರು? ಫೌಜದಾರನು ಗದರಿಸಿ ಕೇಳಿದನು.

—ತಾಯಿಯವರ ಕಡೆಗೆ ಕೆಲಸವಿದ್ದಿತು. ಗಾಬರಿ ಗಾಬರಿಯಾಗಿ ಉತ್ತರಿಸಿದನು.

—ಮಾಲು, ಏನು ಕೆಲಸ ಕೇಳು?

—ನನಗೂ ತಿಳಿಯದು. ಮುಖವು ಕಪ್ಪಿಟ್ಟಿತು.

—ಇನ್ನೊಮ್ಮೆ ಬರುವೆನು. ಹೊರಟಲನುವಾದನು.

ಮಾಲತಿಯು ಬೆಳ್ಳನೆ ಬೆರಗಾದಳು, ಉಮಾನಾಥನ ಮುಖವು ವಿಲಕ್ಷಣ ಕಳೆಯಿಂದ ತುಂಬಿತು. ಕೈಯೊಳಗಿನ ಬಸಿಯನ್ನು ಕೆಳಗಿಟ್ಟು —ಮಾಲು ಇದೇನು?

—ನೀವು ಚಹ ಕುಡಿಯಿರಿ ಮುಂದೆ ತಿಳಿಯಬಹುದು.

—ಅಂದರೆ!

—ಆಯಾಸ ಪರಿಹರಿಸಿಕೊಂಡು ಸುಖವಾಗಿರಿ. ನಾನು ಕೈಲಾದ ಮಟ್ಟಿಗೆ ತಿಳಿಸುವೆ.

—ಇಲ್ಲ, ಏ! ನೀನಾ ರೋಗಿ? ಗುಡುಗಿದನು.

—(ಮುಂದೆ ಇದೆ)

ಬೆಂಗಳೂರು—ಮೈಸೂರು

ಮದ್ರಾಸ್ ಹಿಂದೂ ಪತ್ರಿಕೆಯ ಬೆಂಗಳೂರು ಕಚೇರಿಯಲ್ಲಿ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಸರ್. ಸಿ. ವಿ. ರಾಮನ್ನರು ಮಹಾತ್ಮಾಗಾಂಧಿಯವರ ಭಾವಚಿತ್ರವನ್ನು ಅನಾವರಣಮಾಡಿದರು. ಹಿಂದೂ ಪತ್ರಿಕೆಯ ಬೆಂಗಳೂರು ಪ್ರತಿನಿಧಿಯಾದ ಶ್ರೀ ಕೆ. ಎಸ್. ರಾಮಸ್ವಾಮಿಯವರು ಸ್ವಾಗತ ಬಯಸಿದರು.

ಬಸವನ ಗುಡಿಯಲ್ಲಿರುವ ಯುವಕ ಸಂಘದ ಆಶ್ರಯದಲ್ಲಿ ತಾ. ೧೮ ರಲ್ಲಿ ಶ್ರೀ ಎಂ. ಎ. ಗೋಪಾಲಸ್ವಾಮಿ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಬಹಿರಂಗಸಭೆ ನಡೆಯಿತು. ಮಳೆ ಬರುವ ಚಿಹ್ನೆಯಿದ್ದರೂ ಸಾವಿರಾರು ಜನರು ಸೇರಿದ್ದರು. ಶ್ರೀಗಳಾದ ಪಿ. ಆರ್. ರಾಮಯ್ಯ, ಕೆ. ಶಾಮರಾಜ ಅಯ್ಯಂಗಾರ್ ಮುಂತಾದವರು ಸ್ವಾತಂತ್ರ್ಯೋತ್ಸವದ ಮಹತ್ವವನ್ನು ವಿವರಿಸಿದರು. ಮತ್ತು ಶ್ರೀ ಕೆ. ಟಿ. ಭಾಷ್ಯಂರವರು ಪ್ರಾಸಂಗಿಕವಾಗಿ ಮೈಸೂರು ಕಾಂಗ್ರೆಸ್ಸು ಸೆಪ್ಟೆಂಬರ ೧ ರಿಂದ ಸತ್ಯಾಗ್ರಹ ಪ್ರಾರಂಭಿಸುವುದು ಎಂದು ಹೇಳಿದರು.

ಸ್ವಾತಂತ್ರ್ಯೋತ್ಸವದ ದಿನ ಯಳಂದೂರಿನಲ್ಲಿ ಎರಡು ಪಂಗಡಗಳವರಿಗೆ ಸ್ವಲ್ಪ ಘರ್ಷಣೆನಡೆಯಿತೆಂದೂ ಆದರೆ ಅದನ್ನು ಅಷ್ಟರಲ್ಲಿಯೇ ತಡೆದು ಶಾಂತಿಸ್ಥಾಪನೆ ಮಾಡಲಾಯಿತೆಂದೂ ತಿಳಿದುಬಂದಿದೆ.

ಮೈಸೂರಿನಲ್ಲಿ ಸಂಪೂರ್ಣ ಜೊಬಾಬ್ದಾರ ಸರಕಾರ ಸ್ಥಾಪಿಸಲು ಸತ್ಯಾಗ್ರಹ ಹೂಡುವುದು ಅನಿವಾರ್ಯವಾಗಿದೆಯೆಂದೂ ಆ ಕಾರ್ಯಕ್ಕಾಗಿ ಜನ, ಧನಸಹಾಯ ಒದಗಿಸಲು ಮೈ. ಕಾಂ. ಕಾರ್ಯಕಾರಿ ಸಮಿತಿಯವರು ದೇಶದಾದ್ಯಂತ ಪ್ರವಾಸ ಕೈಕೊಳ್ಳಲಿದ್ದಾರೆಂದೂ ಮೈ. ಕಾಂ. ಸಹಕಾರ್ಯದರ್ಶಿಗಳಾದ ಶ್ರೀ ಕೆ. ಆರ್. ಮಾಧವರಾಯರು ಹೇಳಿಕೆ ಕೊಟ್ಟಿದ್ದಾರೆ.

ಶಿಡ್ಲಘಟ್ಟದ ಭಕ್ತರ ಹಳ್ಳಿಯಲ್ಲಿ ನೆಹರು ಮೈದಾನದಲ್ಲಿ ರಾಷ್ಟ್ರಧ್ವಜಹಾರಿಸಿ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಯಿತು. ಪ್ರತಿಯೊಬ್ಬರಿಗೂ ಸಿಹಿ ಮಿಠಾಯಿಯನ್ನು ಹಂಚಲಾಯಿತು. ಸಾಯಂಕಾಲ ಬಹಿರಂಗ ಸಭೆಯಾಗಿ ಗಾಂಧಿ, ನೆಹರು, ಸುಭಾಷರ ಭಾವಚಿತ್ರಗಳನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ಸ್ವಾತಂತ್ರ್ಯ ದಿನೋತ್ಸವದ ಸಂದರ್ಭದಲ್ಲಿ ಬೆಂಗಳೂರಿನ ಹೋಲ್ ಸೇಲ್ ಕ್ಲಾತ್ ಮರ್ಚೆಂಟ್ಸ್ ಅಸೋಸಿಯೇಶನ್, ಪೀಸ್ ಗುಡ್ಸ್ ಮರ್ಚೆಂಟ್ಸ್ ಅಸೋಸಿಯೇಶನ್, ಮತ್ತು ಹ್ಯಾಂಡ್ ಲೂಮ್ ಕ್ಲಾತ್ ಮರ್ಚೆಂಟ್ಸ್ ಅಸೋಸಿಯೇಶನ್—ಈ ಸಂಸ್ಥೆಗಳ ಆಶ್ರಯದಲ್ಲಿ ನಗರದ ವಿವಿಧ ಆಸ್ಪತ್ರೆಗಳ ಮತ್ತು ಸೂತಿಕಾಗೃಹಗಳ ರೋಗಿಗಳಿಗೂ ಸೆಂಟ್ರಲ್ ಜೈಲಿನಲ್ಲಿರುವ ಕೈದಿಗಳಿಗೂ ಸಿಹಿ ಹಣ್ಣುಗಳನ್ನು ಹಂಚಲಾಯಿತು.

ಬೆಂಗಳೂರು ಜಿಲ್ಲೆಯ ಬಿಡದಿಯಲ್ಲಿ ಅ. ವಿ. ಶೀ. ಕೇಸರಿ ಬಿ. ಶಿವಮೂರ್ತಿ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಸಂಜೆ ಸಭೆ ಸೇರಿ ಸ್ವಾತಂತ್ರ್ಯ ದಿನಾಚರಣೆಯ ನಿಮಿತ್ತ ಶ್ರೀಗಳಾದ ಧರ್ಮಪಾಲ ಹಾಗೂ ವೀರರಾಜ ಅರಸರ ಭಾಷಣಗಳಾದವು. ಬೆಳಿಗ್ಗೆ ರಾಷ್ಟ್ರಧ್ವಜಾರೋಹಣ ನಡೆದಿತ್ತು.

ಬೆಂಗಳೂರಿನ ದಕ್ಷಿಣ ತಾಲೂಕಿಗೆ ಸೇರಿದ ಸೋಂಪುರದ ಮಾಧ್ಯಮಿಕ ಪಾಠಶಾಲೆಯಲ್ಲಿ ಶ್ರೀ ಎಸ್. ಮುನಿಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯದಿನವು ಆಚರಿಸಲ್ಪಟ್ಟಿತು.

ಬೆಂಗಳೂರು ನಗರದ ನಾನಾ ಭಾಗದಲ್ಲಿ ಕಾಣಿಕರಿಂದ ಸ್ವಾತಂತ್ರ್ಯೋತ್ಸವ ಜರುಗಿತು. ಚಾಮರಾಜ ಪೇಟೆಯಲ್ಲಿರುವ ಶ್ರೀ ಶಾರದಾ ಸ್ತ್ರೀ ಸಮಾಜದಲ್ಲಿ, ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ, ಗಾಂಧೀನಗರ ರೇಟ್ ಪೇಯರ್ ಸಂಘದಲ್ಲಿ, ಅಲಸೂರು ಪೇಟೆಯ ಓರಿಯಂಟಲ್ ಲಿಟರರಿ ಸೋಷಿಯಲ್ ಕ್ಲಬ್ಬಿನಲ್ಲಿ, ಶ್ರೀರಾಮಪುರದ ಕೋಆಪರೇಟಿವ್ ಸೊಸೈಟಿಯಲ್ಲಿ, ಅಪ್ಪಾಜಪ್ಪ ಅಗ್ರಹಾರದಲ್ಲಿ, ಬಸವನಗುಡಿ ಟಪ್ಪಾಲು ಕಟ್ಟೆಯಲ್ಲಿ ಹಾಗೂ ದಂಡಿನ ಬ್ಲಾಕ್ ಪಲ್ಲಿಯಲ್ಲಿ, ಮಂಡಿ ಪೇಟೆಯಲ್ಲಿ, ಮತ್ತು ಕಲಾಮಂದಿರದಲ್ಲಿ ಧ್ವಜಾರೋಹಣ, ಸಿಹಿ ಹಂಚುವಿಕೆ, ಭಾಷಣ, ವಂದೇಮಾತರಂ ಗೀತ, ಸಂಗೀತ ಮುಂತಾದ ನಾನಾ ಕಾರ್ಯಕ್ರಮಗಳು ನಡೆದು ಉತ್ಸವವು ಯಶಸ್ವಿಯಾಗಿ ಆಚರಿಸಲ್ಪಟ್ಟಿತು.

ಭಾರತದ ಇತಿಹಾಸ ಪ್ರಖ್ಯಾತ ಸ್ವಾತಂತ್ರ್ಯ ದಿನಾಚರಣೆಯು ಅವರ್ಣ್ಯವಾದ ಉತ್ಸಾಹದಿಂದ—ಮೈಸೂರು ನಗರದ ಪತ್ರಿಕೋದ್ಯೋಗಿಗಳ ಸಂಘದಲ್ಲಿ, ಬಾರ್ ಅಸೋಸಿಯೇಶನ್ನಿನಲ್ಲಿ, ಕಾಸ್ಮೊ ಪಾಲಿಟನ್ ಕ್ಲಬ್ಬಿನಲ್ಲಿ, ಸುಬ್ಬರಾಯನ ಕೆರೆಯಲ್ಲಿ, ಸಿಟಿಕೋಆಪರೇಟಿವ್ ಬ್ಯಾಂಕಿನಲ್ಲಿ ಮತ್ತು ಅನೇಕ ಶಾಲೆಗಳಲ್ಲಿ ದೇಶಭಕ್ತರ ಚಿತ್ರಗಳ ಮೆರವಣಿಗೆ, ವಾದ್ಯ, ಜಯಕಾರ, ಧ್ವಜಾರೋಹಣ, ಭಾಷಣ, ವಿಮಾನದಿಂದ ಪುಷ್ಪವೃಷ್ಟಿ, ಆರತಿ ಮುಂತಾದ ಹಲವು ವಿಧದ ಕಾರ್ಯಕ್ರಮಗಳಿಂದ ಅತ್ಯಂತ ಉತ್ಸಾಹದಿಂದಲೂ ವಿಜೃಂಭಣೆಯಿಂದಲೂ ನಡೆಯಿತು.

ಮೈಸೂರು ಬೆಂಗಳೂರು ಜಿಲ್ಲೆಗಳ ನಾನಾ ಹಳ್ಳಿ ಪಟ್ಟಣಗಳಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಅಭೂತಪೂರ್ವವಾಗಿ ನಡೆಯಿತು. ಮಂಡ್ಯ, ಯಶವಂತಪುರ, ಮಲ್ಲೇಶ್ವರ ವಿಸ್ತರಣ ಮುಂತಾದ ಕಡೆಗಳಲ್ಲಲ್ಲದೆ ಕೋಲಾರ, ದಣಾಯಕನಪುರ, ಹೂರಳು, ಬೂದನೂರು, ಎಳಗರ ಹಳ್ಳಿ ಮುಂತಾದ ಹಳ್ಳಿಗಳಲ್ಲೂ ವಿಶೇಷೋತ್ಸಾಹದಿಂದ ಉತ್ಸವವು ಆಚರಿಸಲ್ಪಟ್ಟಿತು.

ಬೆಂಗಳೂರಿನ (ದಕ್ಷಿಣ ತಾಲೂಕಿನ) ಸುರಕ್ಕಿ ಗ್ರಾಮದಲ್ಲಿ ಅನ್ನದಾನ, ಮೆರವಣಿಗೆ. ಬಹಿರಂಗ ಸಭೆ, ಭಾಷಣ, ಎತ್ತುಗಳಿಗೆ ಪುರಪ್ರಮುಖರ ಬಹುಮಾನ ಇವುಗಳಿಂದ ಸ್ವಾತಂತ್ರ್ಯ ದಿನಾಚರಣೆ ನಡೆಸಲ್ಪಟ್ಟಿತು.

ಬೆಂಗಳೂರು ನಗರದ ವಿಶ್ವೇಶ್ವರಪುರದಲ್ಲಿರುವ ಶ್ರೀ ರೇಣುಕ ಭವನದ ಗ್ರಂ॥ ಗುರುಸಿದ್ಧಪ್ಪನವರು ತಾ ೭ರಲ್ಲಿ ತಮ್ಮ ೮೫ನೆಯ ವಯಸ್ಸಿನಲ್ಲಿ ನಿಧನ ಹೊಂದಿದರು. ಇವರು ವೀರಶೈವ ಸಮಾಜದಲ್ಲಿ ಗಣ್ಯರಾಗಿದ್ದು ಅನೇಕ ಬಗೆಯಿಂದ ಸಮಾಜಸೇವೆಮಾಡಿ ಸಾರ್ವಜನಿಕರಿಗಾಗಿ ರೇಣುಕಗಿರಿಯಲ್ಲಿ ಭಾವಿ, ಕಟ್ಟಡಗಳ ಕಾರ್ಯ ಕೈಕೊಂಡಿದ್ದರು. ಇವರ ಗಣಾರಾಧನೆ ೧೭ರಲ್ಲಿ ನಡೆಯಿತು.

ಮೈಸೂರು ಸಂಸ್ಥಾನ ಸೈನಿಕರು ತಮ್ಮ ಪ್ರತಿಜ್ಞೆಗನುಗುಣವಾಗಿ ರಾಜಭಕ್ತಿಯಿಂದ ನಡೆದುಕೊಂಡರೆ ಅವರ ಕರ್ತವ್ಯವು ಸ್ಪಷ್ಟವಾಗಿಕಾಣುವುದೆಂದು ಬ್ರಿಟಿಶ ರೆಸಿಡೆಂಟರಾದ ಲೆ. ಕ. ಸರ್ ವಾಲ್ಟರ್ ಕ್ಯಾಂಬಲ್ಲರು ತಾ ೧೩ರಲ್ಲಿ ಅರಮನೆಯ ಪೋಲೋ ಮೈದಾನದಲ್ಲಿ ಏರ್ಪಡಿಸಿದ್ದ ಸೈನ್ಯದ ಪ್ರದರ್ಶನದಲ್ಲಿ ಭಾಷಣಮಾಡುತ್ತ ಹೇಳಿದರು.

ಶ್ರೀ ಟಿ. ಎಸ್. ನಟರಾಜರ ಅಧ್ಯಕ್ಷತೆಯಲ್ಲಿ ಮೈಸೂರು ದೇವರಾಜ ಮಾರುವಕಟ್ಟೆಯ ಮಳಿಗೆ ಬಾಡಿಗೆದಾರರು ಸಭೆ ಸೇರಿ ಬಾಡಿಗೆ ಹೆಚ್ಚಿಸಬೇಕೆಂದು ಇತ್ತೀಚೆಗೆ ಪೌರಸಭೆ ಮಾಡಿರುವ ನಿರ್ಣಯವನ್ನು ಪ್ರತಿಭಟಿಸಿದರು. ಪೌರಸಭೆಯ ಹೊಸ ಅಧ್ಯಕ್ಷರನ್ನು ಕಂಡು ಅವರಲ್ಲಿ ಮನವಿ ಮಾಡಿಕೊಳ್ಳಬೇಕೆಂದೂ ನಂತರ ಮಂತ್ರಿಗಳ ಬಳಿ ಅರಿಕೆ ಮಾಡಿಕೊಳ್ಳಬೇಕೆಂದೂ ಕಡೆಗೂ ಪರಿಹಾರ ದೊರೆಯದಿದ್ದರೆ ೧ತಿಂಗಳು ಬಾಡಿಗೆದಾರರೆಲ್ಲ ಮಳಿಗೆಗಳನ್ನು ಮುಚ್ಚಿ ಮುಷ್ಕರ ಹೂಡಬೇಕೆಂದೂ ತೀರ್ಮಾನಿಸಲಾಯಿತು.

ಭಾರತ ಹೈಕಮಿಶನರಾಗಿದ್ದು ನಿವೃತ್ತರಾದ ಸರ್. ಸ್ವಾಮಿಮುಮಲ್ ರಂಗನಾಥನ್ನರು ತಾ ೧೧ ರಲ್ಲಿ ಬೆಂಗಳೂರಿನ ಸೆಂಟ್ ಜೋಸೆಫ್ ಕಾಲೇಜಿನಲ್ಲಿ ಉಪನ್ಯಾಸಮಾಡುತ್ತ ಭಾರತ ಸ್ವತಂತ್ರವಾದ್ದರ ಬಗ್ಗೆ ನಮಗೆ ಸಂತೋಷವಿದ್ದರೂ ಈ ಬದಲಾವಣೆಯ ಪರಿಣಾಮವನ್ನು ಯುವಕರು ಜಾಗರೂಕತೆಯಿಂದ ಪರಿಶೀಲಿಸಿ ಮುನ್ನಡೆಯಬೇಕೆಂದು ಹೇಳಿದರು.

ಸಂಸ್ಥಾನ ಸಂಗೀತೋಪಾಧ್ಯಾಯರ ಸಂಘದ ಅಧ್ಯಕ್ಷರಾದ ಶ್ರೀ ಕೆ. ಟಿ. ಸುದರ್ಶನೈಯ್ಯಂಗಾರರು ಗೌ. ಕಾರ್ಯದರ್ಶಿಗಳೊಡನೆ ತಾ ೧೧ ರಲ್ಲಿ ವಿದ್ಯಾಸಚಿವರಾದ ಡಾ. ಟಿ. ಸಿ. ಎಂ ರಾಯನ್ನರನ್ನು ಭೆಟ್ಟಿಯಾಗಿ ವೇತನ ಪ್ರಮಾಣದ ಉತ್ಕರ್ಷದ ಬಗ್ಗೆ ಅರಿಕೆಮಾಡಿಕೊಂಡು ಸಹಾನುಭೂತಿ ಪಡೆದುಕೊಂಡು ಬಂದರು.

ಸಂಸ್ಥಾನದ ಎಲ್ಲ ನಾನ್—ಗಜೆಟೆಡ್ ನವಕರರಿಗೂ ೧ ತಿಂಗಳ ಸಂಬಳವನ್ನು ಮುಂಗಡವಾಗಿ ಅಗಸ್ಟ ೧ ರಲ್ಲಿ ಕೊಟ್ಟಂತೆ ಕೊಡಲು ಸರಕಾರ ಅಜ್ಞೆಮಾಡಿದೆ. ಮುಂದೆ ವೇತನ ಪ್ರಮಾಣಗಳ ಪುನರ್ವಿಮರ್ಶೆಯಾಗಿ ಹೆಚ್ಚಿನ ಹಣವನ್ನು ಮೊತ್ತವಾಗಿ ಕೊಡುವಾಗ ಇದನ್ನು ಹಿಡಿದುಕೊಳ್ಳಲಾಗುವುದು.

ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಆಹುತಿಯಾದ ವೀರರಿಗೂ ಮತ್ತು ವೀರರಮಣಿಯರಿಗೂ ಗೌರವ ಸೂಚಿಸಿ ಮೈಸೂರು ದಿವಾನರಾದ ಸರ್ ಅರ್ಕಾಟ್ ರಾಮಸ್ವಾಮಿ ಮುದಲಿಯಾರರು ತಾ ೧೫ ರ ಬೆಳಿಗ್ಗೆ ದಂಡಿನ ಮ್ಯುನಿಸಿಪಲ್ ಕಮಿಶನ್ನರು ಏರ್ಪಡಿಸಿದ್ದ ಉತ್ಸವದಲ್ಲಿ ಭಾಷಣ ಮಾಡಿದರು.

ಬೆಂಗಳೂರು ನಗರ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಚಿಕ್ಕ ಲಾಲ್ ಬಾಗಿನಲ್ಲಿ ತಾ ೧೫ ರಂದು ಸಾವಿರಾರು ಮಂದಿ ಸೇರಿದಾಗ ಲೋಕಸೇವಾಸಕ್ತ ರಾ. ಬ. ಬಿ. ಕೆ. ಗುರುರಾಜಾಚಾರ್ಯರ ಅಧ್ಯಕ್ಷತೆಯಲ್ಲಿ ಶ್ರೀಗಳಾದ ಸಿದ್ದಪ್ಪನಹಳ್ಳಿ ಕೃಷ್ಣಶರ್ಮ, ಕೆ. ಟಿ. ಭಾಷ್ಯಂ ಮುಂತಾದವರು ಭಾಷಣಮಾಡಿ ಭಾರತವೀರರನ್ನು ಕೊಂಡಾಡಿದರು.



ಮುಂಬಯಿ ಶೇರಪೇಟೆ

ಮುಂಬಯಿ ೨೧— ಸ್ವಾತಂತ್ರ್ಯೋತ್ಸವದ ನಂತರ ಮುಂಬಯಿ ಶೇರಪೇಟೆ ಒಳ್ಳೆ ಉತ್ಸಾಹದಿಂದ ಪ್ರಾರಂಭವಾಗಿದೆ. ಕಲಕತ್ತೆಯಿಂದ ಆಶಾದಾಯಕ ಸುದ್ದಿಗಳು ಬಂದದ್ದರಿಂದ ಪೇಟೆ ಸ್ವಲ್ಪ ಏರಿಕೆಯಲ್ಲಿಯೇ ಪ್ರಾರಂಭವಾಯಿತು. ಟಾಟಾ ಡೆಫರ್ಡ ಪಾಲುಗಳು ೧೯೦೫ ರಿಂದ ೧೯೭೬–೪ಕ್ಕೆ ಮುಟ್ಟಿದವು. ಟಾಟಾ ಆರ್ಡಿನರಿ ಪಾಲುಗಳು ಹಿಂದಿನಕ್ಕಿಂತ ಸುಮಾರು ೧೦ ಪಾಯಿಂಟಗಳನ್ನು ಗೆದ್ದು ೩೯೦ ಕ್ಕಿಳಿದವು. ಇಂಡಿಯನ್ ಆಯರ್ನ ಸುಮಾರು ೩೬—೧೪ ಕ್ಕೆ ದೃಢವಾಗಿ ಪ್ರಾರಂಭವಾಯಿತು. ಗಿರಣಿ ಪಾಲುಗಳಲ್ಲಿಯೂ ಸ್ವಲ್ಪ ಏರಿಕೆ ಕಂಡುಬಂದಿತು. ಮುಂಬಯಿ ಡಾಯಿಂಗ ೧೦೫೭—೮ ರ ವರೆಗೆ ಏರಿತು. ಕೋಹಿನೂರು ೫೭೪ ಕ್ಕೇರಿತು. ಫಿನ್ಲೆ ೨೯೧ ರಿಂದ ೨೯೭ ಕ್ಕೇರಿತು. ಸ್ವದೇಶಿ ೫೯೦ ರಿಂದ ೬೧೨ ಕ್ಕೆ ಗೋಕಾಕ ೩೧೨-೮ ರಿಂದ ೩೧೬ಕ್ಕೆ ಏರಿದವು. ಅಸೋಸಿಯೇಟೆಡ್ ಸಿಮೆಂಟ ೧೬೧-೮ ರಿಂದ ೧೬೫-೮ ರ ವರೆಗೇರಿತು. ಬ್ಯಾಂಕುಗಳಲ್ಲಿ ಸೆಂಟ್ರಲ್ ಬ್ಯಾಂಕು ೯೭-೩ ರಿಂದ ೯೯ ರ ವರೆಗೆ, ಇಂಪೀರಿಯಲ್ ಎಫ್. ಸಿ. ೨೧೮೦ ರಿಂದ ೨೨೦೦ ಕ್ಕೆ ರಿಝರ್ವ ಬ್ಯಾಂಕು ೧೧೬-೮ ರಿಂದ ೧೧೭ ಕ್ಕೇರಿದವು.

ಸರಕಾರೀ ಸಾಲಪತ್ರಗಳಲ್ಲಿ ೩·/. (೧೯೪೬) ೧೦೦-೮-೦ ೩॥·/. (೧೯೪೭—೫೦) ೧೦೯-೯-೦ ೩·/. (೧೯೫೭) ೧೦೨-೧೩-೦

ಚಿನ್ನ—ಬೆಳ್ಳಿ

ವಾಯಿದೆ ವ್ಯವಹಾರದಲ್ಲಿಯ ಅಡಚಣೆಗಳಿಂದ ಆಗಾಗ ಪೇಟೆಯಲ್ಲಿ ಸ್ಥಿರತೆ ಉಳಿಯುತಿರಲಿಲ್ಲ. ಅದುದರಿಂದ ಪೇಟೆ ಪ್ರಾರಂಭದ ಕಾಲಕ್ಕೆ ವ್ಯವಹಾರ ಹೆಚ್ಚಿಗೆ ನಡೆಯಲಿಲ್ಲ. ಮುಂದೆ ಯಾದರೂ ಹಲವಾರು ಕಡೆ ಮಾತ್ರ ವ್ಯಾಪಾರ ನಡೆಯಿತು. ವಾಯದೆ ಬಂಗಾರದ ವ್ಯವಹಾರ. ೧೦೯—೪—೦ ಯಿಂದ ಪ್ರಾರಂಭವಾಗಿ ೧೦೯-೧೨-೦ ವರೆಗೇರಿ ೧೦೯-೧೩-೦ ಕ್ಕಿಳಿಯಿತು ವಾಯದೆ ಬೆಳ್ಳಿ ವ್ಯವಹಾರ ೧೭೪-೮-೦ ರಿಂದ ಪ್ರಾರಂಭವಾಗಿ ೧೭೩—೮ ಮತ್ತು ೧೭೩—೧೪ ರಲ್ಲಿ ಸುತ್ತಾಡಿ ೧೭೩—೧೪ ಕ್ಕೆ ನಿಂತಿತು. ಇಂದಿನ ೫ ಗಂಟೆ ಸುಮಾರಿಗೆ ತಯಾರಿ ಮಿಂಟ ಬಂಗಾರ ೧೧೦-೪-೦ ತಯಾರಿ ಗಿನಿ ೭೩—೬—೦ ತಯಾರಿ ಬೆಳ್ಳಿ (೯೯೯) ೧೭೬—೦—೦ ತಯಾರಿ ಬೆಳ್ಳಿ (೯೯೬) ೧೭೪—೮ ಅಧಿಕೃತ ದರವಿದ್ದಿತು.

ಅರಳೆ

ಅರಳೆ ಪೇಟೆಹಾಲ್ಲಿ ಇಂದು ಒಳ್ಳೆ ಸ್ಥೈರ್ಯವಿದ್ದಿತು. ಇಳಿಕೆಯ ಧಾರಣೆಯಿಂದ ವ್ಯವಹಾರ ಪ್ರಾರಂಭವಾಗಿ ದರ ಏರಹತ್ತಿತು. ಮಧ್ಯಾನ್ಹದಲ್ಲಿ ಮಾತ್ರ ಧಾರಣೆ ಮಂದಿಯಾಗಿ ಪೇಟೆ ಮುಚ್ಚಿತು. ಸಪ್ಟೆಂಬರ ವಾಯದಾ ವ್ಯವಹಾರ ೪೩೧·೪-೦ಕ್ಕೆ ನಿಂತಿತು.

ಎಣ್ಣೆ ಕಾಳು

ಶೇಂಗಾ	೧೬೮-೦-೦
ಅಗಸಿ	೩೧-೪-೦
ಅಗಸಿ ಎಣ್ಣೆ	೨೦-೧೪-೦

ಸಾಂಗಲಿ ಪೇಟೆ

ಅರಿಷಣ ಹೇರು	೧೦೦-೧೧೦
ಮೆಣಸಿನಕಾಯಿ ಹೇರು ,,	೧೦೦-೧೫೦
ಶೇಂಗಾ ಖಂಡಿ	೧೨೫—೦—೦

ಹುಬ್ಬಳ್ಳಿ

ಹೊಸ ಜಯವಂತ ಹತ್ತಿ	ನಂ. ೧	೨೭೦-೨೮೦
„	ನಂ. ೨	೨೫೦-೨೬೦
„	ನಂ. ೩	೨೪೦-೨೫೦
ಹಳೇ ಜಯವಂತ ಹತ್ತಿ		೨೮೫-೨೯೫
ಅಪ್ಲಂಡ ಹತ್ತಿ		೨೬೦-೨೭೦
ಜಿನ ಹೊಸದು		೧೭೫-೧೭೮
ಜಿನ ಹಳೇದು		೧೯೦-೧೯೫
ಡಬಲರೋಲ		೧೭೦-೧೮೦
ಸಾಜಿನ		೧೭೦-೧೭೫

ಟೀಕೆಟಿಪ್ಪಣೆ

[೩ ನೇ ಪುಟದಿಂದ]

ಇಲ್ಲದ್ದರಿಂದ ಆಡಳಿತಕ್ಕೆ ಎಷ್ಟೊಂದು ವ್ಯತ್ಯಯವುಂಟಾಯಿತೆಂಬುದು ಅನುಭವದ ಮಾತಾಗಿದೆ. ಕಾಂಗ್ರೆಸ ಮತ್ತು ಮುಸ್ಲಿಂ ಲೀಗ ಪ್ರತಿನಿಧಿಗಳಲ್ಲಿ ಮತ್ಯೈಕ್ಯವಿಲ್ಲದ್ದರಿಂದ ಆಡಳಿತದಲ್ಲಿ ವ್ಯತ್ಯಯವುಂಟಾಗಿತ್ತು. ಇಷ್ಟೇ ಅಲ್ಲ ಒಂದು ಬಗೆಯ ಸ್ಥಗಿತಕ್ಕೆ ಬರುವ ಪರಿಸ್ಥಿತಿಯೂ ಪ್ರಾಪ್ತವಾಗಿತ್ತು. ಅದರೀಗ ಹಿಂದುಸ್ತಾನ ಮತ್ತು ಪಾಕಿಸ್ತಾನಗಳೆಂಬ ಎರಡು ಸ್ವತಂತ್ರ ಸಾಮಂತ ಸರಕಾರಗಳು ಪ್ರಸ್ಥಾಪಿತವಾಗಿದ್ದು ಕಾಂಗ್ರೆಸ-ಲೀಗಗಳಲ್ಲಿ ಒಂದು ಬಗೆಯ ಸಮಾಧಾನದ ಪರಿಸ್ಥಿತಿಯುಂಟಾಗಿದ್ದರಿಂದ ಮತ್ತೆ ಸಮ್ಮಿಶ್ರಮಂತ್ರಿಮಂಡಲಗಳ ಮಾತು ಎದ್ದಿದೆ. ಎರಡೂ ಸಾಮಂತ ಸರಕಾರಗಳಲ್ಲಿ ಸಮ್ಮಿಶ್ರ ಮಂತ್ರಿಮಂಡಳಗಳು ಸ್ಥಾಪಿತವಾದರೆ ಪರಸ್ಪರರಲ್ಲಿ ಹೆಚ್ಚು ಸಂಪರ್ಕ ಬೆಳೆದು ಆಡಳಿತ ಹೆಚ್ಚು ಸುಗಮವಾಗಿ ಸಾಗಬಹುದೆಂದು ತರ್ಕಿಸಲಾಗಿದೆ. ಕಾಂಗ್ರೆಸ್—ಮುಸ್ಲಿಂಲೀಗಗಳ ಧ್ಯೇಯಧೋರಣಗಳಲ್ಲಿ ವಿಶೇಷತಃ ಆಯಾ ಸಾಮಂತ ಸರಕಾರಗಳ ಅಧಿಪತ್ಯದಲ್ಲಿರುವ ಕಾಂಗ್ರೆಸ್—ಲೀಗ ಪ್ರತಿನಿಧಿಗಳ ಧ್ಯೇಯಧೋರಣಗಳಲ್ಲಿ ಒಂದು ಬಗೆಯ ಸಾಮರಸ್ಯವುಂಟಾಗಿದ್ದರೆ ಇಂಥ ಮಂತ್ರಿಮಂಡಳಗಳನ್ನು ಸ್ಥಾಪಿಸಬಹುದು. ಆದರೆ ಸದ್ಯದ ಪರಿಸ್ಥಿತಿಯನ್ನು ವಿಚಾರಿಸಿದರೆ ಈ ಪ್ರಶ್ನೆಗೆ ಇನ್ನೂ ಅನುಕೂಲ ಸಮಯ ಬಂದಿಲ್ಲೆಂದು ಹೇಳಬೇಕಾಗುವುದು. ಮೊನ್ನೆ ಮೊನ್ನಿನ ವರೆಗೆ ಒಂದು ಬಗೆಯಿಂದ ಶತ್ರುಭಾವ ತಳೆದಿದ್ದ ಇವೆರಡೂ ಪಕ್ಷಗಳ ಪ್ರತಿನಿಧಿಗಳು ಮತ್ಯೈಕ್ಯಮಾಡಿಕೊಂಡು ಆಡಳಿತಸೂತ್ರ ನಡೆಸುವದು ಶಕ್ಯ ತೋರುವದಿಲ್ಲ. ಸಿಂಧದಲ್ಲಿ ಅಲ್ಪಸಂಖ್ಯಾಕರ ಹಕ್ಕುಬಾಧ್ಯತೆಗಳ ರಕ್ಷಣೆಯ ಸೋಗು ಹಾಕಿ ಕಾಂಗ್ರೆಸನ್ನು ಕಡೆಗಣಿಸಿ ಪಜಿರಾಣಿಯವರ ನೇತೃತ್ವದಲ್ಲಿ ಸ್ಥಾಪಿತವಾಗಿರುವ ಹಿಂದುಗಳ ಪಕ್ಷಕ್ಕೆ ಅಲ್ಲಿನ ಸರಕಾರ ಮನ್ನಣೆ ಕೊಡುವದೆಂದರೆ ಮತ್ತಷ್ಟು ತೊಡಕನ್ನುಂಟು ಮಾಡಿಕೊಂಡಂತೆಯೆ. ಸಿಂಧ ಸರಕಾರದವರ ಈ ಪ್ರಯತ್ನವನ್ನು ಕಾಂಗ್ರೆಸ್ಸಿಗರು ಈಗಾಗಲೆ ಖಂಡಿಸಿದ್ದಾರೆ. ಸಿಂಧ ಸರಕಾರದವರು ಈ ಬಗ್ಗೆ ವಿಚಾರ ಮಾಡಿ ಸೂಕ್ತ ಮಾರ್ಗವನ್ನನುಸರಿಸುವದು ಅವಶ್ಯವಾಗಿದೆ. ಪ್ರಾಂತದ ನಿಜವಾದ ಮುಂದಾಳುಗಳಾರು ಎಂಬದನ್ನು ತಿಳಿದುಕೊಂಡು ಅವರಿಗೆ ಪ್ರಾಶಸ್ತ್ಯ ಕೊಡುವದು ಕ್ರಮಪ್ರಾಪ್ತ. ಅಲ್ಪಸಂಖ್ಯಾಕರ ಹಕ್ಕು ರಕ್ಷಿಸಿದ್ದೇವೆಂದು ಆತ್ಮಪ್ರೌಢಿಯನ್ನು ಕೊಚ್ಚಿಕೊಳ್ಳಲು ಅವ್ಯಾಪಾರೇಷು ವ್ಯಾಪಾರ ಮಾಡುವದರಿಂದ ಪರಿಸ್ಥಿತಿ ಮತ್ತಷ್ಟು ಕೆಡುವ ಸಂಭವವಿದೆ. ಅದುದರಿಂದ ಅನುಕೂಲ ಕಾಲ ಬರುವ ವರೆಗೆ ಸಮ್ಮಿಶ್ರ ಮಂತ್ರಿಮಂಡಳಗಳ ವಿಚಾರವನ್ನು ಬಿಟ್ಟುಗೊಡುವದೆ ಒಳಿತು.

ಸ್ವಾತಂತ್ರ್ಯೋತ್ಸವ ಕುಂದಾಪುರದಲ್ಲಿ

ತಾ ೧೫—೮—೪೭ ನೇ ದಿವಸ ಬಿಜೂರು, ಬವಲಾಡಿ, ಮಕ್ಕಿ ದೇವಸ್ಥಾನಗಳಲ್ಲಿ ಬೆಳಿಗ್ಗೆ ಗ್ರಾಮಸ್ಥರ ಭಜನೆ, ಪೂಜೆ, ಪ್ರಾರ್ಥನೆಗಳೂ ಸಾಯಂಕಾಲ ಪಟೇಲ್ ಶ್ರೀ ಮಾಧವ ಹೆಬ್ಬಾರರ ನೇತೃತ್ವದಲ್ಲಿ ಊರಜನರ ಮಹಾಸಭೆ ನೆರೆದು ಸ್ವಾತಂತ್ರ್ಯವೆಂದರೇನು? ಅದು ಸಿಕ್ಕಿದ್ದರಿಂದ ಆಗುವ ಪ್ರಯೋಜನವೇನು? ಸ್ವಾತಂತ್ರ್ಯ ದಿನವನ್ನು ಯಾಕೆ ಆಚರಿಸಬೇಕು? ಎಂಬ ವಿಷಯದಲ್ಲಿ ಶ್ರೀ. ವೇ. ಮೊಗೇರಿರಾಮಪ್ಪ ಅಡಿಗಳೂ ಶ್ರೀ ಮಾಧವ ಹೆಬ್ಬಾರರೂ ಮಾತನಾಡಿದರು. ೧೯೩೧ ರಿಂದ ಸ್ವಾತಂತ್ರ್ಯ ಚಳವಳಿಯಲ್ಲಿ ಈ ಪ್ರಾಂತಕ್ಕೆ ಅಗ್ರೇಸರರಾಗಿ ನಿಸ್ವಾರ್ಥ ಸೇವೆಯಿಂದದುಡಿದು ಕಳೆದ ಮೇ ತಿಂಗಳಲ್ಲಿ ಸ್ವರ್ಗಸ್ಥರಾದ ಈ ಗ್ರಾಮದ ಶ್ರೀ. ಬಿ. ಸೂರಪ್ಪ ಹೆಬ್ಬಾರರ ಆತ್ಮಕ್ಕೆ ಚಿರಶಾಂತಿಬಯಸಿ ೧ ನಿಮಿಷ ನೆರೆದ ಸಭಿಕರು ಮೌನಪ್ರಾರ್ಥನೆಮಾಡಿದ ಬಳಿಕ ಉಪಹಾರದೊಂದಿಗೆ ಸಭೆಯು ಕೊನೆಗಂಡಿತು.

ಸುಗ್ಗನಹಳ್ಳಿ (ಬೆ. ಜಿಲ್ಲೆ)ಯಲ್ಲಿ ಶ್ರೀ ಶಿವಮೂರ್ತಿ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯೋತ್ಸವ ಜರುಗಿತು.

Reg No. B 3148

LICENCE No. 3
Licenced to Post without Prepayment

KARMAVEER 25-8-47

ಭವಿಷ್ಯ

ಜ್ಯೋತಿಷಿ:-ಕೃಷ್ಣಶಾಸ್ತ್ರಿ ಭಡೆ, ಭವಿಷ್ಯಕಥನ ಆಫೀಸ ಖಡೇಬಜಾರ ಬೆಳಗಾವಿ

ಅಗಸ್ಟ ೨೫ ರಿಂದ ೩೧ ರ ವರೆಗೆ

ಮೇಷ

ಪ್ರಕೃತಿಗೆ ಸ್ವಲ್ಪ ಕ್ಲೇಶ. ಮನಸ್ಸಂತೋಷ ಅತ್ಯಂತ ಪ್ರಸನ್ನತೆಯಲ್ಲಿ. ಸ್ತ್ರೀ ಸುಖ ಉತ್ತಮ. ಆದರೆ ಕುಹಕ ಮತ್ತು ತಲೆತಿರುಕ ಆಪ್ತರಿಂದ ಬಹಳ ತೊಂದರೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಲಾಭಕ್ಕಿಂತ ಹೆಚ್ಚು ಅನುಕೂಲ. ಏನೇನೋ ಕೆಲಸದಲ್ಲಿ ಸಾಹಸಮಾಡುವ ದುರ್ಬುದ್ಧಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಸಿಕ್ಕುವ ಯಶಸ್ಸು ಬಹಳ ಸಂಕುಚಿತ. ಮಿತ್ರರು ಕೊಟ್ಟ ಮಾತಿನ ಬಗ್ಗೆ ಮೋಸದಲ್ಲಿ ಕೆಡಹುವ ಪ್ರಯತ್ನ. ಸ್ವಪ್ನ ಭಯಸೂಚಕ. ಪ್ರವಾಸ ಮತ್ತು ಭೆಟ್ಟಿಪತ್ರವ್ಯವಹಾರಕ್ಕಿಂತ ಅನುಕೂಲ. ಅಶ್ವಿನಿಯು ಕೊನೆಯ ೨ ಮತ್ತು ಭರಣಿಯು ಮೊದಲನೆ ೨ ಚರಣಗಳಿಗೆತೊಂದರೆ ಯಿಂದಲೆ ಕಡಮೆ. ತಾ. ೨೬, ೨೭, ೨೮, ೨೯ ಅನುಕೂಲ.

ವೃಷಭ

ಪ್ರಕೃತಿ ಅನುಕೂಲ. ಸ್ತ್ರೀ ಮತ್ತು ಮಕ್ಕಳ ಆರೋಗ್ಯವೂ ಅನುಕೂಲ. ಆದರೆ ಒಬ್ಬರೊಬ್ಬರ ಮೇಲೆ ಬೇರೆ ಬೇರೆ ಸಂಶಯದಿಂದ ಎಲ್ಲರ ತಲೆಯೂ ತಿರುಗಿ ಒಬ್ಬರೊಬ್ಬರನ್ನು ಎಂದೋ ಏನೋ ನೋಡುವ ವಿಪರೀತ ಯೋಗ. ಅಲ್ಲದೆ ಇದನ್ನು ಬೆಳೆಸುವತ್ತ ಮಿತ್ರರ ಉಪದ್ವ್ಯಾಪ ಬಹಳ. ಉದ್ಯೋಗದಲ್ಲಿ ಪ್ರಗತಿ ಸಾಧಾರಣ ಅನುಕೂಲ. ಆದರೆ ಪ್ರತಿಷ್ಠೆ ಮತ್ತು ಲಾಭ ಬಹಳ ಕಡಮೆ. ಆದರೆ ಸ್ಥಾವರದಲ್ಲಿ ಸ್ವಲ್ಪ ಅನುಕೂಲ ಮಾತುಗಳು ತಾವಾಗಿಯೆ ಆಗುವ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರತಿಕೂಲತೆ. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಅನುಕೂಲ. ಕೃತ್ತಿಕೆಯು ಕೊನೆಯ ೩ ಮತ್ತು ರೋಹಿಣಿಯು ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೨೮, ೨೯ ೩೦ ಅನುಕೂಲ.

ಮಿಥುನ

ನಿಮ್ಮ ಪ್ರಕೃತಿಗೆ ಕಷ್ಟ ಇಲ್ಲವೆ ಪಿತ್ತದಿಂದ ಸ್ವಲ್ಪ ಕ್ಲೇಶ ಆದರೆ ಹೆಂಡತಿ ಮತ್ತು ಮಕ್ಕಳ ಆರೋಗ್ಯ ಚೆನ್ನಾಗಿ ಉಳಿದು ಪ್ರಾಪಂಚಿಕ ಸುಖವು ಮನಸ್ಸಿನಂತೆ. ಆದರೆ ನೆರೆಯುವರು ಇಲ್ಲವೆ ಆಪ್ತರು ಹಳೇ ಜಗಳವನ್ನು ಬೇಕಂತಲೆ ಕೆದರಿ ತೆಗೆಯುವ ಸಂಭವ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಅನುಕೂಲ. ಆದರೆ ಅದಕ್ಕಾಗಿ ಪರಾವಲಂಬನದ ತೊಂದರೆ ಸ್ವಲ್ಪ ಸಹಿಸುವ ಸರತಿ. ಆದರೆ ದ್ರವ್ಯ ಲಾಭ ಉತ್ತಮ ಮನಸ್ಸಿನಂತೆ. ಕೆಲಸದಲ್ಲಿ ವೆಚ್ಚ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಹೆಚ್ಚು ಅನುಕೂಲ. ಆರಿದ್ರೆಯು ಕೊನೆಯ ೨ ಮತ್ತು ಪುನರ್ವಸುವಿನ ಮೊದಲನೆ ೨ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೨೬, ೨೭, ೩೧ ಅನುಕೂಲ.

ಕರ್ಕ

ನಿಮ್ಮ ಮತ್ತು ಹೆಂಡತಿಯ ಆರೋಗ್ಯ ಉತ್ತಮ. ಆದರೆ ಮಕ್ಕಳಲ್ಲಿ ಒಬ್ಬರಿಗ ಕ್ಲೇಶ. ಆದರೆ ಒಬ್ಬರು ಏನೇನೋ ಉಪದ್ವ್ಯಾಪ ಮಾಡುವದರಿಂದ ಜನರಲ್ಲಿ ಮುಲಾಜಕಿತ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಪ್ರಿಯ ಜನರ ಭೆಟ್ಟಿ ಸಂದರ್ಶನ. ಉದ್ಯೋಗದಲ್ಲಿ ಲಾಭ ಅನುಕೂಲ. ಪ್ರಗತಿ ಸಾಧಾರಣ ಆದರೆ ಪ್ರತಿಷ್ಠೆ ಬಹಳ ಕಡಮೆ. ಅನೇಕರೊಡನೆ ತಿಕ್ಕಾಟದ ಪ್ರಸಂಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು ಮಿತ್ರ ಸುಖ ಅನುಕೂಲ. ದೈವಿಕ ಕೃತ್ಯದಲ್ಲಿ ಮನೋಭಂಗ. ಭೆಟ್ಟಿಯು ಕೆಲಸ ಬಹಳ ಕೆಡಿಸು, ಪ್ರವಾಸ ಸ್ವಲ್ಪ ಕಷ್ಟದ್ದು ಆದರೆ ಪತ್ರವ್ಯವಹಾರ ಉತ್ತಮ. ಪುಷ್ಯದ ಕೊನೆಯ ೩ ಮತ್ತು ಆಶ್ಲೇಷಾದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೫, ೨೮, ೨೯, ೩೦ ಅನುಕೂಲ.

ಸಿಂಹ

ನಿಮ್ಮ ಪ್ರಕೃತಿ ಅನುಕೂಲ ಆದರೆ ಹೆಂಡತಿ ಮತ್ತು ಮಕ್ಕಳಿಗೆ ಅಲ್ಪಸ್ವಲ್ಪ ಕಾಯಿಲೆ. ಪ್ರತಿಯೊಬ್ಬರು ನಿಮ್ಮ ಅಭಿಪ್ರಾಯವನ್ನು ಅಲ್ಲಗಳೆಯುವ ಉದ್ದಾಮತನ ತೋರಿಸುವದು. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಮಾನ್ಯವೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅತಿಉತ್ತಮ. ಆದರೆ ನಿರರ್ಥಕ ವೆಚ್ಚ ಬಹಳ. ವಾದದಲ್ಲಿ ಸ್ಪರ್ಧೆಯಲ್ಲಿ ಪ್ರತಿಕೂಲ. ಮಿತ್ರ ಸುಖ ಅನುಕೂಲ. ಆಪ್ತರಲ್ಲಿ ಬಹಳ ಮತ್ಸರ. ಪ್ರವಾಸಾದಿ ಕೆಲಸ ಅನುಕೂಲ. ಮಘಾದ ಕೊನೆಯ ೩ ಮತ್ತು ಪೂರ್ವಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೨೬, ೨೭, ೩೧ ಅನುಕೂಲ.

ಕನ್ಯಾ

ನಿಮ್ಮ ಪ್ರಕೃತಿ ಅನುಕೂಲವೆ, ಆದರೆ ಹೆಂಡತಿಯದು ಸಾಧಾರಣ ಕೆಡುವದು. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಕಿಂಡರೆಯುದೆ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಕ್ರಮಕ್ರಮೇಣ ಹೋಗುವದು. ಲಾಭಕ್ಕಿಂತ ವೆಚ್ಚ ಹೆಚ್ಚು. ಆದರೆ ಅದರಲ್ಲಿಯು ಹೇತು ಬಹಳ ಪುಷ್ಟಿಗೆ ಸಾಧ್ಯ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಬಂಧು ವರ್ಗದವರಲ್ಲಿ ವೈಮನಸ್ಸು. ಪ್ರವಾಸಾದಿ ಕೆಲಸ ತೊಂದರೆಯುದು. ಉತ್ತರಾದ ಕೊನೆಯ ೩ ಮತ್ತು ಹಸ್ತಾದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೫, ೨೮, ೨೯ ಅನುಕೂಲ.

ತುಲಾ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಉತ್ತಮ. ಉಳಿದುಉಭಯತರಲ್ಲಿ ಒಳ್ಳೇ ಪ್ರೇಮ ಮತ್ತು ಮತೈಕ್ಯ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣವೆ. ಮಕ್ಕಳಿಂದ ಬಹಳ ಅಪ್ರಿಯ ವರ್ತನೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ದೃಷ್ಟಿ ಹತ್ತುವಷ್ಟು ಉತ್ತಮ. ಸಮಾಜದಲ್ಲಿ ವಿಶೇಷ ಆದರೆ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು ಇಲ್ಲವೆ ಪೂರ್ಣ ಅನುಕೂಲತೆ. ಮಿತ್ರಸುಖ ಉತ್ತಮ, ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಆದರೆ ಸ್ವಾತಿಯು ಕೊನೆಯ ೩ ಮತ್ತು ವಿಶಾಖಾದ ಮೊದಲನೆ ೨ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೨೬, ೨೭, ೩೧ ಉತ್ತಮ.

ವೃಶ್ಚಿಕ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಸಾಧಾರಣ. ಆದರೆ ಸ್ತ್ರೀ ಸುಖ ಮನಸ್ಸಿನಂತೆ. ಬಂಧುವರ್ಗದವರಿಂದ ಕೆಲ ಹಿತದ ಮಾತುಗಳು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೆ ವೆಚ್ಚವೂ ವಿಪರೀತ. ವಿಚಾರದಲ್ಲಿ ಯಾವಾಗಲೂ ಬದಲಾವಣೆಯಾಗುತ್ತ ನಡೆದಿರುವದರಿಂದ ಮಹತ್ವದ ಮಾತುಗಳಲ್ಲಿ ನಿಷ್ಕಾರಣ ಗೊಂದಲ. ಮಿತ್ರತ್ವದಲ್ಲಿ ಸ್ವಲ್ಪ ವಿರೋಧ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ತೊಂದರೆ ಮತ್ತು ವೆಚ್ಚ ಬಹಳ. ಆದರೆ ಯಶಾಪಯಶಸ್ಸು ಅನಿರ್ಣೀತ. ಪ್ರವಾಸ ತೊಂದರೆಯದು. ಭೆಟ್ಟಿ ಮತ್ತು ಪತ್ರವ್ಯವಹಾರ ಉತ್ತಮ. ಅನುರಾಧೆಯ ಕೊನೆಯ ೨ ಮತ್ತು ಜ್ಯೇಷ್ಠಾದ ಮೊದಲನೆಯ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೬, ೨೭, ೨೮, ೨೯ ಅನುಕೂಲ.

ಧನು

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಆದರೆ ಪ್ರಾಪಂಚಿಕ ಕಲಹ ಮಿತಿ ಮೀರಿ ಬೆಳೆವದು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅತಿ ಉತ್ತಮ. ಸತ್ಕೃತ್ಯಗಳಲ್ಲಿ ಬಹಳ ವೆಚ್ಚ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪೂರ್ಣ ಅನುಕೂಲತೆ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ, ಮೂಲಾದ ಕೊನೆಯ ೨ ಮತ್ತು ಪೂರ್ವಾಷಾಢಾದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೬, ೨೭, ೨೮, ೩೧ ಅನುಕೂಲ.

ಮಕರ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಸಾಧಾರಣ. ಬಹಳ ಕೆಲಸಗಳಲ್ಲಿ ಮನಸ್ಸಿನ ವಿರುದ್ಧ ವೆಚ್ಚ ಮಾಡುವ ಮತ್ತು ವರ್ತಿಸುವ ಪ್ರಸಂಗ. ಉದ್ಯೋಗದಲ್ಲಿ ಪ್ರತಿಷ್ಠೆ ಅನುಕೂಲ ಆದರೆ ಪ್ರಗತಿ ಬಹಳ ಮಂದವಾಗಿ ಲಾಭಕ್ಕಿಂತ ಹಾನಿಯ ಅಂಜಿಕೆ ಹೆಚ್ಚು. ಮಕ್ಕಳು ನಿರರ್ಥಕ ಉಪದ್ವ್ಯಾಪ ನಡೆಸುವರು. ಮತ್ತು ಸ್ವತಃದ ಅಪಮಾನ ಮಾಡುವ ಅಂಜಿಕೆಯೂ ಇದೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶಾಬ್ದಿಕ ಯಶಸ್ಸು ಬಹಳ. ಆದರೆ ಪ್ರತ್ಯಕ್ಷ ಲಾಭ ಬಹಳ ಕಡಮೆ. ಮಿತ್ರತ್ವದಲ್ಲಿ ವಿರೋಧ. ಪ್ರವಾಸಾದಿ ಕೆಲಸ ವಿಪರೀತ ತೊಂದರೆಯದು. ಉತ್ತರಾಷಾಢಾದ ಕೊನೆಯ ೩ ಮತ್ತು ಶ್ರವಣಾದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೫, ೩೦, ೩೧ ಅನುಕೂಲ.

ಕುಂಭ

ಪ್ರಕೃತಿ ನಿಮ್ಮದು ಸಾಧಾರಣವೆ. ಆದರೆ ಸ್ತ್ರೀ ಸುಖ ಉತ್ತಮ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೆ ವೆಚ್ಚವೂ ಭಾರದ್ದು. ನಿಷ್ಕಾರಣವಾಗಿಸಂಶಯ ಪಟ್ಟುಕೊಳ್ಳುವದರಿಂದ ವಿಶ್ವಾಸದಲ್ಲಿರುವವರ ಮನಸ್ಸನ್ನು ನೋಯಿಸುವ ಯೋಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು. ಮಿತ್ರರಿಗೆ ಕ್ಲೇಶ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಶತತಾರಿಕೆಯ ಕೊನೆಯ ೨ ಮತ್ತು ಪೂರ್ವಾಭಾದ್ರಪದದ ಮೊದಲನೆ ೨ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೨೬, ೨೭, ೩೧ ಅನುಕೂಲ.

ಮೀನ

ಪ್ರಕೃತಿ ಸ್ವಲ್ಪ ಅನುಕೂಲ. ಆದರೆ ಅನೇಕ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ. ಬಂಧುವರ್ಗದವರಲ್ಲಿ ಕ್ಲೇಶ. ಉದ್ಯೋಗದಲ್ಲಿ ಲಾಭ ಉತ್ತಮ. ಆದರೆ ಪ್ರಗತಿ ಮತ್ತು ಪ್ರತಿಷ್ಠೆ ಕಡಮೆ. ಪರಸ್ತ್ರೀ ಬಗ್ಗೆ ಪಾಪಬುದ್ಧಿ. ಪ್ರವಾಸ ಮತ್ತು ಪತ್ರವ್ಯವಹಾರ ತೊಂದರೆಯದು. ಆದರೆ ಭೆಟ್ಟಿ ಅನುಕೂಲ. ಉತ್ತರಾಭಾದ್ರಪದದ ಕೊನೆಯ ೩ ಮತ್ತು ರೇವತಿಯ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೬, ೨೭, ೨೮, ೨೯ ಅನುಕೂಲ.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ-ಕರ್ನಾಟಕ ಮುದ್ರಣಾಲಯದಲ್ಲಿ 'ಲೋಕಶಿಕ್ಷಣ ಟ್ರಸ್ಟ'ದ ಪರವಾಗಿ ಹ. ರಾ. ಪುರೋಹಿತರಿಂದ ಮುದ್ರಿತವಾಗಿ ಪ್ರಕಟವಾಯಿತು.

ಚಿಕ್ಕ ಕತೆ

(೧೫ನೇ ಪುಟದಿಂದ)

—ನೀನು ಹೋಗು. ಕೈಕಾಲು ಬೀಳುವೆ. ಒಂದಿಷ್ಟು ಸಮಾಧಾನ ಹೊಂದಿರಿ. ನಾನು ತಿಳಿಸಬಹುದು.

—ಇಲ್ಲ. ಕೇಳುವದಿಲ್ಲ. ನೀನು ಯಾರು?

—ಕೈಕಾಲುಬೀಳುವೆ. ಸೆರಗೊಡ್ಡುವೆ. ಸಮಾಧಾನ ಹೊಂದಿರಿ. ಎಂದು ಕಣ್ಣಲ್ಲಿ ನೀರು ತಂದು ಕಾಲುಹಿಡಿದಳು.

ಆ ಒರಟ ಪೋಲೀಸ ಅಧಿಕಾರಿಗೆ ತಾಳ್ಮೆ, ದಯೆ ಎಲ್ಲಿಯದು. ಓಡಿಹೋಗಿ ಅವನನ್ನು ಎಳೆದು—ಏನು ಕೆಲಸವಿದ್ದಿತು? ಬೊಗಳು!

—ಪಾಪ! ಅವನು ನಡುಗಿದನು.

—ಹೇಳು! ಮನೆಬಿರಿಯುವಂತೆ ಕೂಗಿದನು.

ಮಾಲತಿಯು ಕಣ್ಣೊರಸಿಕೊಂಡು, ಧೈರ್ಯವನ್ನವಲಂಬಿಸಿ—ಹೂ. ಹೇಳು ಎಂದು ನುಡಿದಳು.

ಆಗಂತುಕನು ತನ್ನ ಅಚಾತುರ್ಯಕ್ಕೆ ಮರುಗಿ, ಹಳಹಳಿಸುತ್ತ, ಅಂಜುತ್ತ, ಕಂಪಿಸುತ್ತ—ಮಾಲತಿ ತಾಯಿಯವರಿಗೆ ಮುಟ್ಟಿಸಲಿಕ್ಕೆ ಮಹಾಲಿಂಗಪ್ಪನವರಿಂದ ಈ ಸೀರೆ, ಈ ಸೌಭಾಗ್ಯವಸ್ತುಗಳು ಉಡುಗೊರೆಯಾಗಿ ಬಂದಿವೆ. ಆದೂ ಈ ನಿರ್ಭಾಗ್ಯನ ಪಾಲಿಗೆ ಬಂದಿದೆ—ಎಂದು ಅವನು ನುಡಿದು ಅವುಗಳನ್ನು ಇಟ್ಟನು.

—ಇನ್ನು ನೀನು ಹೋಗು. ಎಂದು ಮಾಲತಿ ಎಂದಳು. ಮಾತಿನಲ್ಲಿ ಒಂದು ತೀಕ್ಷ್ಣ ನಿಶ್ಚಿತ ಸಂಕಲ್ಪವಿದ್ದಿತು.

ಉಮಾನಾಥನು ಬೆಂಕಿ, ಹೊಗೆ, ಉರಿಗಳನ್ನು ಕಣ್ಣು, ಮೂಗು, ಬಾಯಿಗಳಿಂದ ಉಗುಳುವವರಂತೆ.

—ಯಾವ ಮಹಾಲಿಂಗ! ಎಂದು ಗುಡುಗಿದನು,

—ನೀನು ಹೋಗು. ಎಲ್ಲ ನಾನು ಹೇಳುವೆ, ಎಂದು ಆಗಂತುಕನನ್ನು ಕಳಿಸಿದಳು. ಉಮಾನಾಥನು ಪಂಜರದೊಳಗಿನ ಹುಲಿಯಂತೆ ಚಡಪಡಿಸುತ್ತಿದ್ದನು.

—ನೀವು ಕುಳಿತು ಕೊಳ್ಳಿರಿ. ನಾನು ಎಲ್ಲ ಹೇಳುವೆ, ಒಂದಿಷ್ಟು ತಾಳ್ಮೆಯುಳ್ಳವರಾದರೆ ಕಾರ್ಯವು ಸಂತೋಷಪ್ರದವಾಗಿ ಮುಗಿಯಬಹುದು.

—ತಾಳ್ಮೆ! ತಾಳ್ಮೆ!! ರೋಮ ರೋಮದಲ್ಲಿ ಜ್ವಾಲೆಯಾಡುತ್ತಿದೆ. ಹೇಳು ಪಾಪಿ ಏನಾಯಿತು ಹೇಳು. ಉಮಾನಾಥನಿಗೆ ಕೂಡುವದು, ನಿಲ್ಲುವದು, ಓಡಾಡುವದು, ಉಸಿರಿಡುವದು ಸಹ ಕಠಿಣವೆನಿಸಹತ್ತಿತು. ಉನ್ಮತ್ತ ಚೈತನ್ಯ ಶಕ್ತಿಯ ಒತ್ತಡ ಅಧಿಕವಾಯಿತು.

ಮಾಲತಿಯು ಎಲ್ಲವನ್ನು ಹೇಳಿದಳು. ನನ್ನ ಉಪಕಾರಕ್ಕೆ ಇದು ಉಡುಗೊರೆ ಇರಬೇಕು ಎಂದಳು.

—ಚಾಂಡಾಲಿನಿ. ನೀನು ಯಾರನ್ನು ರಕ್ಷಿಸಿದೆ. ಗುಡುಗಿನ ಸರವನ್ನೇ ತೂರಿದನು.

—ಒಬ್ಬ ಅಸಹಾಯನನ್ನು—ಶಾಂತತೆಯಿಂದ ನುಡಿದಳು.

—ಅವನು ರಾಷ್ಟ್ರದ್ರೋಹಿ ಎಂಬುದನ್ನು ಅರಿಯೆಯಾ?

—ನನಗೆ ಹಾಗೆ ಕಂಡುಬರಲಿಲ್ಲ.

—ನೀನು ನನ್ನ ಹೆಂಡತಿ.

—ಅಹುದು. ಪುರುಷಮೂಲವಾದ ಅಳುಕಿನಿಂದ ಕುಪಿತಳು.

—ಅಂದ ಮೇಲೆ ರಾಷ್ಟ್ರಘಾತಕನಲ್ಲವೇ?

—ಅಲ್ಲ. ನೀವೊಬ್ಬರು ಸರಕಾರದ ಗುಲಾಮರು ನಾನಲ್ಲ,

—ಏನೆಂದೆ?

—ಅದೇ ಮಾತು ನಿಜವಾದುದು.

—ಆ ಸರಕಾರದ ಗುಲಾಮನ ಮನೆಯಲ್ಲಿರುವೆ. ಅವನನ್ನವನ್ನೇ ತಿನ್ನುವೆ, ಉಡುವೆ ತೊಡುವೆ.

—ಹಾಗೆ ತಿಳಿದಿದ್ದರೆ. ನಿಮ್ಮಂತೆ ನನಗೂ ಅಪಕೀರ್ತಿ ತಟ್ಟಬಹುದಿದ್ದಿತು. ನಾನು ನಿಮ್ಮ ಹೆಂಡತಿಯೆಂದು, ಆ ಧರ್ಮಕ್ಕೆ ಹೊಂದಿಕೊಂಡು ಇರುವೆ.

—ಪಾಪಿ, ಅವನ ಮೇಲೆ ಇಷ್ಟು ಅಭಿಮಾನ?

—ಅಭಿಮಾನವೇನಿಲ್ಲ. ಅಸಹಾಯನಿಗೆ ಸಹಾಯಮಾಡಿದೆ.

—ವ್ಯಭಿಚಾರಿಣಿ......

—ಪೋಲೀಸರ ಬಾಯಿಗೆ ಇನ್ನೇನಾದರೂ ಹೆಸರಿಟ್ಟು ಕರೆದರೆ ಸುಳ್ಳಾಗದು.

—ವ್ಯಭಿಚಾರಣಿ, ತಿರುಗಿ ನುಡಿಯುವೆಯಾ? ಎಂದು ಹುಲಿಯಂತೆ ಜಿಗಿದು ಬಂದನು.

ಮಾಲತಿಯು ಎರಡು ಹೆಜ್ಜೆ ಹಿಂದೆ ಸರಿದು ನೀವು ಏತಕ್ಕೆ ತವಕಗೊಂಡು ಬರುವಿರೋ ಅದಕ್ಕೇ ನಾನು ಸಿದ್ಧಳಾಗಿರುವೆ. ಅಲ್ಲಿ ಕುಳಿತು ಆಜ್ಞಾಪಿಸಿರಿ.

ಭೂಕಂಪದಿಂದ ನೆಲವದುರಿ ಕೆಲ ನಿಮಿಷ ಶಾಂತವಾದಂತಾಯಿತು.

—ಏನುವಿಚಾರಿಸುತ್ತಿರುವಿರಿ? ಕೇಳಿದಳು.

—ನೀನಾಗಿ ಸಾಯುವಿಯೋ, ನಾನಾಗಿ ಕೊಲ್ಲಬೇಕೋ ವಿಚಾರಿಸುತ್ತಿರುವೆ.

—ನಾನಾಗಿ ಸಾಯುವೆ. ಹೆಚ್ಚು 'ವಿಚಾರಿಸಿ' ತಲೆಕೆಡಿಸಿಕೊಳ್ಳಬೇಡಿರಿ. ಎದೆಗೆ ಕಲ್ಲು ಒಗೆದಂತೆ ಆಡುವ ಮಾತಿನ ಅರ್ಥವೇನು?

—ಯಾರ ಎದೆಗೆ ಎಂಥ ಎಂಥ ಕಲ್ಲು ಬಡಿದಿವೆ, ಎಂಬುದನು ನಾನು ಬಲ್ಲೆ. ಅತ್ತಿತ ನೋಡಿದಳು.

—ಹೂ ಸಾಯುವೆಯೊ, ಕೊಲ್ಲಬೇಕೊ?

—ಒಂದು ಮಾತು. ನಿಮ್ಮ ಈ ರಾಜ್ಯನಿಷ್ಠೆಯ ಅರ್ಥ ನಾಳೆ ಏನಾಗಬಹುದೋ ಯಾರು ಬಲ್ಲರು? ಈ ನನ್ನ ಕಾರ್ಯ ಅಂಥ ದುರ್ಧರ ಪ್ರಸಂಗದಲ್ಲಿ ಸಹಕಾರಿಯಾಗಿ ನನ್ನ ಮಾಂಗಲ್ಯ ರಕ್ಷಣೆಗೆ ನೆರವಾಗುವಂತಿದ್ದರೆ ನಾನು ವ್ಯರ್ಥವಾಗಿ ಹೋಗಗೊಡಬಾರದೆಂದು ಮಾಡಿದೆ. ನೀವೂ ಚೆನ್ನಾಗಿ ಬದುಕಬೇಕೆಂದಿದ್ದರೆ ಇದನ್ನು ಮರೆಯಬೇಡಿರಿ. ನಿಮ್ಮ ನೂರು ಅಪರಾಧಕ್ಕೆ ಇದೊಂದೇ ರಕ್ಷಾಮಂತ್ರವಾಗಿ ಕಾಪಿಡುವದು. ಇನ್ನು ನಿಮ್ಮ ಅಪ್ಪಣೆ...... ಎಂದು ಗಂಡನ ಪಿಸ್ತೂಲು ಹಿಡಿದುಕೊಂಡು ನಿಂತಳು. ಉಮಾನಾಥನು ತ್ರಿಕರಣದಿಂದಲೂ ಅವಮಾನಿತನಾಗಿ ಹಾಗೆಯೇ ಬುಸುಗುಟ್ಟುತ್ತಿದ್ದನು.

—ನಿಮ್ಮ ಅಪ್ಪಣೆ...... ಧಂ ಎಂಬ ಸಪ್ಪಳದಿಂದ ಕೋಣೆಯೆಲ್ಲ ಹೊಗೆಯಿಂದ ತುಂಬಿತು.

ಉಮಾನಾಥನ ಕಿವಿಯಲ್ಲಿ ಸ್ಮೃತಿ ಚಿತ್ರ ಪ್ರತಿಧ್ವನಿಯು ಮರುಕೊಳಿಸಿದಂತಾಗಿ 'ಮಾಲೂ!' ಎಂದು ಚೀರಿದನು. ಅನುಪಮೆಯು ಹತ್ತಿರ ಹೋಗಿ ಗಂಡನನ್ನು ಹಿಡಿದುಕೊಂಡು— ಏನಾಯಿತು? ಎಂದು ಕೇಳಿದಳು.

ಕೆಲ ನಿಮಿಷದ ಮೇಲೆ ಎಚ್ಚೆತ್ತು ತನ್ನ ದುರ್ಬಲತೆಗಾಗಿ ಮರುಗಿದನು. ಅನುಪಮೆಗೆ ಮಾಲತಿಯ ಕತೆಯೆಲ್ಲ ತಿಳಿಯದು; ತಿಳಿಸುವಂತೆಯೂ ಇರಲಿಲ್ಲ. ಅವಳನ್ನು ಸಮಾಧಾಯಿಸುವಂತೆ— ನಿನ್ನ ಸವತಿಯ ಸ್ಮರಣೆಯಿಂದ ಒಮ್ಮೊಮ್ಮೆ ಹೀಗಾಗುವದು ಗಾಬರಿಯಾದೆಯಾ?

—ಅಹುದು.

ಅವಳ ಗದ್ದ ತುಟಿ ಹಿಡಿದು, ಕುರುಳು ತೀಡುತ್ತ— ಗಾಬರಿಯಾಗಬೇಡ. ನೀನು ನನ್ನ ಹೃದಯವನ್ನು ವ್ಯಾಪಿಸಿದೆ ಎಂದರೆ ಎಲ್ಲ ಮರೆಯಾಗುವದು. ಹೋಗಲಿ, ನಿನಗೆ ಖಾದಿಯ ಸೀರೆ ಬೇಕಲ್ಲವೆ?

—ಹ...

ಎದ್ದು ಕೋಣೆಗೆ ಹೋಗಿ ಉಡುಗೊರೆಯ ಸೀರೆಯನ್ನು ತಂದು— ಉಟ್ಟುಕೊಂಡುಬಾ.

—ಎಂದು ತಂದಿರುವಿರಿ?

—ಉಟ್ಟುಕೊಂಡು ಬಾ. ಅದರಲ್ಲಿಯ ಪ್ರತಿಯೊಂದು ಅಡ್ಡ—ಉದ್ದ ಎಳೆಯು ಉತ್ತರವನ್ನು ಹೇಳುವದು. ಖಾದಿಯ ಸೀರೆಯಲ್ಲಿ ಅಂಥ ಮಾಹಾತ್ಮ್ಯೆಯು ಇರುವದು. ಎಂದು ಆಗ್ರಹದಿಂದ ಕಳಿಸಿದನು. ಅನುಪಮೆಯು ಹೋದಳು.

ಉಮಾನಾಥನು ಮುಖಕ್ಕೆ ಅರಿವೆಯನ್ನು ಹಾಕಿಕೊಂಡು ಕುರ್ಚಿಯ ಮೇಲೆ ಬಿದ್ದನು.